# ಪ್ರಗತಿವಾದ

**ವಾಸುದೇವ ಕಾಣೆಮಾರ್**

ಪ್ರಗತಿಯೆಂದರೆ ಪುರೋಗತಿ, ಅರ್ಥಾತ್ ಮುಂದಕ್ಕೆ ನಡೆಯುವುದು ಎಂಬ ಅರ್ಥದಲ್ಲಿ ಅದಕ್ಕೊಂದು ಮಾರ್ಗದರ್ಶನವಿದೆ. ನೇರವಾಗಿ ಉತ್ತಮಿಕೆಗೆ ಮುಂಬರಿಯುವುದು ಎಂಬುದು ಅದರ ಸಾಮಾನ್ಯವಾದ ಕಲ್ಪಿತಾರ್ಥ. ಪ್ರಗತಿಯು ನೇರವಾಗಿ ಎಂದರೆ ಸರಳರೇಖೆಯಲ್ಲೇ ಮುಂಬರಿಯಬೇಕೆಂದಿಲ್ಲ. ಎಷ್ಟೋ ವೇಳೆ ಸಾಧ್ಯವಾದಷ್ಟು ನೇರವಾಗಿ ಮುನ್ನಡೆವುದೇ ಪ್ರಗತಿಗಮನ ಎಂದೆನಿಸುತ್ತದೆ. ಉದ್ದೇಶ ಅಥವಾ ದಿಕ್ಕುದೆಸೆ ಇಲ್ಲದೆ ಅಲೆದಾಡುವುದು ಪ್ರಗತಿಗಾಮಿಗಳಿಗೆ ಇಷ್ಟವಾದುದಲ್ಲ. ಪ್ರಗತಿಗೊಂದು ಸಂಕಲ್ಪವಿದೆ, ಮೊದಲ ಹೆಜ್ಜೆ ಸರಿಯಾಗಿರಬೇಕಿದೆ (ಪ್ರಸ್ತಾವ) ಮತ್ತು ಸಾಧನಾಕ್ರಮವಿದೆ (ಪ್ರಸ್ಥಾನ) ಹಾಗೂ ಸಮಾರೋಪವಿರುತ್ತದೆ (ಪ್ರಸ್ಥಾಪನ)

ಉತ್ತಮಗತಿಯು ಮೇಲಿನ ದೃಷ್ಟಿಯಲ್ಲಿ ಪ್ರಗತಿಯೇ. ಆ ಉತ್ತಮಿಕೆಯು ಬರೇ ವ್ಯಾವಹಾರಿಕವಲ್ಲದೆ ನೈತಿಕವಾದರೇ ಚೆನ್ನ.

ಪ್ರಗತಿಯ ಅಂಶಗಳನ್ನು ಆಯ್ದುಕೊಳ್ಳುವುದೆಂದರೆ ಒಂದು ವಿಶಿಷ್ಟ ಮಿತಿಯ ಆವರಣದೊಳಗೆ ಇದ್ದುದರಲ್ಲಿ 'ಉತ್ತಮ ಮೌಲ್ಯ'ಗಳನ್ನು ಹೊಂದುವುದು. ಒಂದು ಸಂದರ್ಭದಲ್ಲಿ ಕಾಲದೇಶ ಸಾಮರ್ಥ್ಯ ಸನ್ನಿವೇಶಗಳ ಮಿತಿಗಳಿರುತ್ತವೆ. ಇದನ್ನು ವಿವೇಚನೆಯಿಂದ ಮತ್ತು ಸಾಧ್ಯವಾದಷ್ಟು ಬೇಗನೆ ಆಯ್ಕೆ ಮಾಡಿಕೊಳ್ಳಬೇಕು. ಇನ್ನು ಉತ್ತಮ ಮೌಲ್ಯಗಳೆಂದರೆ ಯಾವುದು ಎಂಬ ಪ್ರಶ್ನೆಯಿದೆ. ಮೌಲ್ಯಗಳು ಇಂದಿನ ಸಮಾಜದಲ್ಲಿ ಏಕಮುಖವಾಗಿರದೆ ಅನೇಕ ಸ್ಥಿತವಾಗಿವೆ. ನಮ್ಮ ಜೀವನಕ್ರಮದಲ್ಲಿ ಸಾಂಪ್ರದಾಯಿಕ ಮೌಲ್ಯಗಳಿಗೆ ಬೆಲೆಕೊಡುವವರು ಅದನ್ನು ಸುಲಭವಾಗಿ ಆಯ್ದುಕೊಳ್ಳುವರು. ಆಧುನಿಕತೆ ಅಥವಾ ಸಾರ್ವಜನಿಕರ ರೂಢಿಗಳಿಗೆ ವಶರಾದರೂ ಬೇರೆ ಮೌಲ್ಯಗಳನ್ನು ಆಯ್ದುಕೊಳ್ಳುವುದುಂಟು. ಇಲ್ಲೆಲ್ಲ ನಮಗೆ ಸಮಾಜ ಶಾಸ್ತ್ರ, ರಾಜಕಾರಣ, ಅರ್ಥಶಾಸ್ತ್ರ, ವ್ಯವಹಾರ, ಧರ್ಮಶಾಸ್ತ್ರ ಮುಂತಾದ ಅನೇಕ ವಿಷಯಗಳಲ್ಲಿ ಎಷ್ಟು ಅನುಭವವಿದೆಯೆಂಬುದೇ ಸಾಕಷ್ಟು ಸರಿಯಾದ ಮೌಲ್ಯಗಳನ್ನು ನಿರ್ಧರಿಸಲಿಕ್ಕೆ ಸಹಾಯವಾಗುತ್ತವೆ. ಏನಿದ್ದರೂ ಒಮ್ಮೆ ಆಯ್ಕೆ ಮಾಡಿಕೊಂಡ ಮೇಲೆ ಪ್ರಗತಿಯ ಇತಿಮಿತಿಗಳನ್ನು ನಾವೇ ಕಟ್ಟಿಕೊಂಡು ಬೆಳೆಯಬೇಕು. ಏನಾದರೂ ಪ್ರಯೋಜನವಾದೀತು. ಮತ್ತೆ ಉತ್ತಮ ಆದರ್ಶ ಧ್ಯೇಯಗಳಿಗಾಗಿ ಗತಿಯನ್ನು ಬದಲಿಸಬೇಕಾಗುವುದಾದರೆ ಹಾಗೆಯೇ ಮಾಡಬೇಕು. ಪ್ರಗತಿ ವಿಷಯದಲ್ಲಿ ನಮ್ಮ ಕಲ್ಪನೆ ಮುಖ್ಯವಲ್ಲ. ವಾಸ್ತವಿಕತೆಯು ಮುಖ್ಯ ಹಾಗೂ ಸುಧಾರಿಸಿಕೊಂಡು ಹೋಗುವ ಪ್ರವೃತ್ತಿಯೂ ಮುಖ್ಯ. ಒಂದು ಯೋಜಿತ ರೀತಿಯಲ್ಲಿ ಬದಲಾವಣೆಗಾಗಿ ಹಾತೊರೆಯುವಾಗ ಉತ್ತಮರಿಗೆ ಮಾತ್ರ ಪ್ರಗತಿ ಸಾಧಿಸೀತು. ಹೀನರಿಗಲ್ಲ.

ಬಿ. ಪಿ. ಎಲ್. ಎದುರು, ರಥಬೀದಿ, ಮಂಗಳೂರು

ಆದರೆ ಇದ್ದಲ್ಲೇ ಇದ್ದುಕೊಂಡು ತಟಸ್ಥರಾದವರಿಗೆ ಪ್ರಗತಿ ಕಾಣಿಸದು. ಎಷ್ಟೋ ಸಲ ಅಂಥವರು ಪಳೆಯುಳಿಕೆಗಳಾಗಿ ನಿಸ್ಸಾರವಾಗಿ ಕಾಣಿಸಿಕೊಂಡಾರು.

ಸಮುದ್ರಮಥನದಲ್ಲಿ ವಿಷವು ಎದ್ದ ಮೇಲೆ ಅದನ್ನು ಶಿವಶಕ್ತಿಯು ಸದೆಬಡಿದ ಮೇಲೆ ಅಮೃತ ಸತ್ವವು ಹುಟ್ಟಿದಂತೆ ನಾವು ಮಾಡುವ ಸತ್ಕಾರ್ಯದಲ್ಲಿ ಚಿಂತನಮಥನವಾಗಿ ಕೆಡುಕನ್ನು ಕಳೆದು ಮತ್ತೆ ಒಳಿತನ್ನು ಸಾಧಿಸಲು ಹೋದಾಗಲೇ ಪ್ರಗತಿಯು ಸಾಧ್ಯ. ಆದರೆ ಅಂತರ್ಮುಖತೆಯ ಈ ಪ್ರಗತಿ ಸಾಧನದಲ್ಲಿ ಹೆಚ್ಚಿರಬೇಕೆಂಬುದು ಯೋಗ್ಯ ಅಭಿಪ್ರಾಯವಾಗದು. ಆಚರಣೆಗೆ ಹೆಚ್ಚಿಗೆ ಬೆಲೆ.

ಶಾಸ್ತ್ರೀಯ ವಿಜ್ಞಾನದ ಬಾಹ್ಯಾವಕಾಶಗಳ ಅನುಕೂಲತೆಗಳು ನಮಗೆ ಹೆಚ್ಚು ಹೆಚ್ಚಾಗಿ ಒದಗಿರಬೇಕು. ಹೆಚ್ಚು ಬಾಹ್ಯ ವಿಕಾಸವಾದಂತೆ ಆಂತರಿಕ ಅರಸಿಕತೆಯು ನಾಶವಾಗುವುದು.

ಒಮ್ಮೆ ಒಬ್ಬ ಕಾಲೇಜು ವಿದ್ಯಾರ್ಥಿಯನ್ನು ಇನ್ನೊಬ್ಬನು 'ನೀನು ಜೀವನದಲ್ಲಿ ಏನಾಗಬಯಸುವೆ?' ಎಂದು ಕೇಳಿದಾಗ ಆ ವಿದ್ಯಾರ್ಥಿಯು ತಬ್ಬಿಬ್ಬಾಗುವ ಪ್ರಶ್ನೆಯಾಯಿತಂತೆ. ಅದುವರೆಗೆ ಅಭ್ಯಾಸ ಮಾಡಿದ ಯಾವ ವಿದ್ಯೆಗಳೂ ತನ್ನನ್ನು ಯಾವ ಉದ್ಯೋಗಕ್ಕೆ ತಳ್ಳಲಿರುವುವೆಂದು ತಿಳಿಯದೆ ಹೋದ ಆ ವಿದ್ಯಾರ್ಥಿಯು 'ನಾನು ಈ ಕುರಿತು ಗಂಭೀರವಾಗಿ ಯೋಚಿಸಿದ್ದಿಲ್ಲ. ಇನ್ನು ಮುಂದೆ ಚಿಂತಿಸಿ ನಿರ್ಧಾರ ಮಾಡುವೆ' ಎಂದನಂತೆ. ಮತ್ತೆ ಧೈರ್ಯದಲ್ಲಿ ಮುನ್ನುಗ್ಗಿ ಜೀವನೋಪಕಾರ್ಯಕ್ಕೆ ಒಂದು ಕಾಮಗಾರಿಕೆ ಗುತ್ತಿಗೆದಾರನಾಗಿ ನೋಂದಾಯಿಸಿ ನಿಷ್ಠೆಯಿಂದ ದುಡಿಯಲಾರಂಭಿಸಿದ್ದು ಕ್ರಮೇಣ ಒಬ್ಬ ತಕ್ಕ ಮಟ್ಟಿನ ದೊಡ್ಡ ಕಂಟ್ರಾಕ್ಟರ್ ಎನ್ನುವಷ್ಟರ ಮಟ್ಟಿಗೆ ಬೆಳೆದು ಸುಖವಾಗಿ ತಳವೂರಿ ನಿಂತು ಜೀವನ ನಡೆಸಿದನಂತೆ. ಇಲ್ಲಿ ಆ ಪ್ರಗತಿಯು ವಿಶಿಷ್ಟವಾದ ಸಾಧನೆಯಿಂದಲೇ ಆಯಿತು ಎಂಬುದು ಸ್ಪಷ್ಟ.

ಮೇಲಿನ ನಿದರ್ಶನವನ್ನು ನೋಡಿದರೆ ಆ ವಿದ್ಯಾರ್ಥಿಯು ಪೂರ್ವದಲ್ಲಿ ವಿಜ್ಞಾನ ಶಾಸ್ತ್ರವನ್ನೋ, ಇನ್ನಾವುದನ್ನೋ ಅಭ್ಯಸಿಸಿದ್ದಿರಬಹುದಾದರೂ ಸಾಧನಾರಂಗಕ್ಕೆ ಇಳಿದ ಮೇಲೆ ಆ ವಿದ್ಯೆಗಳ ಹೆಚ್ಚಿನ ಬಳಕೆಯಾಗದೆ ಹೋಗಬಹುದು. ಅದೇ ವಿದ್ಯಾರ್ಥಿಯು ಬೇರೇನೇ ಆದ ಒಂದು ವಕೀಲಿ ವೃತ್ತಿಗೆ ಮತ್ತೆ ಅಭ್ಯಾಸಕ್ಕೆ ಹೋಗಬಹುದು ಅಥವಾ ವಿದ್ಯಾಭ್ಯಾಸದಿಂದ ದಾರಿಕಾಣದೆ ಕ್ಷೇತ್ರ ವ್ಯವಹಾರದಲ್ಲಿ ಕಂಗಾಲಾಗಿ ನಿಷ್ಕ್ರಿಯ ಅಥವಾ ಅಸಮರ್ಥನೆನ್ನಿಸಬಹುದು. ಅವನು ಪ್ರಗತಿ ಹೊಂದಬೇಕಾದರೆ ಬೇಕಾಗಿರುವುದು ಸಂಕಲ್ಪ ಮತ್ತು ಸಿದ್ಧಿಗಳು, ಅಷ್ಟೇ. ಆ ಮೂರೂ ಏಕಮುಖವಾಗಿರಬೇಕು.

ಧಾರ್ಮಿಕ ಪ್ರಗತಿ ಎಂದರೇನು? ಲೋಕ ಕಲ್ಯಾಣವು ಆದರ್ಶವಾಗಿ ಪರಿಣಮಿಸಿ ಸಿದ್ಧಿಸಿದರೆ ಅದೇ ಸದ್ಧರ್ಮಕ್ಕೆ ಮತ್ತು ಧಾರ್ಮಿಕ ಮಾರ್ಗಕ್ಕೆ ಪ್ರಗತಿಕಾರಿ. ತಮಗೆ ಹೊಳೆದುದೇ ಸತ್ಯವೆಂಬ, ಶಿವಸುಂದರವೆಂದು ನಂಬುವ ಮತ್ತು ತಪ್ಪು ಹಿಡಿದ ಹಾದಿಗೆ ಹೋಗದೆ, ಗುರುಹಿರಿಯರನ್ನು ಗಮನಿಸಿಕೊಂಡಿದ್ದೇ ಎಲ್ಲ ರೀತಿಯಲ್ಲೂ ವಿಕಾಸಗೊಳ್ಳಲು ಶಾಸ್ತ್ರೀಯ

ಮೌಲ್ಯಾಧರಿತವನ್ನಾಗಿ ಮಾಡಲು ಪ್ರಯತ್ನಿಸುವ ಅಭ್ಯಾಸವೇ ಪ್ರಗತಿ ಸಾಧನೆ. ಇದಕ್ಕೆ ಶುದ್ಧಾಂತಃಕರಣವಾಗಿ ನಿರ್ಮಲ ವಾತಾವರಣದಲ್ಲಿ ಶಾಶ್ವತ ಮೌಲ್ಯಗಳನ್ನು ಪರೀಕ್ಷಿಸಬೇಕಿದೆ.

ಮನುಷ್ಯನು ಬುದ್ಧಿವಂತಿಕೆ ಮತ್ತು ಕಾರ್ಯಕುಶಲತೆಯಿಂದ ತನ್ನ ಸ್ಥಿತಿಯಲ್ಲಿ ಆನಂದ, ಸಂಪದ ಮತ್ತು ಕಾರ್ಯಯಶ ಪಡೆಯುವಲ್ಲಿ ಹಾಗೂ ನೈತಿಕತೆಯ ಬದುಕಿನಲ್ಲಿ ಹೆಚ್ಚು ಸಭ್ಯತೆ ಮತ್ತು ಸಂತೃಪ್ತಿ ಪಡೆಯುವುಕ್ಕೆ ಸಾಗಿರುವಾಗ ಆತನ ಪರಿವರ್ತನೆಯು ಪ್ರಗತಿಶೀಲವಾಗಿದೆ ಎಂದುಕೊಳ್ಳಬಹುದು. ಕಾಲಕ್ರಮೇಣ ಈ ಪ್ರಗತಿಯು ಆತನ ಚರಿತ್ರೆಯಲ್ಲಿ ಒಡಮೂಡಿ ಆತನು ಸಾಗಿದ ಮೈಲುಗಲ್ಲುಗಳನ್ನು ನೆನಪಿಸಿಕೊಟ್ಟು, ಅನಂತಕಾಲದವರೆಗೆ ಮುಂದುವರಿದು ಸಾಮಾಜಿಕ, ವೈಚಾರಿಕ ಮತ್ತು ಮಾಹಿತಿಗಳ ಪರಿಪೂರ್ಣತೆಯ ಸ್ಥಿತಿಯನ್ನು (Progression) ತಲಪುತ್ತದೆ ಎಂಬುದೇ ಪ್ರಗತಿವಾದದ ನಿಲುವು.

ಆದರೆ ಪ್ರಗತಿಶೀಲರು ತಮ್ಮ ಹಾದಿಯಲ್ಲಿ ಇದನ್ನೆಲ್ಲ ತಿಳಿಯದ ಕಂಟಕರನ್ನೂ ಪ್ರತಿರೋಧಿಗಳನ್ನೂ ಗುರುತಿಸುತ್ತಾರೆ. (Reactionaries). ಅವರಲ್ಲೊಂದು ಪಂಗಡದವರು ಪರಿವರ್ತನಾ ವಿರೋಧಿಗಳಾದ ಪ್ರಾಚೀನವಾದಿಗಳು (Primitivists) ಎಂದೇ ತಿಳಿಯಲಾಗಿದೆ. ಇಂದಿಗೆ ಇನ್ನೊಂದು ಪಂಗಡದವರು ಜಡವಾದಿಗಳು (Passivists) ಎನ್ನಬಹುದು.

ಪ್ರಾಚೀನವಾದಿಗಳು ಹೇಳುವುದೇನೆಂದರೆ ಇಂದಿನ ಜೀವನಕ್ರಮಕ್ಕಿಂತಲೂ ಯಾವುದೋ ಹಿಂದಿನ ಕಾಲದಲ್ಲಾಗಿ ಹೋದುದೆನ್ನಲಾದ 'ಸುವರ್ಣಯುಗ'ವೊಂದಿತ್ತು. ಆ ಒಳ್ಳೆಯ ಕಾಲದ ಬಳಿಕ 'ಕಲಿಯುಗ' ಬಂದು ಕಾಲಕ್ರಮೇಣ ಕೃತಕತೆ, ಸಂಕೀರ್ಣತೆಗಳು ಹೆಚ್ಚಿದವು ಎಂದು. ಮಾನಸಿಕವಾಗಿ ವೈಯಕ್ತಿಕ ಮತ್ತು ಸಾಮಾಜಿಕ ಸಂಸ್ಕೃತಿರಂಗಗಳಲ್ಲಿ ವಿಕೃತಿಯಾಗಿ ಆ ನಿಷೇಧಗುಣಗಳನ್ನು ಪೂರಾ ತ್ಯಜಿಸದೆ ಗತ್ಯಂತರವಿಲ್ಲ ಎಂದೆನ್ನುತ್ತಾರೆ.

ಆ ಪ್ರಾಚೀನವಾದಿಗಳು ಹೇಳಿರುವ ಸುವರ್ಣಯುಗದ ಘಟ್ಟವೊಂದು ದಿಟವಾಗಿ ಆಗಿ ಹೋಗಿರಬಹುದೋ ಎಂದು ಕೇಳಿದರೆ, ಅದು ಅವರ ಕಲ್ಪನೆ ಮತ್ತು ಭಾವುಕತೆಯಿಂದ ಭ್ರಮಿಷ್ಟರಾಗಿ ಹಾಗೆನ್ನುತ್ತಾರೆ ಎಂಬುದು ಅರ್ಧಸತ್ಯವಾದರೂ ಇರಬೇಕು. ನಿಜ ನೋಡಿದರೆ ಅವರೆಂದ ಆ ಘಟ್ಟದಲ್ಲೂ ಗೊಂದಲವಿತ್ತು. ಜೀವನ ಕ್ರಮವು ಹಿಂದುಳಿದಿತ್ತು ಮತ್ತು ಆದರ್ಶಪುರುಷರೊಬ್ಬರನ್ನು ಬಿಟ್ಟರೆ ಆ ಕಾಲವೂ ಹೀನವಾಗೇ ಇತ್ತು.

ರಾಮರಾಜ್ಯ ಕಂಗೊಳಿಸಿದ್ದ ಕಾಲದಲ್ಲಿ ಜನರು ಕಾಡಾಡಿಗಳಾಗಿದ್ದವರೇ ಹೆಚ್ಚು. ಕೆಲವರಂತೂ ಇಂದಿನ ಕಾಲಕ್ಕೆ ಸರಿಹೋಗದ ಬಿಲ್ಲು ಬಾಣಗಳು ಮತ್ತು ಗದೆ, ಕೊಡಲಿಗಳನ್ನಷ್ಟೆ ಬಳಸುತ್ತಿದ್ದವರಾಗಿ ತಲೆಗೂದಲು ಹಿಡಿದೆಳೆದ ಕಲಹಕಾರರಾಗಿ ಹಿಂದುಳಿದ ಸಮಾಜದವರಾಗಿದ್ದರು. ತಾವು ಪ್ರೀತಿ ವಿಶ್ವಾಸಗಳಿಂದ ಮನೋಬಲದಿಂದ ಬದುಕುತಿದ್ದ ಆ ಜನರು ನಮಗಿಂತ ಒಳ್ಳೆಯ ಸಭ್ಯತೆ ಪಡೆದಿದ್ದರೆಂದು ಹೇಳಬಹುದು.

ಏನಿದ್ದರೂ ಹಿಂದಿನ 'ರಾಮರಾಜ್ಯ'ವು ಇಂದಿನ ವಾಸ್ತವಿಕ ಜೀವನ ವಿಧಾನಗಳಿಗೆ



ದೂರವೇ ಸರಿ. ಅದು ಊಹಾಮಯವೇ. ಆದರೂ ಭ್ರಮೆ ಹಿಡಿಸುವಂತಿಲ್ಲ. ಇಂದಿಗೆ ವಿಶ್ವಸಂಸ್ಥೆ (ಯು. ಎನ್. ಓ.) ಕಲ್ಪನೆಯು ಹೊಸ ಜಗತ್ತಿನಲ್ಲಿ ಸಮೃದ್ಧಿಯ ಸ್ವರ್ಣಯುಗವಾಗುವ ಸಾಧ್ಯತೆ ಇದೆಯೆಂದು ಹೇಳುವಾಗ ರಾಮರಾಜ್ಯದ ವಿಷಯದ ನಿಷೇಧವೇಕೆ ನಮಗೆ ಬೇಕು?

ನಾವಿಂದು ಅನೇಕ ಸಂಪ್ರದಾಯಗಳು ಮತ್ತು ಇತಿಹಾಸದತ್ತವಾದ ಸಂಕೀರ್ಣವ್ಯವಸ್ಥೆಗಳಿಂದ ಮನುಷ್ಯನು ಸಾಧಿಸಿಕೊಂಡ ಎಷ್ಟೋ ಗುಣಗಳನ್ನು ಕೃತಕವೆಂದು ಗುರುತಿಸದೆ 'ಸಹಜ' ಎಂದು ಒಪ್ಪಿಕೊಳ್ಳುತ್ತಿದ್ದೇವೆ. ಇದು ಅನಿವಾರ್ಯ ಸಂಗತಿ.

ಆಧುನಿಕತೆಗೇ ಹೆಚ್ಚು ಒತ್ತುಕೊಟ್ಟು ಶೀಘ್ರಪ್ರಗತಿಯ ಸಲಕರಣೆಗಳೊಂದಿಗೆ ಏಗುತ್ತಾ ಇರಲು ಸಾಧ್ಯವಾಗದೆ 'ಓಡಿ ಓಡಿ ಸಾಕಾಗಿ ಕುಸಿದು ಬೀಳುವ ಸ್ಥಿತಿಯಲ್ಲಿದ್ದಾನೆ ಕಲಿಯುಗದ ಮಹಾನುಭಾವ' ಎಂದು ಶ್ರೀ ಸುಗುಣೇಂದ್ರತೀರ್ಥ ಶ್ರೀಪಾದರು ಬಹಳ ಚೆನ್ನಾಗಿ ಹೇಳಿದ್ದಾರೆ. (ಸುಗುಣಮಾಲಾ ಸೆಪ್ಟಂಬರ್ 2004 ಪುಟಗಳು 45ಮತ್ತು 46) ಹಾಗಾದರೆ ಪ್ರಗತಿಮಾರ್ಗವು ಯಾವುದು ಇರಬೇಕು?

ಪ್ರಗತಿಯೆಂದರೆ ಮಾರ್ಪಾಡಿಗಾಗಿ ಹೂಡುವ ಆಂದೋಲನ ಅಥವಾ 'ಕ್ರಾಂತಿ' ಎನ್ನುವರು. ಆಕ್ರಮಣ ಹಿಂಸಾಕಾರಿಗಳು, ಒರಟ ಅಸಂಸ್ಕೃತರೆಂದೇ ಹೇಳಬೇಕು.

ಪ್ರಗತಿ ಮಾರ್ಗ ತಿಳಿಯದವರಿಗೆ ಇರುವ ಸುಲಭ ದಾರಿಯು ಪ್ರಗತಿಯು ಜೀವನದಲ್ಲಿಯೂ ಸಾಧ್ಯವಿಲ್ಲವೆಂಬ ನಿರಾಶಾವಾದವೇ. ಜೀವನವೆಂದರೆ ಕರ್ಮಚಕ್ರ, ಸದಾ ಬುಡಮೇಲಾಗುತ್ತಿರುತ್ತದೆ ಎಂದ ಮೇಲೆ ತನ್ನ ಸುತ್ತಲೂ ತಾನೇ ನಿತ್ಯ ತಿರುಗುತ್ತಿರುವ ಕರ್ಮಚಕ್ರದ ಗತಿಯಲ್ಲಿ ಪ್ರಗತಿಯಾಯಿತೆಂಬುದು ತಾತ್ಕಾಲಿಕ ತೋರಿಕೆಯದಾದರೂ ಸಾಮಾನ್ಯವಾಗಿ ಅದು ಸುಳ್ಳು ಎನ್ನಲಾಗುತ್ತದೆ. ಅನಾಗರಿಕ ಕಾಲದಿಂದ ಮುಂದುವರಿದು ನಾವಿಂದು ಇಷ್ಟೊಂದು ನಾಗರಿಕತೆ ಪಡೆದಿದ್ದೇವೆಂದರೂ ಇದು ಯಾವ ದಿಕ್ಕಿನಲ್ಲಿ ಪ್ರಗತಿ ಎನಿಸುತ್ತದೆ? ಅನಾಗರಿಕರ ಹೃದಯವಂತಿಕೆಯನ್ನು ಕಳೆದುಕೊಂಡು ನಾವು ನಮ್ಮ ಪೊಳ್ಳು ಬುದ್ಧಿವಂತಿಕೆಯನ್ನು ಅತಿಯಾಗಿ ಬೆಳೆಸುತ್ತಿದ್ದೇವೆ. ಈ ತೆರನ ಬುದ್ಧಿವಂತಿಕೆಯು ಯೋಜನೆಯು ಯಾತಕ್ಕಾಗಿ ಇರುವುದು? ನಮ್ಮ ವಿಜ್ಞಾನ ಶಾಸ್ತ್ರವಿರುವುದು ನಮಗೆ ಉಪಕಾರಕ್ಕಿಂತ ಹೆಚ್ಚಿಗೆ ಅಪಕಾರ ಮಾಡಿದೆ ಎನ್ನುವವರೇ ಜಾಸ್ತಿ. ನಾವು ಜಗತ್ತನ್ನು ಸುಲಭ ಸೌಕರ್ಯಗಳಿಂದ ಸ್ವರ್ಗವಾಗಿ ಮಾಡಲು ಹೋದರೂ ಅದು ಇಂದು ಸಂಹಾರ - ಪ್ರಳಯಗಳನ್ನೊಳಗೊಂಡ ನರಕವಾಗಿದೆ. ಅನಾಗರಿಕ ಮೂಲನಿವಾಸಿಯು ಒಬ್ಬೊಬ್ಬರನ್ನೊ, ಹಲವರನ್ನೊ ಕೊಲ್ಲಬಹುದಿತ್ತಾದರೆ ಇಂದಿನ ಒಬ್ಬ ನಾಗರಿಕನು ಬಾಂಬುಗಳ ಸಹಾಯದಿಂದ ಸಾವಿರ ಅಥವಾ ಲಕ್ಷಾವಧಿ ಜನರನ್ನೊಳಗೊಂಡ ಪಟ್ಟಣಗಳನ್ನೇ ನಾಶಗೊಳಿಸಬಹುದು. ಇದು ಪ್ರಗತಿಯಲ್ಲ, ದುರ್ಗತಿ. ವೈಯಕ್ತಿಕ ಗಮನವಿಲ್ಲದೆ ಒಟ್ಟು ಸಮಾಜ ಸುಧಾರಣೆಯೂ ಆಗದು.

ಸೃಷ್ಟಿಯಲ್ಲಿ ಜೀವನಕ್ಕೆ ಒಂದು ಗುರಿ ಇದೆಯೆ? ನಾವದನ್ನು ಗುರುತಿಸಿ ಅದರೆಡೆಗೆ ಹೆಜ್ಜೆ ಹಾಕುತ್ತಿದ್ದೇವೆ ಹೌದೇ? ಗುರಿಯು ಯಾವುದು, ನಮ್ಮ ಹೆಜ್ಜೆಗಳು ಎಲ್ಲಿ ಎತ್ತ ಕಡೆ ಮೂಡಿವೆ

ಎಂಬ ಪ್ರಶ್ನೆಗಳಿಗೆ ನಾವು ಕೊಡುವ ಉತ್ತರದ ಮೇಲೆ ಜೀವನದಲ್ಲಿ ಪ್ರಗತಿಯಿದೆಯೊ ಇಲ್ಲವೊ ಎಂಬುದು ನಿರ್ಣಯವಾಗುತ್ತದೆ.

ಜೀವನಕ್ಕೆ ಗತಿ (Movement) ಸದಾ ಇರುತ್ತದೆ, ಎಲ್ಲೋ ಅತ್ತ, ಇತ್ತ ಕೆಲವೊಮ್ಮೆ ನಮ್ಮ ಗತಿಯು ಸಂಯೋಜನಾತ್ಮಕವಾದೆಡೆಗೆ (Synthesis) ಮತ್ತು ಸಮಗ್ರ ಸಾರಸತ್ವ ಗುರುತಿಸಿಕೊಳ್ಳುವೆಡೆಗೆ. ಇನ್ನೊಮ್ಮೆ ವಿಭಜನಾತ್ಮಕ (Analysis)ವಾದೆಡೆಗೆ ವಿವರಗಳನ್ನು ತಿಳಿದುಕೊಳ್ಳುವೆಡೆಗೆ, ಇಂದಿಗೆ ಸಾಹಿತ್ಯವು ವ್ಯಕ್ತಿಗಳ ಮನೋ ವಿಭಜನೆ ಇಲ್ಲವೆ ಭಾವನಾಲಹರಿಗಳ ಕಡೆಗೆ ಹೆಚ್ಚು ಲಕ್ಷ್ಯಕೊಡಹೋದಾಗ ವ್ಯಕ್ತಿಯಲ್ಲಿ ಅಖಂಡತೆ (Integrity) ಇಲ್ಲವೆಂದೂ ಅವನು ಅಪ್ರಾಮಾಣಿಕನೆಂದೂ ಸಿದ್ಧಪಡಿಸಿದೆ. ಹಿಂದಿನ ಸಾಹಿತ್ಯವು ವ್ಯಕ್ತಿಗುಣದಲ್ಲಿ ವಿಶ್ವಾಸವಿಟ್ಟಿದೆ. ಈ ಎರಡೂ ದೃಷ್ಟಿಗಳು ಯೋಗ್ಯವೇ ಆದರೂ ಪರಸ್ಪರ ವಿರೋಧಗುಣಗಳಾಗಿವೆ. ನಾವು ಸಾಧಿಸಬೇಕಾದ ಶ್ರೇಷ್ಠತೆಯು ಯಾವ ದೃಷ್ಟಿಕೋನದಿಂದ ಯಾವುದಾಗಿದೆ ಎಂದು ಹೇಳಲು ಸಾಧ್ಯವಿಲ್ಲದಂತಹ ಸಮಸ್ಯೆಯು ಆಗಾಗ ಏಳುತ್ತಿರುತ್ತದೆ. ತಾರ್ಕಿಕರು ಇದಕ್ಕಾಗಿ ಜಗ್ಗಾಡುತ್ತಿರುವಾಗ ಸರಿ ನಿರ್ಣಯವನ್ನು ಹೇಗೆ ತೆಗೆದುಕೊಳ್ಳಬೇಕು?

ಇಲ್ಲೊಂದು ನಿದರ್ಶನವನ್ನು ನೋಡಿರಿ. ಸಮಾಜದಲ್ಲಿ ಸಾಮಾನ್ಯ ಜನರ ಕುರಿತು ಕಾಳಜಿ ಇದ್ದರೆ ಅದು ಪ್ರಗತಿಶೀಲ ಸಾಹಿತ್ಯವೆಂದು ಕನ್ನಡದಲ್ಲಿ 1960ರ ಸುಮಾರಿಗೆ ಜನ ಹೇಳುತ್ತಿದ್ದರು. ಆದರೆ ಅಂತಹವರೇ ಬಂಡವಾಳಿಗರ, ಅಧಿಕಾರಿಗಳ ಮತ್ತು ಲಾಭಬಡಕರ ಅಗತ್ಯಗಳನ್ನು ಗುರುತಿಸುವಾಗ ಸಮಾಜದಲ್ಲಿ ಆ ಎರಡನೆ ಪಂಗಡದವರಿಲ್ಲದಿದ್ದರೆ ಏನೂ ಸಾಗದೆಂಬ ಕಟುಸತ್ಯವನ್ನು ಕಂಡು ಹಿಡಿದರು. ಹೀಗಿರಲು ಪ್ರಗತಿ ಪಥಕ್ಕೆ ಚುಕ್ಕಾಣಿ ಹಿಡಿಯಲು ಅಸಮರ್ಥರಾಗಿ ಅವರು ತಮ್ಮನ್ನು ತಾವೇ ಅವಹೇಳನ ಮಾಡುವ ಅವಸ್ಥೆಗೆ ಬಿದ್ದುಹೋದರು. ಅವರ ಪ್ರಗತಿಶೀಲತೆಯ ಕೂಗೇ ಪ್ರಗತಿಗೆ ಶೂಲವಾದದ್ದುಂಟು.

ಜೀವನದ ಪರಿಸರವು (Environment) ಮಾರ್ಪಟ್ಟಂತೆ ಹಳೆಯ ಸುತ್ತುಮುತ್ತನ್ನು ಬಿಟ್ಟು ಹೊಸತನ್ನು ಸ್ವೀಕರಿಸಿ ಒಟ್ಟಿನಲ್ಲಿ ಎಂತಹದೊ ಪುರೋಗಾಮಿಗಳಾಗುತ್ತಿದ್ದಾರೆ, ತಿರೋಗಾಮಿಗಳೂ ಆಗುವ ಸಂಭವ ಹೆಚ್ಚು ಎಂದು ವೈಚಾರಿಕರ ಅಭಿಪ್ರಾಯ.

'ಹಳೆಯ ಕೊಳೆಯ ಕಳೆವೆವು, ನವವ ಶುಭವ ಬೆಳೆವೆವು' ಎಂಬ ಕವಿ ಅಡಿಗರ ಸಾಲುಗಳಲ್ಲಿ ಏನದು ನವ ಮತ್ತು ಶುಭ ಎಂದರೆ? ನವವೆಂಬುದು ಪರಿವರ್ತನೆಯನ್ನು ಸೂಚಿಸಿದರೆ ಶುಭವೆಂಬುದು ಶಾಶ್ವತ, ಅಚಲವೆಂದು ಸೂಚಿಸುವ ಒಂದು ಗುಣ. ಪರಿವರ್ತನೆಯೂ ನಿರಂತರವಾಗಿ ಶಾಶ್ವತವಾಗಿರಬೇಕಿದೆ! ಶುಭ ಎಂಬುದು ಭವಿಷ್ಯಕ್ಕೆ ಶುಭವೆಂಬ ಕಲ್ಪನೆಯಲ್ಲಿ ಅದೂ ತಾತ್ಕಾಲಿಕ ಸಿದ್ಧಿಯೇ. ಒಟ್ಟಿನಲ್ಲಿ ಪ್ರಗತಿಮಾರ್ಗದಲ್ಲಿ ಮಾರ್ಪಾಟು ನಿರಂತರವಾಗುತ್ತಿರಬೇಕು, ಶಾಶ್ವತವಾಗಿ ನಿಲ್ಲುವಂತಹದೂ ಬೇಕು. ಆದರೆ ಎಲ್ಲವೂ ನೀತಿಯುತವಾಗಿರಬೇಕು. ಉತ್ತಮ ವಿಧಿ ಪಡೆದಿರಬೇಕಲ್ಲದೆ ಯಾವ ರೀತಿಯಲ್ಲೂ ವಿನಾಶಕಾರಿಯಾಗದಂತೆ ಜಾಗ್ರತೆ ತೆಗೆದುಕೊಳ್ಳಬೇಕಾದುದು ಪ್ರಗತಿಗಾಮಿಯ ಕರ್ತವ್ಯ.



ಪ್ರಗತಿಯು ನಿಂತ ನೀರಲ್ಲ. ಹರಿಯುವ ಪ್ರವಾಹ. ಆದರೆ ಅದು ವ್ಯವಸ್ಥಾಬದ್ಧ ವಿಚಾರವಾದರೂ ಆಕ್ರಮಣಕಾರಿಯಾಗಿ ಹಿಂಸೆಗೆ ಎಡೆಗೊಡಬಾರದು. ಗಾಂಧೀಜಿ ಹೇಳಿಲ್ಲವೆ- 'ಶಾಂತಿ ಪಡೆಯಲು ಶಾಂತಿಮಾರ್ಗವೇ ಬೇಕು, ಅಶಾಂತಗೊಳಿಸುವ ಹಿಂಸಾಮಾರ್ಗವಲ್ಲ' ಎಂದು.

ಇನ್ನೊಂದು ಸತ್ಯವಿದೆ - ಪ್ರಗತಿ ಸಾಧಿಸಿದ್ದಷ್ಟರವರೆಗೆ ಸಿದ್ಧಿಸೀತು. ಅದಕ್ಕೂ ವಿಧಿನಿಯಮವಿದೆ. ಸಾಹಸವೂ ಬೇಕಿದೆ.

ಮರಣ ಒಂದು ಜಿಜ್ಞಾಸೆ

# ಯದ್ಯಪಿ ಲೋಕೇ ಮರಣಂ ಶರಣಮ್

ಎಸ್. ಪಿ. ಶ್ರೀನಿವಾಸ ಭಟ್ಟಜಿ

**ಭಾಗ - ೪**

ಮಹಾಭಾರತದ ವನಪರ್ವದಲ್ಲಿ ಯುಧಿಷ್ಠಿರನು ಯಮನೊಂದಿಗೆ ಮಾತನಾಡಿದ ಪ್ರಸಂಗವು ಬಂದಿದೆ. ಯಮಧರ್ಮರಾಜನೇ 'ಯಕ್ಷ'ನೆಂಬ ಹೆಸರಿನಿಂದ ಯುಧಿಷ್ಠಿರನೊಡನೆ ಮಾತನಾಡಿದವನು ಯಮನೇ ಅಂತ ಮಹಾಭಾರತದಲ್ಲಿ ವಿವರಣೆ ಇದೆ. ಇದನ್ನೇ ಯಕ್ಷಪ್ರಶ್ನೆ ಎಂದು ವರ್ಗಿಕರಿಸಿರುತ್ತಾರೆ.

ಇಂಥ ಯಕ್ಷ ಪ್ರಶ್ನೆಗಳಲ್ಲಿ ಮಹತ್ವಪೂರ್ಣವಾದ ಒಂದು ಪ್ರಶ್ನೆ ಇದೆ. ಅದೇ

**ಅಹನ್ಯಹನಿ ಭೂತಾನಿ ಪ್ರವಿಶಂತಿ ಯಮಾಲಯಮ್।**
**ಶೇಷಾಃಸ್ಥಾವರ ಮಿಚ್ಛಂತಿ ಕಿಮಾಶ್ಚರ್ಯಮತಃ ಪರಮ್ ॥**

ಲೋಕದಲ್ಲಿ ಆಶ್ಚರ್ಯಕರವಾದದ್ದು ಏನು? ಎಂದು ಯಕ್ಷ ಪ್ರಶ್ನಿಸಿದಾಗ ಯುಧಿಷ್ಠಿರನು ಉತ್ತರಿಸುತ್ತಾನೆ. ಪ್ರತಿನಿತ್ಯವೂ ಪ್ರಾಣಿಗಳು ಯಮಾಲಯವನ್ನು ಪ್ರವೇಶಿಸುತ್ತಲೇ ಇದ್ದಾರೆ, ಹಾಗಿದ್ದರೂ, ಉಳಿದಿರುವವರು, ನಮಗೂ ಒಂದು ದಿನ ಯಮಾಲಯವನ್ನು ಸೇರಬೇಕಾಗಿದೆ ಎಂಬ ಯೋಚನೆ ಕೂಡಾ ಇಲ್ಲದೆ, ಮನೆ, ಮಠ, ಉದ್ಯೋಗ, ಹೆಂಡತಿ, ಮಕ್ಕಳು ಎಂಬ ವಿಚಾರದಲ್ಲೇ ಮುಳುಗಿರುತ್ತಾರೆ. ಇದಕ್ಕಿಂತಲೂ ಆಶ್ಚರ್ಯಕರವಾದುದು ಏನಿದೆ?

ಹೀಗೆ, ನಚಿಕೇತನೆಂಬ ಚಿಕ್ಕ ಬಾಲಕ, ಸತ್ಯವಾನ - ಸಾವಿತ್ರಿ, ಯುಧಿಷ್ಠಿರ ಇವರೆಲ್ಲರೂ ಯಮನೊಡನೆ ಒಂದಲ್ಲ ಒಂದು ರೀತಿಯಿಂದ ತರ್ಕಮಾಡಿ, ಯಮನ ಮನಸ್ಸನ್ನೂ ಸೂರೆಗೊಂಡು ಯಮಧರ್ಮನಿಂದಲೇ ಹೊಗಳಿಸಿಕೊಂಡ ಮಹಾತ್ಮರು. ಇಂತಹ ಮಹಾತ್ಮರ ಪುಣ್ಯ ಪುರಾಣ ಕಥೆಯನ್ನು ಕೇಳುವುದರಿಂದ ನಮಗೆ ಯಾವ ವಿಧದಿಂದಲೂ ಮರಣ ಭಯವಿರಲಾರದು.

ಇನ್ನು ಉತ್ತಮ ಪದ ಪ್ರಾಪ್ತಿಯನ್ನು ಹಿರಿಯರು ವರ್ಣಿಸುತ್ತಾರೆ.

**ಹಿನ್ವಂತಿ ಯೇಽಸುವಿತ್ತಾಶಾಂ ಜಿನ್ವಂತಿ ಕರಣಾನಿ ಚ ।**
**ತ ಏವ ಶ್ರುತಿಮಾರ್ಗೇಣ ಗಚ್ಛಂತಿ ಪರಮಂಪದಮ್ ॥**

ಯಾರು ದ್ರವ್ಯದ ಇಚ್ಛೆಯನ್ನು ತ್ಯಾಗಮಾಡುತ್ತಾರೋ ಮನಸ್ಸನ್ನು ಇಂದ್ರಿಯಗಳನ್ನು ಯಾರು ಜಯಿಸುತ್ತಾರೋ, ಅವರೇ ಶ್ರುತಿ ಮಾರ್ಗದಿಂದ ಪರಮಪದವನ್ನು ಹೊಂದುತ್ತಾರೆ.

**'ದತ್ತ ಮಂದಿರ', ರೋಯಲ್ ಪಾರ್ಕ್ ಕ್ಲಬ್ ರೆಸಾರ್ಟ್ ಹತ್ತಿರ,, ಸೂರತ್ - 395 007**



**ಯೇನ ಯದ್ಯತ್ಕೃತಂ ಕರ್ಮ ತತ್ತದ್ ಭೋಗ್ಯಂ ಹಿ ತೇನ ಚ।**
**ಅವಶಃ ಸ್ವಕೃತಂ ಭುಂಕ್ತೇ ನಾನ್ಯೋಽನ್ಯಶ್ಚ ಕದಾಚನ ॥**

ಯಾವನು ಏನು ಏನು ಕರ್ಮಗಳನ್ನು ಮಾಡಿದನೋ ಅವನೇ ಆ ಕರ್ಮದ ಫಲವನ್ನು ಅನುಭವಿಸಬೇಕಾಗಿದೆ. ಪರತಂತ್ರನಾಗಿ ಸ್ವತಃ ಮಾಡಿದ ಕರ್ಮಫಲವನ್ನು ಅನುಭವಿಸುತ್ತಾನೆಯೇ ಹೊರತು ಇನ್ನೊಬ್ಬರ ಕರ್ಮ ಫಲವನ್ನು ಅನುಭವಿಸುವುದಿಲ್ಲ.

**ದೇಹೀ ಕರೋತಿ ಕರ್ಮೈಕಃ ಕೃತಸ್ಯೈಕೋಽಶ್ನುತೇ ಫಲಮ್ ।**
**ಅನ್ಯೋ ನ ಲಿಪ್ಯತೇಽನ್ಯಸ್ಯ ಕರ್ಮಣೇತಿ ವಿನಿಶ್ಚಿತಮ್ ।।**

ಒಬ್ಬನು ಕರ್ಮವನ್ನು ಮಾಡುತ್ತಾನೆ ಮತ್ತು ಅದರ ಫಲವನ್ನು ಅವನು ಅನುಭವಿಸುತ್ತಾನೆ. ಇನ್ನೊಬ್ಬರು ಮಾಡಿದ ಕರ್ಮದಿಂದ ಅನ್ಯರು ಯಾರೂ ಕರ್ಮದಿಂದ ಲಿಪ್ತನಾಗುವುದಿಲ್ಲ ಇದು ನಿಶ್ಚಯ.

**ಧರ್ತಾ ಯೋಽಖಿಲಶಕ್ತೀನಾಂ ತಮಾರಾಧ್ಯ ಸ್ವಕರ್ಮಣಾ ।**
**ಪರಪೀಡಾ ನ ಕುರ್ವಂತಿ ನ ತೇ ಯಾಂತ್ಯಂತಕಾಲಯಮ್ ॥**

ಯಾರು ಅಖಿಲ ಶಕ್ತಿಗೆ ಧಾರಕನಾಗಿದ್ದಾನೋ ಅವನನ್ನು ಸ್ವಕರ್ಮದಿಂದ ಆರಾಧನೆ ಮಾಡಿ ಇನ್ನೊಬ್ಬರನ್ನು ನೋಯಿಸದೆ ಇರುವವನು ಯಮನ ಬಾಗಿಲನ್ನು ನೋಡುವುದಿಲ್ಲ, ಉತ್ತಮ ಗತಿಯನ್ನು ಹೊಂದುತ್ತಾನೆ ಎಂಬುದು ತಾತ್ಪರ್ಯ.

**ಯೇ ಪ್ರಾಣಿಹಿಂಸಕಾಸ್ತೇ ತು ವೇದಯಜ್ಞತಪೋಮುಖೈಃ ।**
**ಯುಕ್ತಾ ಅಪಿ ನಯಾಂತ್ಯೂರ್ಧ್ವಂ ಭಕ್ತಿಹೀನಶ್ಚ ತಾದೃಶಃ ॥**

ಯಾರು ಪ್ರಾಣಿಗಳನ್ನು ಹಿಂಸಿಸುತ್ತಾರೋ ಅವರು ವೇದ, ಯಜ್ಞ, ತಪಸ್ಸುಗಳಿಂದ ಯುಕ್ತರಾಗಿದ್ದರೂ ಊರ್ಧ್ವಲೋಕವನ್ನು ಹೊಂದುವುದಿಲ್ಲ ಮತ್ತು ಭಕ್ತಿ ಹೀನರ ಅವಸ್ಥೆಯೂ ಹಾಗೆಯೇ.

**ಶಾಸ್ತ್ರೇಣ ಚೋದಿತಾ ಹಿಂಸಾ ಸೈವ ಧರ್ಮಪರೋ ಮತಃ ।**
**ಸೈವೇಹ ಪರಮಂ ದಾನಂ ಸೈವೇಹ ಪರಮಂ ತಪಃ ॥**

ವಿಧಿ ಪೂರ್ವಕವಾಗಿ ಹೇಳಲ್ಪಟ್ಟ ಹಿಂಸೆಯು ಪರಮಧರ್ಮವಾಗಿದೆ. ಅದೇ ಶ್ರೇಷ್ಠ ದಾನವು ಮತ್ತು ಶ್ರೇಷ್ಠ ತಪಸ್ಸು ಆಗಿರುತ್ತದೆ.

**ಮಕ್ಷಿಕಾನ್ ಮತ್ಕುಣಾನ್ ದಂಶಾನ್ ಯೂಕಾದೀನ್ ಪೀಡಕಾನಪಿ ।**
**ಆತ್ಮೌಪಮ್ಯೇನ ಯೇಽವಂತಿ ತೇ ನರಾ ಧರ್ಮಶೀಲಿನಃ ॥**

ನೊಣ, ತಿಗಣೆ, ಹುಳು, ಗೆದ್ದಲ ಹುಳುಗಳು ಮುಂತಾದುವುಗಳು ಪೀಡೆ ಕೊಡುತ್ತಿದ್ದರೂ, ಅವುಗಳನ್ನು ತನ್ನಂತೆ ರಕ್ಷಣೆ ಮಾಡುವಂಥ ಮಾನವರು ಧರ್ಮಶೀಲರಾಗಿರುತ್ತಾರೆ.

**ತಪ್ತಾಂಗಾರಮಯಂ ಮಾರ್ಗಂ ದುರ್ಗಾಂ ವೈತರಣೀನದೀಮ್ ।**
**ದುರ್ಗತಿಂ ನೈವ ಪಶ್ಯಂತಿ ಕೃತಾಂತಂ ಚಾಪಿ ತೇನರಾಃ**

ಅಂಥ ಧರ್ಮಶೀಲರಾದ ಮಾನವರು ಪ್ರಜ್ವಲಿಸುವ ಕೆಂಡದ ಮಾರ್ಗವನ್ನು, ದುಸ್ತರವಾದ ವೈತರಣಿ ನದಿಯನ್ನು ಮತ್ತು ಯಮನನ್ನು ನೋಡುವುದಿಲ್ಲ.

**ಯೇ ಹಿಂಸ್ರಾಃ ಪ್ರೇತ್ಯ ತೇಽನ್ಯೋಽನ್ಯಂ ಖಾದಂತ್ಯನ್ಯೋನ್ಯಘಾತಿನಃ ।**
**ಪರಸ್ತ್ರೀಧನಹರ್ತಾರೋ ನರಕಂ ಯಾಂತಿ ದಾರುಣಮ್ ॥**

ಯಾವ ಕ್ರೂರರರು ಪರಸ್ಪರ ಆಘಾತ ಮಾಡಿಕೊಂಡು ಒಬ್ಬರನ್ನೊಬ್ಬರು ಕಿತ್ತು ತಿನ್ನುವಂಥವರು, ಪರಸ್ತ್ರೀ - ಪರಧನವನ್ನು ಅಪಹರಣ ಮಾಡುವವರು ಭಯಾನಕವಾದ ನರಕವನ್ನು ಹೊಂದುತ್ತಾರೆ.

**ಯೇ ಹಿಂಸಂತೀಹ ಭೂತಾನಿ ಜೀವನಾರ್ಥಂ ಪರತ್ರ ತೇ।**
**ಸ್ವಮಾಂಸಂ ಭೋಜಿನೋಽತ್ಯಂತಂ ಕ್ಲಿಶ್ಯಂತೇ ವಾಸ್ರಪೂಯಪಾಃ ॥**

ಯಾರು ಈ ಲೋಕದಲ್ಲಿ ತನ್ನ ಜೀವನಕ್ಕೋಸ್ಕರವಾಗಿಯೇ ಪ್ರಾಣಿಗಳ ಹಿಂಸೆ ಮಾಡುವರೋ ಅವರು ಪರಲೋಕದಲ್ಲಿ ತನ್ನ ಮಾಂಸವನ್ನೇ ತಿನ್ನುವವರಾಗಿ, ರಕ್ತವನ್ನೋ ಕೀವನ್ನೋ ಪ್ರಾಶನ ಮಾಡುವವರಾಗಿ ಅತ್ಯಂತ ಕ್ಲೇಶವನ್ನು ಹೊಂದುತ್ತಾರೆ.

**ಸ್ಥಾವರಾಂತೇ ಭವಿಷ್ಯಂತಿ ನರಕಾನ್ನಿರ್ಗತಾ ಅಪಿ ।**
**ತಿರ್ಯಗ್‌ಯೋನಿರುಷಿತ್ವಾಽಥ ಸುಚಿರಾತ್ ಯಾಂತಿ ಮರ್ತ್ಯತಾಮ್ ॥**

ಇವರು ನರಕದಿಂದ ಹೊರಗೆ ಬಂದರೂ ಪರ್ವತ ರೂಪವನ್ನು ಹೊಂದುತ್ತಾರೆ. ನಂತರ ಇತರ ಪ್ರಾಣಿಗಳ ಗತಿಯನ್ನು ಹೊಂದಿ ಬಹಳ ಕಾಲದ ನಂತರವೇ ಮನುಷ್ಯ ರೂಪವನ್ನು ಹೊಂದುತ್ತಾರೆ.

**ತತ್ರಾಪಿ ಚ ಭವಂತ್ಯಂಧಾಃ ಕಾಣಾಃ ಕುಬ್ಜಾಶ್ಚ ಪಂಗವಃ ।**
**ಅಂಗಹೀನಾ ದರಿದ್ರಾಶ್ಚ ಸ್ವಾಘ ಚಿಹ್ನೈಶ್ಚ ಚಿಹ್ನಿತಾಃ ॥**

ಇಲ್ಲಿ ಕೂಡಾ ಇವರು ಅಂಧರಾಗಿಯೂ ಬಧಿರರಾಗಿಯೂ ಕುಬ್ಜ ಅಂದರೆ ಅಂಗಾಂಗ ವಕ್ರ ಉಳ್ಳವರಾಗಿಯೂ, ಕಾಲುಗಳು ಇಲ್ಲದವರಾಗಿಯೂ, ಅಂಗಹೀನರಾಗಿಯೂ ದರಿದ್ರರಾಗಿಯೂ ಮತ್ತು ಸ್ವತಃ ಪಾಪಗಳ ಚಿಹ್ನೆಯಿಂದ ಕೂಡಿದವರಾಗಿಯೂ ಕಲಂಕಿತರಾಗಿಯೂ ಹುಟ್ಟುವರು.

**ಪರದ್ರೋಹೋ ನ ಕಾರ್ಯೋಽತಃ ಕಾಯೇನ ಮನಸಾ ಹೃದಾ ।**
**ಯತೋ ಲೋಕದ್ವಯಾತ್‌ಭ್ರಂಶೋ ದ್ರೋಗ್ಧುರ್ಹಿ ಪರತೋ ಭಯಮ್ ॥**

ಆದ್ದರಿಂದ ಕಾಯೇನ - ವಾಚಾ - ಮನಸಾ - ಹೃದಯದಿಂದ ಇನ್ನೊಬ್ಬರಿಗೆ ದ್ರೋಹ ಮಾಡಬಾರದು. ಕಾರಣ, ದ್ರೋಹ ಮಾಡುವವರಿಗೆ ಎರಡೂ ಲೋಕಗಳಲ್ಲಿಯೂ (ಇಹ - ಪರ) ಅಧಃಪತನವಾಗುವುದು ಮತ್ತು ಅದಕ್ಕಿಂತಲೂ ಹೆಚ್ಚಿನ ಭಯವು ಉಂಟಾಗುವುದು.

**ಸ್ಯಂದಮಾನಾ ಯಥಾ ನದ್ಯಃ ಸರ್ವಾ ಯಾಂತಿ ಮಹಾಂಬುಧಿಮ್ ।**
**ಅಹಿಂಸಾಯಾಂ ತಥಾ ಧರ್ಮಾಃ ಪ್ರವಿಶಂತ್ಯಖಿಲಾಃ ಖಲು ॥**



ಪ್ರವಹಿಸುತ್ತಿರುವ ಎಲ್ಲಾ ನದಿಗಳು ಹೇಗೆ ಸಮುದ್ರವನ್ನು ಸೇರುತ್ತವೆಯೋ ಹಾಗೇ ಸರ್ವಧರ್ಮಗಳು ನಿಜವಾಗಿಯೂ ಅಹಿಂಸೆಯಲ್ಲಿಯೇ ಸೇರಿಕೊಳ್ಳುವುದು.

**ದತ್ತಾಭಯಃ ಪುಮಾನೇವ ಸರ್ವಧರ್ಮಸಮಾವೃತಃ ।**
**ಅಚಲಂ ಪದಮಾಪ್ನೋತಿ ನ ಭೂಯಶ್ಚ್ಯವತೇ ತತಃ ॥**

ಸರ್ವ ಪ್ರಾಣಿಗಳಿಗೂ ಅಭಯವನ್ನು ಕೊಡುವ ಮಾನವನೇ ಸರ್ವಧರ್ಮಗಳಿಂದಲೂ ಮುಕ್ತನಾಗಿ ಅಚಲ ಪದವನ್ನು ಹೊಂದುತ್ತಾನೆ. ಅವನು ಪುನಃ ಅಧಃಪತಿತನಾಗುವುದಿಲ್ಲ.

**ಸ್ವಧರ್ಮಾನ್ ವೇದಶಾಸ್ತ್ರೋಕ್ತಾನ್ ದೇಶಕಾಲೋಚಿತಾನಪಿ ।**
**ಯೇ ಪಶ್ಯಂತೀಹ ತೇ ನೈವ ಪಶ್ಯಂತಿ ಯಮಯಾತನಾಮ್ ॥**

**ಸ್ವವರ್ಣಾಶ್ರಮಿಣೋ ಯೇ ಚ ಸ್ವಾಚಾರನಿರತಾಃಸದಾ ।**
**ಶೀಲವತ್ಯೋಽಪಿ ನಾರ್ಯಶ್ಚ ನಾಕಪೃಷ್ಠೇ ವಸಂತಿ ತೇ ॥**

ಯಾರು ವರ್ಣಾಶ್ರಮಧರ್ಮಾನುಸಾರವಾಗಿ ಸ್ವತಃ ಆಚಾರವನ್ನು ಯಾವಾಗಲೂ ಅನುಸರಿಸುತ್ತಿರುತ್ತಾರೋ ಅವರು ಮತ್ತು ಶೀಲವತಿಯರಾದ ನಾರಿಯರು ಸ್ವರ್ಗದಲ್ಲಿ ಆರೂಢರಾಗಿರುತ್ತಾರೆ.

**ಯಥೋಕ್ತಾಚಾರಿಣಃ ಸರ್ವೇ ಜಿತಕಾಮಾ ಜಿತೇಂದ್ರಿಯಾಃ ।**
**ಸ್ವಕರ್ಮನಿರತಾಂ ಯಾಂತಿ ಬ್ರಹ್ಮಲೋಕಮಕಲ್ಮಷಮ್ ॥**

ಶಾಸ್ತ್ರ ಕಥನದಂತೆ ಆಚಾರವನ್ನು ನಿಷ್ಠೆಯಿಂದ ಆಚರಿಸುತ್ತಾ ಯಾರು ಕಾಮವನ್ನು ಜಯಿಸುತ್ತಾರೋ, ಸ್ವಕರ್ಮದಲ್ಲಿ ನಿರತರಾಗಿರುವರೋ ಅವರು, ನಿಷ್ಪಾಪವಾದಂಥ ಬ್ರಹ್ಮಲೋಕವನ್ನು ಹೊಂದುವರು.

**ಇಷ್ಟಾಪೂರ್ತರತಾ ಯೇ ಚ ಯದೃಚ್ಛಾಲಾಭ ಹರ್ಷಿತಾಃ ।**
**ದಯಾನ್ವಿತಾ ದಾನಶೀಲಾಸ್ತೇ ನ ಯಾಂತಿ ಯಮಾಲಯಮ್ ॥**

ಅಪೇಕ್ಷಿತ ಲಾಭದಲ್ಲಿ ಸಮಾಧಾನ ಹೊಂದಿ, ದೈವದತ್ತವಾಗಿ ಸಿಕ್ಕಿದ್ದರಲ್ಲೇ ತೃಪ್ತಿಹೊಂದುವವರೂ, ದಯಾಳುಗಳೂ ದಾನಶೂರರೂ ಯಮಲೋಕವನ್ನು ಹೊಂದುವುದೇ ಇಲ್ಲ.

**ವೇದಪಾಠರತಾ ನಿತ್ಯಂ ಬ್ರಾಹ್ಮಣಾ ಯೇಽಗ್ನಿಹೋತ್ರಿಣಃ ।**
**ಸ್ವರ್ಯಾಂತಿ ತೇಽಪಿ ಭೂಪಾಶ್ಚ ರಣೇ ಯೋಽಭಿಮುಖೇ ಹತಾಃ ॥**

**ಅನಾಥಗೋದ್ವಿಜಾತಿಸ್ತ್ರೀಶರಣಾಗತರಕ್ಷಣೇ ।**
**ಯೇ ಮೃತಾ ಧರ್ಮಸಂಗ್ರಾಮೇ ತೇ ನ ಯಾಂತಿ ಯಮಾಲಯಮ್ ॥**

ಯಾವಾಗಲೂ ವೇದಾಧ್ಯಯನದಲ್ಲಿ ಮಗ್ನರಾಗಿರುವವರು, ಅಗ್ನಿಹೋತ್ರಿ ದ್ವಿಜರು ಇವರು ಸ್ವರ್ಗವನ್ನು ಪಡೆಯುತ್ತಾರೆ ಮತ್ತು ಯುದ್ಧದಲ್ಲಿ ಮರಣ ಹೊಂದಿದ ಯೋಧರು ಹಾಗೂ ಅನಾಥರು, ಗೋವುಗಳು, ದ್ವಿಜಸ್ತ್ರೀಗಳು, ಶರಣಾಗತರಾದಲ್ಲಿ ಇವರ ರಕ್ಷಣೆಗಾಗಿ

ಧರ್ಮಸಂಗ್ರಾಮದಲ್ಲಿ ಯಾರು ಮೃತರಾಗುವರೋ ಅಂಥ ರಾಜರು ಕೂಡಾ ಯಮಲೋಕಕ್ಕೆ ಹೋಗುವುದಿಲ್ಲ.

**ಪಂಗೂನ್ ದೀನಾನ್ ಶಿಶೂನ್ ವೃದ್ಧಾನ್ ರುಗ್ಣಾನ್ ಆರ್ತಾನ್ ಭಯಾತುರಾನ್ ।**
**ಯೇ ಪುಷ್ಣಂತ್ಯಭಯಂ ದತ್ವಾ ರಮಂತೇ ತೇ ಚಿರಂ ದಿವಿ ॥**

ಕಾಲುಗಳಿಲ್ಲದವರು, ದೀನದುರ್ಬಲರು, ಶಿಶುಗಳು, ವೃದ್ಧರು, ರೋಗಿಗಳು, ಪೀಡಿತರು ಮತ್ತು ಭಯಾತುರರು ಇವರಿಗೆಅಭಯವನ್ನು ಕೊಟ್ಟು ಯಾರು ಪೋಷಣೆ ಮಾಡುತ್ತಾರೋ ಅವರು ಸ್ವರ್ಗದಲ್ಲಿ ಬಹುಕಾಲದವರೆಗೂ ರಮಿಸುತ್ತಿರುತ್ತಾರೆ.

**ಗಾಂ ದೃಷ್ಟ್ವಾ ಪಂಕಮಗ್ನಾಂ ಯೇ ರುಗ್ಣಂ ವಿಪ್ರಂ ಚ ದುರ್ವಿದಮ್ ।**
**ಉದ್ಧರಂತಿ ತತೋ ಯೇ ತೇ ನೈವ ಯಾಂತಿ ಯಮಕ್ಷಯಮ್ ॥**

ಕೆಸರಿನಲ್ಲಿ ಸಿಕ್ಕಿಹಾಕಿಕೊಂಡ ಗೋವನ್ನು ಮತ್ತು ದುರ್ದೈವದಿಂದ ಅವಸ್ಥೆ ಪಡುತ್ತಿರುವ, ರೋಗದಿಂದ ಬಳಲುತ್ತಿರುವ ವಿಪ್ರನನ್ನು ಕಂಡು ಅವರನ್ನು ಯಾರು ಉದ್ಧರಿಸುತ್ತಾರೋ ಅವರು ಎಂದಿಗೂ ಯಮನ ಮನೆ ನೋಡುವುದಿಲ್ಲ.



# ವಾಸ್ತು ವಿಜ್ಞಾನದ ನಿಷ್ಕೃಷ್ಟತೆ

**ಸಗ್ರಿ ರಾಘವೇಂದ್ರ ಉಪಾಧ್ಯಾಯ**

ಮಹಾಭಾರತಾನುಸಂಧಾನ

ಜನಮೇಜಯ ತನ್ನ ಅಪ್ಪ ಪರೀಕ್ಷಿತನ ಸಾವಿಗೆ ಕಾರಣನಾದ ತಕ್ಷಕ ಸರ್ಪವನ್ನು ಸುಟ್ಟು ಬಿಡಬೇಕೆಂದು 'ಸರ್ಪಸತ್ರ' ನಡೆಸುವುದೆಂದು ಸಂಕಲ್ಪಿಸಿದ್ದಾನೆ. ಹಸ್ತಿನಪುರದಿಂದ ಹೊರಗಿರುವ 'ತಕ್ಷಶಿಲೆ' ಎಂಬಲ್ಲಿ ಸರ್ಪಸತ್ರ ನಡೆಸುವುದೆಂದು ನಿಶ್ಚಯಿಸಲಾಗಿದೆ.

ಸರ್ಪಸತ್ರದ ಮೊದಲ ಅಂಗ - ಆ ಸತ್ರ ನಡೆಯಬೇಕಾದ ಸ್ಥಳದಲ್ಲಿ ಯಜ್ಞ ಮಂಟಪದ ನಿರ್ಮಾಣಕ್ಕೆ ಬೇಕಾದಂತೆ ಸ್ಥಳವನ್ನು ಅಳೆಯುವುದು. ಜ್ಞಾನಿಗಳಾದ ಉತ್ತಮ ವಿದ್ವಾಂಸರ ಮೂಲಕ ಶಾಸ್ತ್ರೀಯವಾಗಿ ಯಜ್ಞ ಮಂಟಪ ನಿರ್ಮಾಣಕ್ಕಾಗಿ ಸ್ಥಳದ ಮಾಪನಪ್ರಕ್ರಿಯೆ ನಡೆದಿದೆ-

**ತತಸ್ತೇ ಋತ್ವಿಜಸ್ತಸ್ಯ ಶಾಸ್ತ್ರತೋ ದ್ವಿಜಸತ್ತಮ ।**
**ತಂ ದೇಶಂ ಮಾಪಯಾಮಾಸುರ್ಯಜ್ಞಾಯತನಕಾರಣಾತ್ ।**
**ಯಥಾವದ್ ವೇದವಿದ್ವಾಂಸಃ ಸರ್ವೇ ಬುದ್ಧೇಃ ಪರಂ ಗತಾಃ ॥**

ಆ ಸ್ಥಳದಲ್ಲಿ ವಿಧಿವತ್ತಾಗಿ ಸಮೃದ್ಧವಾದ ಯಜ್ಞಮಂಟಪದ ನಿರ್ಮಾಣವೂ ಆಯಿತು. ಅಲ್ಲಿ ಜನಮೇಜಯ ಸರ್ಪಸತ್ರಕ್ಕಾಗಿ ದೀಕ್ಷಿತನೂ ಆದ.

ಯಜ್ಞಮಂಟಪ ನಿರ್ಮಾಣವಾಗುತ್ತಿರುವಾಗಲೇ 'ಲೋಹಿತಾಕ್ಷ' - ಎಂಬ ಒಬ್ಬ ಸೂತ, ಪೌರಾಣಿಕ, ವಾಸ್ತು ವಿದ್ಯಾವಿಶಾರದನು ಯಜ್ಞಕ್ಕೆ ವಿಘ್ನ ಒಡ್ಡುವ ನಿಮಿತ್ತ ಉಂಟಾಯಿತು (ನಿಮಿತ್ತಂ ಮಹದುತ್ಪನ್ನಂ ಯಜ್ಞವಿಘ್ನಕರಂ ತದಾ) ಎಂದು ಸೂಚಿಸುವನು.

ಆ ಸಂದರ್ಭದಲ್ಲಿ ಧೈರ್ಯವಾಗಿ, ಸ್ಪಷ್ಟವಾಗಿ ಹೇಳಿದ ಮಾತು ಹೀಗಿದೆ -

**ಯಸ್ಮಿನ್ ದೇಶೇ ಚ ಕಾಲೇಚ ಮಾಪನೇಯಂ ಪ್ರವರ್ತಿತಾ ।**
**ಬ್ರಾಹ್ಮಣಂ ಕಾರಣಂ ಕೃತ್ವಾ ನಾಯಂ ಸಂಸ್ಥಾಸ್ಯತೇ ಕ್ರತುಃ ॥**

ಆದಿ ಪರ್ವ 51-16

ಯಜ್ಞ ಮಂಟಪದ ನಿರ್ಮಾಣಕ್ಕಾಗಿ ಯಾವ ದೇಶದಲ್ಲಿ ಯಾವ ಕಾಲದಲ್ಲಿ ಸ್ಥಳದ ಅಳೆಯುವಿಕೆಯ ಪ್ರಕ್ರಿಯೆ ಪ್ರಾರಂಭಿಸಲ್ಪಟ್ಟಿದೆಯೋ ಅದನ್ನು ಪರಿಶೀಲಿಸಿದಲ್ಲಿ ಸ್ಪಷ್ಟವಾಗುವುದು - ಒಬ್ಬ ಬ್ರಾಹ್ಮಣನನ್ನು ನಿಮಿತ್ತವಾಗಿಸಿಕೊಂಡು ಈ ಯಜ್ಞ ಪೂರ್ಣಗೊಳ್ಳುವುದಿಲ್ಲ - ಎಂದು. ಈ ಎಚ್ಚರಿಕೆಗನುಗುಣವಾಗಿ ಜನಮೇಜಯ ತಾನು ದೀಕ್ಷೆ ಹೊತ್ತ ಕ್ಷಣದಿಂದ ಯಾವ ಅಪರಿಚಿತ ಬ್ರಾಹ್ಮಣನನ್ನೂ ಯಜ್ಞಮಂಟಪದೊಳಗೆ ಬಿಡಬಾರದು. ನ ಹಿ ಮೇ ಕಶ್ಚಿದಜ್ಞಾತಃ ಪ್ರವಿಶೇತ್ ಎಂದು ದ್ವಾರಪಾಲಕರಿಗೆ ಅಣತಿ

**ವೇದಾಂತ ಉಪನ್ಯಾಸಕರು, ಸಂಸ್ಕೃತ ಕಾಲೇಜು, ಉಡುಪಿ**



ನೀಡುವನು.

ಸರ್ಪಸತ್ರ ಪ್ರಾರಂಭವಾಗುವುದು; ಅನೇಕ ಸರ್ಪಗಳ ಆಹುತಿ ನಡೆಯುವುದು.

ಆಸ್ತೀಕ ಎಂಬ ಬ್ರಾಹ್ಮಣ ಆ ಯಜ್ಞ ಮಂಟಪದತ್ತ ಸಾಗುವನು. ದ್ವಾರಪಾಲಕರು ತಡೆಯುವರು. ಆದರೆ ಆ ಆಸ್ತೀಕ ರಾಜನನ್ನು, ಸದಸ್ಯರನ್ನು, ಋತ್ವಿಜರನ್ನು, ಯಜ್ಞವನ್ನು ಬಾಯ್ತುಂಬ ಹೊಗಳುವನು. ಇದರಿಂದ ಪ್ರಸನ್ನನಾದ ಜನಮೇಜಯ ಆ ಆಸ್ತೀಕನಿಗೆ ವರ ಕೇಳಲು ಅವಕಾಶ ನೀಡುವನು. ಆಸ್ತೀಕ ಕೇಳುವನು - 'ಸತ್ರಂ ತೇ ವಿರಮತ್ವೇತತ್ ನ ಪತೇಯುರಿಹೋರಗಾಃ' - ಸರ್ಪಸತ್ರ ಇಲ್ಲಿಗೇ ನಿಲ್ಲಲಿ. ಸರ್ಪಗಳ ಆಹುತಿ ನಡೆಯದಿರಲಿ. ಈ ವರದ ಬದಲಿಗೆ ಬೇರೆ ವರ ಕೇಳು ಎಂದರೂ ಆಸ್ತೀಕ ಪಟ್ಟು ಹಿಡಿದು ಆ ವರವನ್ನೇ ಕೇಳುವನು. ಸದಸ್ಯರ ಸೂಚನೆಯ ಮೇರೆಗೆ ಜನಮೇಜಯ ಆಸ್ತೀಕನಿಗೆ ಆ ವರನ್ನು ನೀಡುವನು. ಅದರ ಫಲವಾಗಿ ಸರ್ಪಸತ್ರ ಅಲ್ಲಿಗೇ ಕೊನೆಗೊಳ್ಳುವುದು. ಋತ್ವಿಜರಿಗೆ, ಸದಸ್ಯರಿಗೆಲ್ಲ ಸಾಕಷ್ಟು ದಕ್ಷಿಣೆ ಕೊಟ್ಟ ಜನಮೇಜಯ ಲೋಹಿತಾಕ್ಷ ಬಡಗಿಗೂ ಸಂಭಾವನೆಯನ್ನು ನೀಡಲು ಮರೆಯುವುದಿಲ್ಲ ಎನ್ನುವರು ಉಗ್ರಶ್ರವಸ್ ಸೂತರು -

**ಲೋಹಿತಾಕ್ಷಾಯ ಸೂತಾಯ ತಥಾ ಸ್ಥಪತಯೇ ವಿಭುಃ ।**
**ಯೇನೋಕ್ತಂ ತಸ್ಯ ತತ್ರಾಗ್ರೇ ಸರ್ಪಸತ್ರನಿವರ್ತನೇ ॥**
**ನಿಮಿತ್ತಂ ಬ್ರಾಹ್ಮಣ ಇತಿ ತಸ್ಮೈ ವಿತ್ತಂ ದದೌ ಬಹು।**
**ದತ್ವಾ ದ್ರವ್ಯಂ ಯಥಾನ್ಯಾಯಂ ಭೋಜನಾಚ್ಛಾದನಾನ್ವಿತಮ್।**
**ಪ್ರೀತಸ್ತಸ್ಮೈ ನರಪತಿರಪ್ರಮೇಯ ಪರಾಕ್ರಮಃ ॥**

- ಆದಿ 58-12, 13, 14

ಸರ್ಪ ಸತ್ರದ ಪ್ರಾರಂಭದಲ್ಲಿಯೇ ಯಜ್ಞಮಂಟಪ ನಿರ್ಮಾಣದ ವಾಸ್ತು ದೋಷದಿಂದಾಗಿ ಒಬ್ಬ ಬ್ರಾಹ್ಮಣ ನಿಮಿತ್ತವಾಗಿ ಈ ಯಜ್ಞ ಮಧ್ಯದಲ್ಲಿಯೇ ನಿಂತು ಹೋಗುವುದೆಂದು ಭವಿಷ್ಯ ಹೇಳಿದ್ದ ವಾಸ್ತುಶಾಸ್ತ್ರ ವಿಶಾರದನಾಗಿದ್ದ ಲೋಹಿತಾಕ್ಷ ಸೂತನ ವಾಸ್ತು ಶಾಸ್ತ್ರ ಪಾಂಡಿತ್ಯವನ್ನು ಮೆಚ್ಚಿಕೊಂಡ ಜನಮೇಜಯ ಅವನನ್ನು ಬರಮಾಡಿಕೊಂಡು ಅವನ ಪಾಂಡಿತ್ಯಕ್ಕೆ ಅನುಗುಣವಾಗಿ ಬರೇ ತುಂಬ ಹಣವನ್ನಷ್ಟೇ ಅಲ್ಲದೆ, ಪಟ್ಟೆ ಪೀತಾಂಬರ, ಭೋಜನ ಇತ್ಯಾದಿಗಳನ್ನೂ ನೀಡಿ ಗೌರವಿಸಿದನು.

## ವಾಸ್ತು ವಿಜ್ಞಾನದ ನಿಷ್ಕೃಷ್ಟತೆ :

ಮಹಾಭಾರತದ ಈ ನಿರೂಪಣೆಯಿಂದ ಜನಮೇಜಯನ ಪಾಂಡಿತ್ಯ ಪ್ರೇಮಿತ್ವಗುಣದ ಜೊತೆಗೆ ವಾಸ್ತು ವಿಜ್ಞಾನದ ನಿಖರತೆಯೂ ನಿಷ್ಕೃಷ್ಟತೆಯೂ ಸ್ಪಷ್ಟವಾಗುವುದು.

ಹಾಗಾದರೆ ವಾಸ್ತು ವಿಜ್ಞಾನವನ್ನು ನೂರಕ್ಕೆ ನೂರು ಪಾಲು ಅಳವಡಿಸಿಕೊಂಡು ನಿರ್ಮಿಸಲಾಗುವ ಗೃಹಗಳಲ್ಲಿ, ಮಠ, ಮಂದಿರಗಳಲ್ಲಿ ಯಾವುದೇ ಅನಿಷ್ಟ ಆಗದೆ, ವಾಸ್ತುಶಾಸ್ತ್ರದಲ್ಲಿ ತಿಳಿಸಿದಂತೆ ಯಾವಾಗಲೂ ಸುಖಸಮೃದ್ಧಿ ಸಿದ್ಧಿಸಬೇಕು ತಾನೇ? ಆದರೆ ಇದಕ್ಕೆ ವಿಪರೀತವಾಗಿ ಯಾಕೆ ಕಾಣಿಸಿಕೊಳ್ಳುವುದು ? ಎಂದು ಸಹಜವಾಗಿ ಮೂಡುವ ಸರ್ವಸಾಮಾನ್ಯ ಪ್ರಶ್ನೆಗೂ ಮಹಾಭಾರತದಲ್ಲಿ ಸಮಾಧಾನ ಸೂಚಿತವಾಗಿದೆ.

ಅಷ್ಟೆಲ್ಲ ಉತ್ತಮೋತ್ತಮ ವಿದ್ವಾಂಸರ, ಸ್ಥಪತಿಗಳ, ವಾಸ್ತು ವಿಜ್ಞಾನ ತಜ್ಞರ ಮೂಲಕ ಸರ್ಪಸತ್ರದ ಯಜ್ಞ ಮಂಟಪವನ್ನು ನಿರ್ಮಿಸಿದ ಜನಮೇಜಯನ ಆ ನಿರ್ಮಾಣ ಪ್ರಕ್ರಿಯೆಯಲ್ಲಿ ಯಾಕೆ ನ್ಯೂನತೆ ನುಸುಳಿಕೊಂಡಿತು? ಒಂದೊಮ್ಮೆ ಏನೋ ಕಣ್ತಪ್ಪಿ ಹಾಗಾಯಿತೆಂದರೂ 'ಲೋಹಿತಾಕ್ಷ' ತಿಳಿಸಿದ ಮೇಲಾದರೂ ಸಾಕಷ್ಟು ಎಚ್ಚರಿಕೆ ವಹಿಸಿದ್ದ ಜನಮೇಜಯ ಆಸ್ತೀಕ ಬ್ರಾಹ್ಮಣ ತನ್ನ ಯಜ್ಞ ಮಂಟಪಕ್ಕೆ ಬರುವಂತೆ ಯಾಕೆ ಅವಕಾಶವನ್ನು ಕಲ್ಪಿಸಿದ?

ಇದಕ್ಕೆ ಪ್ರಬಲವಾದ ದೈವಸಂಕಲ್ಪ ಹಾಗೆಯೇ ಇತ್ತು. ಅದಕ್ಕನುಗುಣವಾಗಿ ಯಜ್ಞ ಮಂಟಪ ನಿರ್ಮಾಣ ಕಾಲದಲ್ಲಿ ಜನಮೇಜಯನ ವಾಸ್ತುತಜ್ಞರಿಗೆ ಕಣ್ತಪ್ಪಿತು. ಹಾಗೆಯೇ ಅಪರಿಚಿತ ಬ್ರಾಹ್ಮಣರನ್ನು ಯಜ್ಞ ಮಂಟಪಕ್ಕೆ ಬಿಡಬಾರದೆಂದು ಆದೇಶಿಸಿದ್ದ ಜನಮೇಜಯನಿಗೆ ಆಸ್ತೀಕನ ವಿಷಯದಲ್ಲಿ ಹಾಗೆ ನಡೆದುಕೊಳ್ಳಲು ಮರೆತು ಹೋಯಿತು - ಎಂದು ಒಪ್ಪಿಕೊಳ್ಳಬೇಕಷ್ಟೇ.

ಇದನ್ನೇ ಶ್ರೀಮದಾಚಾರ್ಯರು ಭಾಗವತತಾತ್ಪರ್ಯನಿರ್ಣಯದಲ್ಲಿ (6-17-30) ವರ, ಶಾಪ, ಗುಣ, ದೋಷ - ಇತ್ಯಾದಿಗಳ ವಿಷಯದಲ್ಲಿ ಸ್ಪಷ್ಟಪಡಿಸಿರುವರು -

**ಯತ್ತದ್ ಭಗವತಾ ಕ್ಲಪ್ತಂ ತದೇವ ನಿಯತಂ ಭವೇತ್ ।**

**ಅತೋಽನ್ಯೇಷಾಂ ವರಃ ಶಾಪೋ ಗುಣದೋಷಪ್ರಕರ್ತೃತಾ ।**

**ಸ್ವತಃ ಪ್ರಾಪ್ತಾತ್ ಭೇದಕೃತಿಃ ...**

ವಿಶ್ವದಲ್ಲಿ ಏನೇನು ಘಟನೆಗಳು ನಡೆಯಬೇಕೋ ಅವೆಲ್ಲ 'ಸತ್ಯಸಂಕಲ್ಪ'ನಾದ ಭಗವಂತನ ಅನಾದಿಸಂಕಲ್ಪಕ್ಕನುಗುಣವಾಗಿ ಮೊದಲೇ ನಿರ್ಧಾರಿತಗಳಾಗಿರುವವು. ಆ ರೀತಿ ನಡೆಯಬೇಕಾದ ಘಟನೆಗಳಿಗೆ ಯಾರದ್ದೋ ವರಗಳು ಅಥವಾ ಶಾಪಗಳು ಬರೇ ನಿಮಿತ್ತಗಳು ಹೊರತು ಆ ವರದಿಂದಾಗಿಯೇ, ಶಾಪದಿಂದಾಗಿಯೇ ಅದು ಹಾಗೆ ನಡೆಯಿತು ಎಂದು ತಿಳಿಯಬಾರದು.

ಅದರಂತೆ ಜನಮೇಜಯನ ಸರ್ಪಸತ್ರ ಆಸ್ತೀಕನಿಂದಾಗಿ ಮಧ್ಯೇ ನಿಂತು ಹೋಗಬೇಕೆಂಬುದು ಭಗವಂತನ ಅನಾದಿಸಂಕಲ್ಪ ಮೂಲಭೂತಕಾರಣ. ಈ ಸಂಕಲ್ಪಕಾರ್ಯಗತವಾಗುವಂತೆ ಸರ್ಪಸತ್ರದ ಯಜ್ಞಮಂಟಪದ ನಿರ್ಮಾಣದಲ್ಲಿಯ ನ್ಯೂನತೆ, ರೂಪವಾದ ದೋಷ ಹಾಗೂ ಆಸ್ತೀಕನನ್ನು ಯಜ್ಞ ಮಂಟಪದೊಳಗೆ ಸೇರಿಸಿಕೊಳ್ಳಬಾರದೆಂಬ ವಿವೇಕದ ಕೊರತೆಯ ದೋಷ - ಇವು ನಿಮಿತ್ತಗಳಾಗಿ ಕೆಲಸ ಮಾಡಿವೆಯಷ್ಟೇ.

ಆದುದರಿಂದ ಜನಮೇಜಯನ ವಿಷಯದಲ್ಲಿ ಹೇಗೋ ಹಾಗೆ ವಾಸ್ತು ವಿಜ್ಞಾನ ಎಷ್ಟು ನಿಷ್ಕೃಷ್ಟವಾಗಿ ಮನೆ ಮಂದಿರಗಳ ಭವಿಷ್ಯವನ್ನು ತಿಳಿಸಬಲ್ಲದಾದರೂ 'ಅನಾದಿಸಂಕಲ್ಪ'ನ ಸಂಕಲ್ಪಕ್ಕನುಗುಣವಾಗಿ ಬದುಕಿನ ಆಗುಹೋಗುಗಳು ನಡೆಯುತ್ತಿರುವುದರಿಂದ 'ವಾಸ್ತು ವಿಜ್ಞಾನ'ದ ಲೆಕ್ಕಾಚಾರಗಳನ್ನು ನಮಗೆ ಅಳವಡಿಸಿಕೊಳ್ಳಲಾಗುವುದಿಲ್ಲ. ಅಷ್ಟೇ ಹೊರತು 'ವಾಸ್ತು ವಿಜ್ಞಾನ' ಸ್ವಲ್ಪ ಪ್ರಮಾಣದಲ್ಲಿ ಅಪ್ರಾಮಾಣಿಕ ಎನಿಸದು.

**( ಉಡುಪಿ ಶ್ರೀ ರಾಮನಾಥಾಚಾರ್ಯ ಪ್ರವಚನದ ಸ್ಫೂರ್ತಿ)**

# ನಿವೃತ್ತಿ - ಪ್ರವೃತ್ತಿ

ಎ. ಬಿ. ಕುಂಜಾರ್, ಬೆಂಗಳೂರು

ವಯಸ್ಸು ಇನ್ನೂ ಐವತ್ತು ಮತ್ತು ಎಂಟು. ಬದುಕು ಬಲುದೂರ ಸಾಗಲುಂಟು ನೂರೆಂಟು ವಸಂತಗಳ ಸಂತಸವನು ಅನುಭವಿಸಲುಂಟು. ಅದಕ್ಕಾಗಿ ಗುರುಹಿರಿಯರ ಆಪ್ತೇಷ್ಟರ ಹಾರೈಕೆಯೂ ಮೇಲುಂಟು - ಶತಮಾನಂ ಭವತಿ । ಶತಾಯುಃ ಪುರುಷಃ । ಶತೇಂದ್ರಿಯೇ ಆಯುಷ್ಯೇಂದ್ರಿಯೆ ಪ್ರತಿತಿಷ್ಠತಿ ।- ಎಂದು

ಆದರೇನಂತೆ, ಬದುಕು ನೀರಸವಾಗಿ ಕಾಣಹತ್ತಿದೆ. ಹೇಳದೆ ಕೇಳದೆ ಜಿಗುಪ್ಸೆ ಅಕಾಲದಲ್ಲಿ ಚಿಗುರೊಡೆಯುತ್ತಿದೆ. ಉತ್ಸಾಹದ ಚಿಲುಮೆ ಉಡುಗತೊಡಗಿದೆ. ಆಸಕ್ತಿ ಶಕ್ತಿ ಕಳಕೊಂಡು ಕಳೆ ಕಳೆದುಕೊಳ್ಳುತ್ತಿದೆ. ಚಿಂತೆಗಳು ಕಂತೆ ಕಂತೆಯಾಗಿ ಉಬ್ಬರದ ಅಲೆಗಳಂತೆ ಅಪ್ಪಳಿಸಲು ಉಪಕ್ರಮಿಸಿವೆ. ವ್ಯಗ್ರತೆ ನಿತ್ಯ ಸಂಗಾತಿಯಾಗಲು ಬಯಸುತ್ತಿದೆ. ಕತ್ತಲಾಗುತ್ತಲೇ ನಿದ್ರೆ ಹತ್ತದ ತಳಮಳ ಒಂದೆಡೆ. ಬದುಕು ಮುಗಿದೇ ಹೋದ ಕಳವಳ ಇನ್ನೊಂದೆಡೆ. ಖಿನ್ನತೆ ಬೆಟ್ಟದೆತ್ತರಕ್ಕೆ ಬೆಳೆಯುತ್ತಿದೆ. ನೆಮ್ಮದಿ ಮರೀಚಿಕೆಯಂತೆ ಕಾಡುತ್ತ ಸಾಗುತ್ತಿದೆ. ಹೀಗೆ ಇನ್ನೂ ಹತ್ತಾರು ಬಗೆಯ ಅನಪೇಕ್ಷಿತ ಅತಿಥಿಗಳು ಆಸರೆ ಬಯಸಿ ನೆಮ್ಮದಿಯ ಹೊಸ್ತಿಲ ಬಳಿ ಕಾದು ಕುಳಿತಿವೆ.

ಇದು ವೃತ್ತಿಯಿಂದ ನಿವೃತ್ತಿ ಪಡೆದ ಅನೇಕರ ಕಥೆ. ಅಧಿಕಾರ ಅಂತಸ್ತುಗಳನ್ನು ಬಿಟ್ಟುಕೊಟ್ಟು ಹೊರಬಂದ ವರಿಷ್ಠರ ವ್ಯಥೆ. ನಿವೃತ್ತ್ಯುತ್ತರದ ಬಗ್ಗೆ ಒಂದಿನಿತೂ ಪೂರ್ವದಲ್ಲೇ ಯೋಚಿಸದವರ ಬವಣೆಯ ಗಾಥೆ. ಜೀವನವು ಚಕ್ರಪಂಕ್ತಿಯಂತೆ ಏಳು - ಬೀಳು ಉಳ್ಳದೆಂದು ಅರಿಯದವರ ಗೋಳು. ನಿವೃತ್ತಿ - ಜೀವನ - ವಾಹಿನಿಗೆ ಪ್ರವೃತ್ತಿಯೇ ಮೂಲ ಸೆಲೆ ಎಂಬುದನ್ನು ಅರ್ಥವಿಸಿಕೊಳ್ಳದವರನ್ನು ಕಾಡುವ ಮೌಢ್ಯ.

ಇನ್ನಿಲ್ಲವಾದ ಅಧಿಕಾರ ಅಂತಸ್ತುಗಳು. ಕಳೆದು ಹೋದ ಗೌರವಾದರಗಳು. ವೃತ್ತಿಯಲ್ಲಿ ರೂಢಿಸಿಕೊಂಡಿರುವ ಗತ್ತುಗಾರಿಕೆಗಳಿಗೆ ಇಂಬು ಇಲ್ಲದ ಗೃಹಬಂಧನ. ದುಷ್ಟಯೋಚನೆಗಳ ಧಾಳಿಗೆ ಧೂಳೀಪಟವಾದ ನಿಷ್ಕ್ರಿಯ ಮನಸ್ಸು. ಮನದಂಗಳದಲ್ಲಿ ಲಾಸ್ಯವಾಡುತ್ತಿರುವ ನಕಾರಾತ್ಮಕ ಚಿಂತನೆಗಳು. ಇವುಗಳ ಫಲಿತವಾಗಿ ಮೂಡುವ ಖಿನ್ನತೆ. ತತ್ಫಲಿತವಾದ ಆವೇಗಗಳು ಉದ್ವೇಗಗಳು - ಇವೆಲ್ಲ ಮನೋವ್ಯಾಧಿಗೆ ಎರಕವಾಗಬಲ್ಲವುಗಳೇ. ಮಾನಸಿಕ ವೈಕಲ್ಯವು ದೈಹಿಕ ವೈಫಲ್ಯಕ್ಕೂ ಕಾರಣ ಆಗಬಲ್ಲುದು. ಖಿನ್ನತೆ ಉದ್ವೇಗ ಅತಿಯೋಚನೆ ಇತ್ಯಾದಿಗಳು ಮಧುಮೇಹಾಂಕುರಕ್ಕೆ ಹಸನಾದ ಕ್ಷೇತ್ರಗಳು. ಉಲ್ಬಣಿಸುವ ಮಧುಮೇಹವು ಹೃದಯಾಘಾತದಲ್ಲಿ ಅಥವಾ ಮೂತ್ರಪಿಂಡ ವೈಫಲ್ಯದಲ್ಲಿ ಅಥವಾ ದೃಷ್ಟಿನಾಶದಲ್ಲಿ ಪರ್ಯವಸಾನ ಆಗುವ ಸಾಧ್ಯತೆಯೂ ಇದೆ.

126/A, 1ನೇ ಮಹಡಿ, 1ನೇ ಕ್ರಾಸ್, ಕಾಳಪ್ಪ ಬ್ಲಾಕ್, ಶ್ರೀನಗರ, ಬೆಂಗಳೂರು – 560 050. ದೂ. 26601259

ನಿವೃತ್ತಿಯ ಅನಂತರದ ಈ ಎಲ್ಲ ಅವಾಂತರಗಳಿಗೆ ಪ್ರವೃತ್ತಿಯೊಂದೇ ಮಹಾಪರಿಹಾರ. ವೃತ್ತಿ ನಿರತರಾಗಿದ್ದ ನಿವೃತ್ತರು ನಿಷ್ಕ್ರಿಯರಾಗಿರುವುದು ಎಂದರೆ ಅಪಾಯಗಳಿಗೆ ನಾಂದಿ ಹಾಡಿದಂತೆ. ಸ್ವಹತ್ಯೆಗೆ ಕೈ ಇಕ್ಕಿದಂತೆ. ಲವಲವಿಕೆಯ ಜೀವನವನ್ನು ಅಲ್ಲಗಳೆದಂತೆ. ನಿವೃತ್ತಿಜೀವನದಲ್ಲಿ ಕೂತುಂಬುದಕ್ಕಾಗಿ ಹೇರಳ ಸಂಗ್ರಹಿಸಿಟ್ಟರೂ ನಿಷ್ಕ್ರಿಯರಾಗುವುದು ಸರ್ವಥಾ ಸಮರ್ಥನೀಯವಲ್ಲ. ಇದ್ದುದರಲ್ಲಿ ಸಂತೃಪ್ತಿ ಕಂಡುಕೊಳ್ಳುವವರೂ ಪ್ರವೃತ್ತಿನಿರತರಾಗುವುದು ಅಪೇಕ್ಷಣೀಯವೇ. ಹೀಗೆ ತೊಡಗಿಸಿಕೊಳ್ಳುವುದರಿಂದ ದೂರವಾಗುವ ಆಪತ್ತುಗಳನ್ನೇ ಪರೋಕ್ಷ ಸಂಪತ್ತು ಎಂದು ತಿಳಿಯಬೇಕು.

ಪ್ರವೃತ್ತಿಯೊಂದರಲ್ಲಿ ತೊಡಗಿಸಿಕೊಳ್ಳುವುದರಿಂದ ಜನಸಂಪರ್ಕ ಲಭ್ಯ. ಒಂಟಿತನದಿಂದ ಹೊರಬರುವುದು ಶಕ್ಯವಾಗುತ್ತದೆ. ಅಭಿಪ್ರಾಯಗಳನ್ನು, ಭಾವನೆಗಳನ್ನು, ಆವೇಗಗಳನ್ನು ಉದ್ವೇಗಗಳನ್ನು ಹಂಚಿಕೊಳ್ಳುವುದು ಸಾಧ್ಯವಾಗುತ್ತದೆ. ಮನದ ಭಾರ ಕಳೆದು ನಿರಾಳತನ ಅನುಭವಿಸುವುದು ಸುಲಭವಾಗುತ್ತದೆ. ಮನಸ್ಸು ಕಾರ್ಯೋನ್ಮುಖವಾಗುವುದರಿಂದ ದುಷ್ಟಯೋಚನೆಗಳನ್ನು ದೂರವಿಡಲು, ನೇತ್ಯಾತ್ಮಕ ಚಿಂತನೆಗಳಿಂದ ಮುಕ್ತಿಪಡೆಯಲು, ಮನಃಪ್ರಸನ್ನತೆ ಸಾಧಿಸಲು ಯುಕ್ತ ಭೂಮಿಕೆ ಸಿದ್ಧವಾಗುತ್ತದೆ. ಲವಲವಿಕೆ ನೆಲೆಗೊಳ್ಳಲು ಪ್ರೇರಕವಾಗುತ್ತದೆ. ನೆಮ್ಮದಿ ಸ್ಥಿರವಾಗಲು ಅನುಕೂಲವಾಗುತ್ತದೆ.

ಬಾಳ ಮುಸ್ಸಂಜೆ ಸಮೀಪಿಸುತ್ತಿದ್ದಂತೆ ಕಾಯ ಕಮರುವುದು ಸಹಜ. ದೃಢ ನಿಲುವು ತೋರಿದ್ದಾದರೆ ಹದಿಹರೆಯದ ಸ್ಥಿತಿಯಲ್ಲೇ ತೊಡಗಿಸಿಕೊಳ್ಳುವ ದೃಢ ನಿಲುವು. ಸದಾ ಸಕ್ರಿಯವಾಗಿರುವ ಹುಮ್ಮಸ್ಸು. ಕ್ರಿಯಾಶೀಲತೆಯೊಂದೇ ಮನಸ್ಸನ್ನು ಉತ್ಸುಕವಾಗಿಡಬಲ್ಲ ಟಾನಿಕ್ಕು ಎಲ್ಲ ಜೀವಸತ್ವಗಳ ಬಿ. ಕಾಂಪ್ಲೆಕ್ಸ್. ಚಿಂತೆಯನ್ನು ಒದ್ದೋಡಿಸುವ ಆ್ಯಂಟಿ - ಬಯೋಟಿಕ್ ಕೂಡ.

ಅನೇಕ ನಿವೃತ್ತರು ಧನ್ಯರಿದ್ದರೂ ದಯನೀಯರಿರುವರು. ಎಲ್ಲ ಇದ್ದೂ ಏನೂ ಇಲ್ಲದ ಸ್ಥಿತಿ ಇವರದ್ದು. ಭವ್ಯವಾದ ಸ್ವಂತ ವಸತಿ ಭವನ ಇದ್ದರೂ ಶೂನ್ಯತೆ ಇವರನ್ನು ಶೂಲೆಯಾಗಿ ಕಾಡುತ್ತದೆ. ಅಚ್ಚುಕಟ್ಟಾದ ಸಂಸಾರ. ಆರೋಗ್ಯ ಸಂಪನ್ನೆಯಾದ ಮಡದಿ. ಕೈತುಂಬ ಸಂಪಾದನೆ ಇರುವ ಗುಣವಂತ ಮಕ್ಕಳು. ಉನ್ನತೋನ್ನತ ಹುದ್ದೆಗಳಲ್ಲಿ ಆಸೀನರಿದ್ದರೂ ವಿನೀತರಾದ ಅಳಿಯಂದಿರು. ಅರಿತು ಅನುಸರಿಸುವ ಸೊಸೆ. ಮುದ್ದಾದ ಆರೋಗ್ಯಸಂಪನ್ನ ಮೊಮ್ಮಕ್ಕಳು. ಏನಿದ್ದರೇನು. ಯಾರೊಬ್ಬರ ಮುಖದರ್ಶನವಾಗದೆ ವರುಷಗಳೇ ಉರುಳಿವೆ. ಎಲ್ಲರೂ 'ಫೋರೇನ್' ಪ್ರಿಯರೇ. ಬಂಗಲೆಯಲ್ಲಿ ಪತಿ - ಪತ್ನಿಯರಿಬ್ಬರೆ! ತಮ್ಮ ಸಾಧನೆಯ, ಮಾಡಿದ ತ್ಯಾಗದ, ಗಳಿಸಿದ ಧನ್ಯತೆಯ ಮೆಲುಕು ಮಾತ್ರ ಇವರ ಪಾಲಿಗೆ. ದಯನೀಯತೆಯನ್ನು ಅರ್ಥವಿಸಿಕೊಂಡವರು ಇಲ್ಲವೇ ಇಲ್ಲ. ಇದೂ ಒಂದು ಬಗೆಯ ಬೇಗೆಯಲ್ಲವೇ? ಇಂಥವರು ಪ್ರವೃತ್ತಿಮುಖರಾದರೆ ಮಾತ್ರ ನೆಮ್ಮದಿ ನೆಲೆಸೀತು.

ಅನೇಕ ಪತಿ - ಪತ್ನಿಯರದು ವೈರುಧ್ಯದ ದೃಷ್ಟಿ - ಪರಸ್ಪರ ವಿರೋಧಿ ನಿಲುವು. ತದ್ವಿರುದ್ಧವಾದ ಆಲೋಚನಾ ಕ್ರಮ. ಸಪ್ತಪದಿ ವಚನ ಸ್ವೀಕಾರದ - ಸಖಾಭವ ಮಟ್ಟಕ್ಕೇರಲಾಗದ ದಾಂಪತ್ಯ. ಲೈಂಗಿಕ ಕಾಮ ಉದ್ದೀಪ್ತವಾಗಿದ್ದಷ್ಟು ಕಾಲದಲ್ಲಿ ಏನೋ ಒಂದು

ಬಗೆಯ ಹೊಂದಾಣಿಕೆ ಇತ್ತು. ಈಗ ಅವೆರಡಕ್ಕೂ ಕುತ್ತು. ಮಾತಿಗೆ ಪ್ರತಿಮಾತು. ಒಂದು ಏತಿ. ಇನ್ನೊಂದು ಪ್ರೇತಿ. ಕಲಹ ಯಾವತ್ತೂ ಹುಟ್ಟಿಕೊಳ್ಳಬಹುದಾದ ಸ್ಫೋಟಕ ಸ್ಥಿತಿ. ಇಬ್ಬರಲ್ಲಿ ಒಬ್ಬರಾದರೂ ಮೂಕರಾದರೆ ನಿಭಾವಣೆ ತುಸು ಸಾಧ್ಯ. ಇಬ್ಬರದೂ 'ಬೊಂಬಾಯಿ' ಯಾದರೆ ಕೇಳೋದೇ ಬೇಡ. ಇಂಥವರಿಗೆ ಪ್ರವೃತ್ತಿಯೊಂದು ಅತ್ಯಗತ್ಯವೇ.

ನಿವೃತ್ತರು ಅನುಸರಿಸಬಹುದಾದ ಪ್ರವೃತ್ತಿ ಮಾರ್ಗಗಳನ್ನು ಹೀಗೆ ಪಟ್ಟಿ ಮಾಡಬಹುದು. ವಿಸ್ತೃತವಾದ ಓದು - ಬರಹಗಳಲ್ಲಿ ತೊಡಗುವುದು. ಸಂಘ ಸಂಸ್ಥೆಗಳನ್ನು ಸೇರಿ ಅಲ್ಲಿನ ಕಾರ್ಯಗಳಲ್ಲಿ ಸಕ್ರಿಯವಾಗಿ ಪಾಲುಗೊಳ್ಳುವುದು. ಅಧ್ಯಯನ - ಅಧ್ಯಾಪನದಲ್ಲಿ ನಿರತವಾಗುವುದು, ಪ್ರವಚನ ನೀಡುವುದು ಅಥವಾ ಕೇಳುವುದು. ಧಾರ್ಮಿಕ ಸಂಸ್ಥೆಗಳಲ್ಲಿ ಸೇವಾರೂಪವಾದ ಯಾವುದೇ ಕಾಯಕ ನಿರ್ವಹಿಸುವುದು. ಆಸಕ್ತಿ, ತಾಕತ್ತು, ಚಾಣಾಕ್ಷತನ ಇರುವವರು ಸಕ್ರಿಯ ರಾಜಕಾರಣದಲ್ಲಿ ತೊಡಗಿಸಿಕೊಳ್ಳಬಹುದು. ಅಥವಾ ಬೇರೇ ಏನಾದರೊಂದು ಬಗೆಯ ಚಟುವಟಿಕೆಯಲ್ಲಿ ಆಸಕ್ತಿ ಕಂಡುಕೊಳ್ಳಬಹುದು.

ಪ್ರವೃತ್ತಿಯ ದಾರಿ ಹಿಡಿಯುವವರಿಗೊಂದು ಕಿವಿಮಾತು : ನಿವೃತ್ತರು ಪ್ರವೃತ್ತಿಯಲ್ಲಿ ತೊಡಗುವುದೆಂದರೆ ಅದು ಅವರ ದ್ವಿತೀಯ ಇನ್ನಿಂಗ್ಸ್. ಮಾನಸದ ಲವಲವಿಕೆಗಾಗಿ ಮೀಸಲಾದ ಆಟ. ಮುನಿಸು ತಂದುಕೊಳ್ಳುವುಕ್ಕಲ್ಲ; ತೋರುವುದಕ್ಕೂ ಅಲ್ಲ. ಹೀಗಾಗಿ ಪ್ರಥಮ ಇನ್ನಿಂಗ್ಸ್‌ನ ಹಮ್ಮು ಬಿಮ್ಮುಗಳನ್ನೆಲ್ಲ ಗಂಟುಕಟ್ಟಿ ಗೇಟಿಗೆ ಸಿಕ್ಕಿಸಿ ಕಾರ್ಯಕ್ಷೇತ್ರದ ಒಳಹೋಗುವ ಪರಿಪಾಟ ಅತ್ಯಗತ್ಯ. ಹೊಸತಾಗಿ ವೃತ್ತಿ ಪ್ರಾರಂಭಿಸುವ ವ್ಯಕ್ತಿಯ ಮನೋಭಾವ ಮೈಗೂಡಿಸಿಕೊಳ್ಳುವುದೂ ಅಪೇಕ್ಷಣೀಯ. ನೀಚೋಚ್ಚ ಸಂಕೀರ್ಣತೆಯಿಂದ ಸಂಪೂರ್ಣ ಮುಕ್ತವಾಗಿರುವುದು ಅತಿಮುಖ್ಯ. ಲವಲವಿಕೆಯನ್ನು ಕಾಪಿಟ್ಟುಕೊಳ್ಳುವುದು ಮುಖ್ಯಾತಿಮುಖ್ಯ. ಹೊಗಳಿಕೆ - ತೆಗಳಿಕೆಗಳಿಗೆ ಸಮಚಿತ್ತತೆ ತೋರಬೇಕು. ಸಹೃದಯತೆ, ಸೌಜನ್ಯ, ಕಟ್ಟುಮಸ್ತಾದ ನಡೆ - ನುಡಿ- ಉಡುಗೆ ಇತ್ಯಾದಿಗಳೂ ಬೇಕು.

# ಶಿಂಗಣಾಪುರದ ಸೂರ್ಯಪುತ್ರ ಶನಿಕ್ಷೇತ್ರದ ವೈಶಿಷ್ಟ್ಯ

ಶ್ರೀನಿವಾಸ ಭಟ್ ಸೂರತ್

**ಬಾ**ಗಿಲುಗಳೇ ಇಲ್ಲದ ಮನೆಗಳು ಇರುವುದಾದರೆ ಅದು ಶಿಂಗಣಾಪುರದಲ್ಲಿ ಮಾತ್ರ. ಈ ಅತಿಶಯವಾದ ಸ್ಥಳವು ಮಹಾರಾಷ್ಟ್ರ ಪ್ರಾಂತ್ಯದ ಅಹಮದ್ ನಗರದಿಂದ ನಲವತ್ತು (40) ಕಿಲೋಮೀಟರ್ ದೂರದಲ್ಲಿದೆ. ನಮ್ಮ ಭಾರತದಲ್ಲಿ ಶನಿದೇವರಿಗೆ ತೀರ್ಥ ಸ್ಥಳಗಳು - ಝೂನ್ಸಿ, ಕೊಲ್ಹಾಪುರ, ದೆಹಲಿ, ಬಿರಜಾಪೂರ್ ಉತ್ತರ ಭಾರತದಲ್ಲಿಯೂ ತಿರುನಳ್ಳಾರ್ ಎಂಬಲ್ಲಿಯೂ (ದಕ್ಷಿಣಭಾರತ) ಪ್ರಸಿದ್ಧವಾಗಿವೆ. ಇಲ್ಲಿ ಶನಿ ದೇವರದ್ದು ಸ್ವಯಂಭೂಮೂರ್ತಿಯಾಗಿದೆ. 'ಏಳೂವರೆ ಶನಿ' ಯಾರಿಗೆ ಬಿಟ್ಟಿದೆ? ಶ್ರೀರಾಮನು ಕಾಡಿಗೆ ತೆರಳಿದ್ದು; ಸೀತೆಯು ಅಗ್ನಿಪ್ರವೇಶ ಮಾಡಿದ್ದು; ನಳಚಕ್ರವರ್ತಿಯೂ ಸರ್ವಸ್ವವನ್ನು ಕಳೆದು ಹೆಂಡತಿಯನ್ನು ಕಳಕೊಂಡು ಕಾಡಿನಲ್ಲಿ ಹುಚ್ಚನಂತೆ ಅಲೆದಾಡಿದ್ದು; ಉಜ್ಜೈಯಿನಿಯ ವಿಕ್ರಮಾದಿತ್ಯನಿಗೆ ಶನಿ ಹಿಡಿದ ಕಥೆಯಂತೂ ಹೊಟ್ಟೆಯೊಳಗಿನ ಕರುಳು ಕರಗಿಸುವಂತಹುದು. ದೇವಾದಿದೇವರುಗಳನ್ನೂ ಅಲ್ಲೋಲಕಲ್ಲೋಲ ಮಾಡಿ ಪರಿಭ್ರಮಿಸುವಂತೆ ಮಾಡಿದ ಆ ಶನಿ ದೇವರು ಅದೇನು ಸಾಮರ್ಥ್ಯ ಪಡೆದಿದ್ದಾನೋ? ಇಂತಹ ಸಾಮರ್ಥ್ಯ ಇತರ ಗ್ರಹಗಳಿಗಿಲ್ಲ. ಆದ್ದರಿಂದ ಸಾಡೇಸಾತಿ ಅಂದರೆ ಏಳೂವರೆ ವರ್ಷದ ಶನಿಯ ಏಳರನಾಟ ಅನುಭವಿಸಿದರೂ, ಈಗ ಮಾಡಿದರೆ ಅನುಭವಿಸುತ್ತಿರುವವರೂ, ಇನ್ನು ಮುಂದೆ ಏಳರನಾಟ ಅನುಭವಿಸುವವರೂ ಒಂದಾವರ್ತಿ ಇಲ್ಲಿ ಬಂದು ಶನಿದೇವರ ದರ್ಶನ, ಇನ್ನಿತರ ಸೇವಾ ಕೈಂಕರ್ಯಗಳನ್ನು ಮಾಡುವವರಿಗೆ ಶನಿದೋಷ ನಿವೃತ್ತಿ ನಿಶ್ಚಯವೇ.

ಹಲವು ಶತಮಾನಗಳ ಹಿಂದೆ ಶಿಂಗಣಾಪುರ ಒಂದು ಸಣ್ಣ ಗ್ರಾಮವಾಗಿತ್ತು. ಅಲ್ಲಿಯ ಜನರು ವ್ಯವಸಾಯ ಮಾಡುತ್ತಾ ಬಂದವರು. ಆ ಊರಿನ ಗಡಿ ಪ್ರದೇಶದಲ್ಲಿ ಒಂದು ಗ್ರಾಮದೇವತೆ, ಸ್ವಲ್ಪ ದೂರದಲ್ಲಿ 'ಪಾನಸ್' ನದಿ. ಹಚ್ಚ ಹಸುರಿನ ಹುಲ್ಲುಗಾವಲು ಆಡು, ಹಸುಗಳು ಮೇಯಲು. ಒಂದು ಸಮಯ ಆ ಊರಲ್ಲಿ ಧಾರಾಕಾರವಾಗಿ ಮಳೆಯು ಪ್ರಾರಂಭವಾಯಿತು. ಹೊಲಗಳು, ಮನೆಗಳು ನೀರಿನಿಂದ ತುಂಬಿ ಗ್ರಾಮದೇವತೆ, ದೇವಸ್ಥಾನದವರೆಗೆ ನೆರೆಯು ಬಂದು ಮರಗಳೂ ಧರಾಶಾಯಿಯಾದವು. ದನಕರುಗಳು, ಆಡುಗಳು ನೆರೆಯಲ್ಲಿ ಕೊಚ್ಚಿಹೋದವು. ಗ್ರಾಮ ಜನಗಳು ಆ ಗ್ರಾಮದೇವಸ್ಥಾನದಲ್ಲೇ ಆ ರಾತ್ರಿಯೆಲ್ಲಾ ಕಳೆದರು. ಬೆಳಗಾದೊಡನೇ ಮಳೆ ಕಮ್ಮಿಯಾಗಿ ಜನಗಳು ತಮ್ಮ ತಮ್ಮ ಮನೆಯತ್ತ ತೆರಳಿದರು. ಮನೆ ಹೇಗಿದೆಯೆಂದು ಕಾತರದಿಂದ ನೋಡಲು, ಹಾಗೇ ಬಾಕಿ ಉಳಿದ ಆಡು, ದನಕರುಗಳನ್ನು ಹುಡುಕಿಕೊಂಡ ಹೋದ ಹುಡುಗರು, ಒಂದು ಮರದ ಬುಡದಲ್ಲಿ ಆರು ಅಡಿ ಎತ್ತರದ ಒಂದು ಶಿಲೆಯನ್ನು, ನಿನ್ನೆಯವರೆಗೂ ಕಾಣದ, ಈ ಶಿಲೆ ಎಲ್ಲಿಂದ ಯಾವಾಗ ಹೇಗೆ ಬಂತೆಂದು ಅರಿಯದೆ ಕುತೂಹಲದಿಂದ ಆ ಹುಡುಗರು, ಹಸುಗಳನ್ನು ಅಟ್ಟುವ

ದತ್ತಮಂದಿರ, ರೋಯಲ್ ಪಾರ್ಕ್ ಕ್ಲಬ್ ರೆಸಾರ್ಟ್ ಹತ್ತಿರ, ನ್ಯೂ ಮಗ್ದಲ್ಲಾ, ಡ್ಯೂಮಸ್ ರೋಡ್, ಸೂರತ್-305 007



ಕೋಲಿನಿಂದ ಆ ಕಲ್ಲನ್ನು ಚುಚ್ಚಿದುದನ್ನು ನೋಡಿದರು. ಆಗ ಆ ಕಲ್ಲಿನಿಂದ ರಕ್ತ ಪ್ರವಾಹ ಆರಂಭವಾಯಿತು. ಮಕ್ಕಳು ಭಯಭೀತರಾಗಿ ತಮ್ಮ ಹಿರಿಯರೊಂದಿಗೆ ಈ ವಿಷಯವನ್ನು ತಿಳಿಸಿದರು. ಗ್ರಾಮದ ಹಿರಿಯರು ಇದನ್ನು ನಂಬಲಿಲ್ಲ. ಕೊನೆಗೆ ಗ್ರಾಮಾಧಿಕಾರಿಗಳೂ ಊರ ಜನರೂ ಸೇರಿ ನೋಡಿದಾಗ ಆಶ್ಚರ್ಯಚಕಿತರಾಗಿ ಏನೂ ತೋಚದೆ ಮನೆಗೆ ತಿರುಗಿದರು. ಅಂದು ಅಲ್ಲಿಯ ಗ್ರಾಮ ನಿವಾಸಿಯೊಬ್ಬನಿಗೆ ಶನಿ ದೇವನು ಕನಸ್ಸಿನಲ್ಲಿ "ನಾನು ಶನೀಶ್ವರನು; ನನ್ನನ್ನು ಗ್ರಾಮಕ್ಕೆ ಕೊಂಡು ಹೋಗಿ ಪ್ರತಿಷ್ಠೆ ಮಾಡಿರಿ" ಎಂದು ಅಂತರ್ಧಾನನಾದನು.

ಬೆಳಗಾದೊಡನೆಯೇ ಊರ ಜನರನ್ನು ಸೇರಿಸಿ ಎತ್ತಿನಗಾಡಿಯಲ್ಲಿ ತರಲು ಹೊರಟರು. ಎಷ್ಟು ಜನ ಸೇರಿದರೂ ಶಿಲೆಯು ಅಲುಗದೇ ಹಾಗೆ ನಿಂತಿತ್ತು. ಜನರು ಹತಾಶರಾಗಿ ಮನೆಗೆ ಬಂದರು. ಆವತ್ತೂ ಹೀಗೆ ಕನಸಿನಲ್ಲಿ "ನಾನು ಹೇಳಿದ ಹಾಗೆ ಮಾಡಿ, ಈ ಗ್ರಾಮದಲ್ಲಿ ಇಬ್ಬರು ಗಂಡಸರು ಮಾವ - ಅಳಿಯ ಆಗಿರಬೇಕು. ನನ್ನನ್ನು ಎತ್ತಿ, ಎತ್ತಿನಗಾಡಿಯಲ್ಲಿರಿಸಲಿ. ಎರಡು ಎತ್ತುಗಳೂ ಕಪ್ಪು ಬಣ್ಣದಲ್ಲಿರಬೇಕು" ಎಂದು ಹೇಳಿ ಅಂತರ್ಧಾನನಾದನು. ಗ್ರಾಮವಾಸಿಗಳು ಅದರಂತೆ ಮಾಡಿದರೂ ಏನಾಶ್ಚರ್ಯ! ಹಿಂದಿನ ದಿನ ಹಲವು ಮಂದಿ ಸೇರಿಯೂ ಅಲುಗದ ಶಿಲೆಯನ್ನು ಕೇವಲ ಇಬ್ಬರಿಂದಲೇ ಎತ್ತಿ ಎತ್ತಿನಗಾಡಿಯಲ್ಲಿ ಇರಿಸಿ, ಎತ್ತುಗಳು ಅನಾಯಾಸವಾಗಿ ಗಾಡಿಯನ್ನೆಳೆದು ಊರ ಹತ್ತಿರ ಬಂದಾಗ ಕನಸು ಕಂಡ ಗ್ರಾಮವಾಸಿ ತನ್ನ ಜಾಗದಲ್ಲೇ ಪ್ರತಿಷ್ಠೆ ಮಾಡಬೇಕೆಂದು ಆಸೆಪಟ್ಟನು. ಊರ ಜನರೂ ಒಪ್ಪಿದರು. ಅವನ ಜಾಗವು ಊರಿನ ಮಧ್ಯದಲ್ಲೇ ಇತ್ತು. ಆದರೆ ಊರಿನ ಗಡಿ ಪ್ರದೇಶದಲ್ಲಿ ಗ್ರಾಮದೇವತೆಯ ಹತ್ತಿರ ಬಂದಾಗಲೇ ಎತ್ತಿನಗಾಡಿ ನಿಂತು ಬಿಟ್ಟಿತು. ಏನು ಮಾಡಿದರೂ ಚಲಿಸಲೇ ಇಲ್ಲ. ಆದ್ದರಿಂದ ಕೊನೆಗೆ ಅಲ್ಲೇ ಶಿಲೆಯನ್ನು ಇಳಿಸಿ ಶಿಲೆಯ ಸುತ್ತಲೂ ಮಣ್ಣಿನಿಂದ ವೇದಿಕೆಯನ್ನು ಮಾಡಿ ಅಲ್ಲೇ ಶನಿ ಭಗವಾನ್‌ನನ್ನು ಪ್ರತಿಷ್ಠೆ ಮಾಡಿದರು. ಅಲ್ಲಿಂದ ಮುಂದೆ ಶಿಂಗಣಾಪುರ 'ಶನಿ ಶಿಂಗಣಾಪುರ' ಎಂದಾಯಿತು. ಪ್ರತಿಷ್ಠೆ ಆದ ಪ್ರಾರಂಭದಲ್ಲಿ ಊರ ಜನಗಳೇ ಪೂಜಿಸತೊಡಗಿದರು. ಶನಿಯ ಪ್ರಭಾವ ದೇಶ ದೇಶಗಳಲ್ಲೂ ವ್ಯಾಪಿಸಿತು. "ನನಗೆ ದೇವಸ್ಥಾನವನ್ನು ಕಟ್ಟಬಾರದು. ನನ್ನ ತಲೆ ಮೇಲೆ ಯಾವ ವಿಧವಾದ ಮುಚ್ಚಿಗೆ ಇರಬಾರದು" ಇದು ಶನೀಶ್ವರನ ಆಜ್ಞೆ. ಆದ್ದರಿಂದ ಶನಿ ಭಗವಾನನು ಗಾಳಿ, ಮಳೆ, ಬಿಸಿಲು, ಮಂಜು ಎಲ್ಲವನ್ನು ಸಹಿಸಿಕೊಂಡು ತೆರೆದ ಬಯಲಿನಲ್ಲಿ ಎಂಬಂತೆ ನಾಲ್ಕು ಅಡಿ ಎತ್ತರದ ವೇದಿಕೆಯ ಮೇಲೆ ರಾಜಾರೋಷವಾಗಿ ನಿಂತಿದ್ದಾನೆ ಶನಿದೇವ.

ಪ್ರತಿಷ್ಠೆ ಆದ ಕೆಲವು ದಿನಗಳಲ್ಲಿ ಆ ಊರಿನ ಎಲ್ಲ ಜನರ ಕನಸಿನಲ್ಲಿ ಶನಿದೇವನು ಬಂದು, "ನಿಮ್ಮ ಮನೆಗಳಿಗೆ ಬಾಗಿಲು ಇಡುವುದು ಬೇಡ. ನಾನು ಇಲ್ಲಿ ಇರುವ ತನಕ ಯಾವ ವಿಧವಾದ ಕಳ್ಳತನವೂ ಇಲ್ಲಿ ನಡೆಯಲಾರದು. ಹಾಗೆ ಅಲೆಮಾರಿ, ಪೆಟ್ಟಿಗೆ ಯಾವುದೂ ಕೂಡದು. ಬೀಗ ಹಾಕುವುದೇ ಬೇಡ. ವಸ್ತುಗಳು, ಹಣ ಎಲ್ಲವು ಒಂದು ಚೀಲದಲ್ಲಿ ಹಾಕಿಟ್ಟುಕೊಂಡರೆ ಸಾಕು. ಇಂದಿಗೂ ಆ ಊರಿನ ಮನೆಗಳಿಗೆ ಬಾಗಿಲುಗಳು ಇಲ್ಲ. ರಾತ್ರಿಯಲ್ಲಿ ನಾಯಿ, ಬೆಕ್ಕುಗಳು ಬಾರದಿರಲು ಒಂದು ಬಿದಿರಿನ ತಟ್ಟಿಗೆಯನ್ನು ಹಾಕಿ ಕೊಳ್ಳುವರು. ಬೆಳಗಾದ ಮೇಲೆ ಆ ತಟ್ಟಿಗೆಯನ್ನು ತೆಗೆಯುವರು. ಯಾವ ಕಬ್ಬಿಣದ ಸಾಮಾನುಗಳು ಅಂದರೆ ಬೀಗ, ಪೆಟ್ಟಿಗೆ, ಟ್ರಂಕು ಹೀಗೆ ಯಾವ ವಿಧವಾದ ಕಬ್ಬಿಣ ವಸ್ತುಗಳು ಬೇಡ" ಇದು ಶನಿದೇವರ ಆಜ್ಞೆ. ಆದ್ದರಿಂದ 1)

ಶಿಂಗಣಾಪುರದಲ್ಲಿ ದೇವನಿದ್ದಾನೆ. ದೇವಸ್ಥಾನವಿಲ್ಲ. 2) ಈ ಊರಿನಲ್ಲಿ ಮನೆಗಳಿವೆ, ಬಾಗಿಲುಗಳೇ ಇಲ್ಲ. 3) ಈ ಊರಿನಲ್ಲಿ ಕಳ್ಳತನ, ಅನ್ಯಾಯಗಳು ನಡೆಯುವುದಿಲ್ಲ.

ಈ ಮೂರು ಅತಿಶಯಗಳು ಪ್ರಪಂಚದಲ್ಲಿ ಇನ್ನೆಲ್ಲಾದರೂ ಇದ್ದೀತೇ???

ಈ ಶಿಂಗಣಾಪುರಕ್ಷೇತ್ರದಲ್ಲಿ ಬೆಳಿಗ್ಗೆ 5-30 ಘಂಟೆಗೂ, ಸಾಯಂಕಾಲ 6-30 ಘಂಟೆಗೂ ಆರತಿ ನಡೆಯುತ್ತದೆ. ಶನಿ ದೇವರ ದರ್ಶನ ದಿನದ 24 ಘಂಟೆಗಳಲ್ಲಿಯೂ ದೊರಕುವುದು, ಏಕೆಂದರೆ ಇಲ್ಲಿ ದೇವರಿಗೆ ಬಾಗಿಲೇ ಇಲ್ಲವಲ್ಲ!

ಇಲ್ಲಿ ಪೂಜೆ ಮಾಡಲು ಪ್ರತ್ಯೇಕ ಅರ್ಚಕರು ಬೇಕಾಗಿಲ್ಲ. ಇಲ್ಲಿ ಬರುವ ಭಕ್ತರುಗಳು ಅರಶಿನ ಬಣ್ಣದ ಅಥವಾ ಕಪ್ಪು ಬಣ್ಣದ ವಸ್ತ್ರವನ್ನು ಉಟ್ಟುಕೊಂಡು, ನದಿಯಲ್ಲಿ ಸ್ನಾನ ಮಾಡಿ (ಈಗ ಸ್ನಾನಕ್ಕಾಗಿ ಪ್ರತ್ಯೇಕವಾಗಿ ನಲ್ಲಿಗಳನ್ನು ಸ್ಥಾಪಿಸಿದ್ದಾರೆ) ಆ ಒದ್ದೆ ಬಟ್ಟೆಯಲ್ಲೇ ಶನಿದೇವನ ಹತ್ತಿರಕ್ಕೆ ಬಂದು ಶನಿದೇವರಿಗೆ ನೀರನ್ನು ಎರೆದು, ಆ ಮೇಲೆ ಎಳ್ಳೆಣ್ಣೆಯನ್ನು ( ಇದು ಅಲ್ಲಿಯೇ ಮಾರಾಟಕ್ಕೆ ಸಿಗುತ್ತದೆ) ಅಭಿಷೇಕ ಮಾಡಿ, ಹೂಗಳನ್ನು ಏರಿಸಿ, ಊದು ಬತ್ತಿ ಹಚ್ಚಿ, ತೆಂಗಿನ ಕಾಯಿ ಒಡೆದು ಬಾಳೆ ಹಣ್ಣು ಸೇರಿ ನೈವೇದ್ಯ ಮಾಡಿ (ಹಣ್ಣುಕಾಯಿ) ಶನಿ ದೇವನನ್ನು ಸ್ಪರ್ಶಮಾಡಿ, ಪ್ರದಕ್ಷಿಣೆ ಮಾಡಿ ಬೇಕಾದ ವರಗಳನ್ನು ಬೇಡಿಕೊಂಡು, ವೇದಿಕೆಯಿಂದ ಕೆಳಕ್ಕೆ ಇಳಿಯುತ್ತಾರೆ ಭಕ್ತಾದಿಗಳು. ಆದರೆ ಇಷ್ಟೆಲ್ಲಾ ಮಾಡಲು ಅವಕಾಶ ಕೇವಲ ಪುರುಷರುಗಳಿಗೆ ಮಾತ್ರ. ಸ್ತ್ರೀಯರು ವೇದಿಕೆ ಮೇಲೆ ಏರುವ ಹಾಗಿಲ್ಲ. ಕೆಳಗೆ ನಿಂತುಕೊಂಡೋ ಅಥವಾ ಪಕ್ಕದಲ್ಲಿರುವ ದೇವಸ್ಥಾನ ಮೆಟ್ಟಿಲುಗಳ ಮೇಲೆ ನಿಂತುಕೊಂಡೋ ದರ್ಶನ ಮಾಡತಕ್ಕದ್ದು.

ಶನಿ ದೇವರ ಪೂರ್ವಕ್ಕೆ ಒಂದು ಬಾವಿ ಇದೆ. ಅದರಿಂದ ಭಕ್ತರುಗಳು ನೀರನ್ನು ತೆಗೆದುಕೊಂಡು ಶನಿಭಗವಾನನಿಗೆ ಅಭಿಷೇಕ ಮಾಡುವರು. ಸ್ತ್ರೀಯರು ಈ ಬಾವಿಯ ಹತ್ತಿರಕ್ಕೂ ಬರಕೂಡದು.

ಶನಿ ದೇವನಿಗೆ ಪ್ರೀತಿಯಾದ ವಸ್ತುಗಳೆಂದರೆ ಕಪ್ಪು ವಸ್ತ್ರ, ಕಪ್ಪು ಉದ್ದು, ಬೆಲ್ಲ, ಎಳ್ಳೆಣ್ಣೆ ಮತ್ತು ಎಳ್ಳು. ಶನಿಭಗವಾನನಿಗೆ ತೃಪ್ತಿ ಪಡಿಸಲು ಭಕ್ತನ ಶಕ್ತ್ಯಾನುಸಾರ, ಯಥಾಶಕ್ತಿ ದಾನ ಧರ್ಮಗಳನ್ನು ಮಾಡಬಹುದು. ವಿಶೇಷವಾಗಿ ಶನಿದೇವನಿಗೆ ಎಳ್ಳೆಣ್ಣೆ ಅಭಿಷೇಕ. ಇದರ ಲೆಕ್ಕಾಚಾರ, ಒಂದೂಕಾಲು ಕಿಲೋಗ್ರಾಂ ಅಥವಾ 125 ಗ್ರಾಂ ಹೀಗೆ ( ಒಂದೂಕಾಲು) ಬರುವಂಥ (100 + 25) ವಿಧದಲ್ಲಿ ಅಭಿಷೇಕ ಮಡುವುದು ಇಷ್ಟೊಂದು ಶಕ್ತಿಹೊಂದಿದ ಶನಿದೇವನನ್ನು ದರ್ಶಿಸಲು ದೂರ ದೂರ ದೇಶಗಳಿಂದ ಭಕ್ತರು ಬರುತ್ತಾ ಇದ್ದಾರೆ. ಉಲ್ಲಾಸ ಯಾತ್ರೆಯನ್ನು ದೇಶ ವಿದೇಶಗಳಿಗೆ ಹೋಗಲು ಉಪಯೋಗಿಸುತ್ತಾರೆ. ಆದರೆ ಅದೇ ಉಲ್ಲಾಸ ಯಾತ್ರೆ ಪುಣ್ಯಕ್ಷೇತ್ರಗಳಿಗೆ ಹೋಗಿ ದಾನ ಧರ್ಮ ಮಾಡಿದಲ್ಲಿ ಅದರ ಫಲವು ಜನ್ಮ ಜನ್ಮಾಂತರಗಳಿಗೂ ಲಭಿಸುವುದು.

**ಶನಿ ಪೀಡೆ ನಿವಾರಣೆಗೆ ಪೌರಾಣಿಕ ಮಂತ್ರ :**

1 **ಸೂರ್ಯ ಪುತ್ರೋದೀರ್ಘದೇಹೋ ವಿಶಾಲಾಕ್ಷ ಶಿವಪ್ರಿಯಃ ।**
**ಮಂದಾಚಾರ ಪ್ರಸನ್ನಾತ್ಮಾ ಪೀಡಾಂ ಹರತುಮೇ ಶನಿಃ ॥**



2 **ನೀಲಾಂಜನ ಸಮಾಭಾಸಂ ರವಿಪುತ್ರಂ ಯಮಾಗ್ರಜಂ ।**
**ಛಾಯಾಮಾರ್ತಾಂಡ ಸಂಭೂತಂ ತನ್ನಮಾಮಿಶನೈಶ್ವರಮ್ ॥**

3 **ಕೋಣಸ್ಥ ಪಿಂಗಲೋಬಭ್ರುಃ ಕೃಷ್ಣಾರೌದ್ರಾಂತಕೋ ಯಮಃ ।**
**ಸಾರಿಃ ಶನೈಶ್ವರೋ ಮಂದಃ ಪಿಪ್ಪಲಾದೇವ ಸಂಸ್ಥಿತಃ ॥**
**ಏತಾನಿ ದಶ ನಾಮಾನಿ ಪ್ರಾತರುತ್ಥಾಯ ಯಃ ಪಠೇತ್ ।**
**ಶನೈಶ್ಚರೋಕೃತಾಪಿಡಾ ನ ಕದಾಚಿತ್ ಭವಿಷ್ಯತಿ ॥**

ಇಂಥ ಶ್ಲೋಕಗಳನ್ನು ಪಠಿಸುವುದರಿಂದ ಶನೈಶ್ವರನು ಸುಪ್ರೀತನಾಗುತ್ತಾನೆ. ಶನೈಶ್ವರನು ಪ್ರಸನ್ನನಾದರೆ ಸಕಲ ಐಶ್ವರ್ಯಗಳನ್ನು ಸುಖಸಂಪತ್ತುಗಳನ್ನು ಅನುಗ್ರಹಿಸುತ್ತಾನೆ.

**ಶನಿದೇವಃ ಸುಪ್ರೀತಾ ಸುಪ್ರಸನ್ನಾ ವರದಾ ಭವತು ಓಂ ತತ್ ಸತ್**

**ಹರೇದ್ರಾಂ ಹರೇದ್ರಾಂ ದ್ರಾಂ ದ್ರಾಂ ಹರೇ ಹರೇ ಹರೇ ದತ್ತ ಹರೇ ದತ್ತ ದತ್ತ ದತ್ತ ಹರೇ**
**ಹರೇ ದತ್ತ ಸ್ವರೂಪ ಸದ್ಗುರು ಸಚ್ಚಿದಾನಂದ ಮಹಾರಾಜಕೀ ಜಯ್**

# ಅವಿನಾಭಾವ ಸಂಬಂಧ

ಮ. ಗೋ. ಹೆಗಡೆ

ಪ್ರತಿಯೊಂದು ಚರಾಚರ ವಸ್ತುವಿನ ಕ್ಷಣಗಣನೆ ಮತ್ತು ಕರ್ಮದ ಮೌಲ್ಯ ಮಾಪನ ಮಾಡುವ ನಾಲ್ಕು ವಿಧ ಶಕ್ತಿಗಳು ನೆರಳಿನಂತೆ ಅವುಗಳ ಸಂಗಡವೇ ಇರುತ್ತವೆ. ಆ ಶಕ್ತಿಗಳು ಕ್ರಮವಾಗಿ.

1) ಚಿತ್ರ 2) ಚಿತ್ರಗುಪ್ತ 3) ಯಮ ಹಾಗೂ 4) ಯಮಧರ್ಮ.

ಪ್ರಕಾಶ ಕಿರಣವೊಂದು ಸರಳರೇಖೆಯಲ್ಲಿ ಚಲಿಸುವಾಗ ಒಂದು ಅಪಾರದರ್ಶಕ ವಸ್ತು ಅದನ್ನು ತಡೆದರೆ ಅದರ ಮುಂದಾಗುವ ಪರಿಣಾಮವನ್ನು ವಿಜ್ಞಾನವು 'ನೆರಳು' ಎಂದು ವ್ಯಾಖ್ಯಾನಿಸುತ್ತದೆ. ಆದರೆ ತತ್ವಶಾಸ್ತ್ರದ ಪ್ರಕಾರ, ಕತ್ತಲಲ್ಲೂ ವಸ್ತುಗಳ ನೆರಳು ಅವುಗಳೊಡನೆ ಇದ್ದೇ ಇರುತ್ತದೆ. ವಸ್ತುಗಳ ಸೀಮಿತ ದೃಷ್ಟಿಗೆ ಅದು ಗೋಚರವಾಗಲಾಗದು.

ವಸ್ತುಗಳ ನೆರಳನ್ನು ತತ್ವಶಾಸ್ತ್ರವು ನಾಲ್ಕು ಶಕ್ತಿಗಳ ಸಮ್ಮಿಳನವೆಂದು ನಿರೂಪಿಸುತ್ತದೆ.

ಇದು ನೆರಳಿನ ಬಗ್ಗೆ ನಮಗೆ ಇರಲೇಬೇಕಾದ ನೈಜ ವಿಚಾರ.

ವಿಜ್ಞಾನವು ನೆರಳನ್ನು ಪ್ರತಿಬಿಂಬ (Image)ವೆಂತಲೂ ನಿರೂಪಿಸುತ್ತದೆ. ತತ್ವ ಶಾಸ್ತ್ರವು ಅದನ್ನು ಅಲ್ಲಗಳೆಯದೆ 'ಬಿಂಬ'ದ ಪ್ರತ್ಯೇಕ ಅಸ್ತಿತ್ವವನ್ನು ಸೂಚಿಸುತ್ತದೆ.

ನಾಲ್ಕು ಶಕ್ತಿಗಳು ಮನುಷ್ಯನ ಮನಸ್ಸಿನ ಮೂಲಕ ಕಾರ್ಯ ನಿರ್ವಹಿಸುತ್ತವೆ. 'ಮನಸ್ಸಿ'ಗೊಂದು ನಿಖರವಾದ ವ್ಯಾಖ್ಯೆಯನ್ನೀಯುವುದು ಕಷ್ಟದಾಯಕವಾದರೂ ಅದನ್ನು ತತ್ವಶಾಸ್ತ್ರವು ಸೂಕ್ಷ್ಮ ಶರೀರವೆಂದು ಬಣ್ಣಿಸುತ್ತದೆ.

ಶರೀರದ 'ನರಮಂಡಲ' (Nervous system)ವನ್ನು ಮನಸ್ಸಿನ ವ್ಯಕ್ತರೂಪವೆಂದು ತೀರ್ಮಾನಿಸಬಹುದು.

Mind is implied nervous system ಎಂದು ನನ್ನ ಇತ್ತೀಚಿನ ಇಂಗ್ಲೀಷ್ ಲೇಖನವೊಂದರಲ್ಲಿ ನಿರೂಪಿಸಿದ್ದು ಜ್ಞಾಪಕಕ್ಕೆ ಬರುತ್ತದೆ.

ಹಾಗೆ ಬರೆಯಲು ಒಂದು ಬಲವಾದ ಸಮಂಜಸವಾದ ಕಾರಣವೂ ಉಂಟು.

ಪಾಶ್ಚಾತ್ಯ ಲೇಖಕನೊಬ್ಬ ಹೇಳುತ್ತಾನೆ - "God may forgive our sins but not our nervous system" ಅರ್ಥವತ್ತಾದ ಈ ವಿಚಾರ ಮನಸ್ಸಿನ ವ್ಯಕ್ತರೂಪವಾಗಬಹುದೆಂದು ನಾನು ತಾರ್ಕಿಕವಾಗಿ ಮನಗಂಡು ಹಾಗೆ ಬರೆದೆ.

'ವ್ಯಕ್ತ'ದಿಂದ 'ಅವ್ಯಕ್ತ'ದೆಡೆಗೆ ಸಾಗುವ ಮನುಷ್ಯನ ವಿಚಾರವು 'ಅವ್ಯಕ್ತ'ದಲ್ಲಿಯೇ ನಿಂತು ಹೋದರೆ ಪುನಃ ಗೊಂದಲಮಯವಾದ ಆಂತರಿಕ ವಾತಾವರಣದಲ್ಲಿ ಪರ್ಯವಸಾನ

ಬಂಕಿಕೊಡ್ಲ - 581 319, ಉತ್ತರ ಕನ್ನಡ



ವಾಗುತ್ತದೆ. ಹಾಗಾಗಲು ಬಿಡಬಾರದು. ಆದುದರಿಂದ ನರಮಂಡಲವು ಮನುಷ್ಯನ ಮನಸ್ಸಿನ ಪ್ರತಿಬಿಂಬವೆಂದು ಸ್ವೀಕರಿಸಬೇಕು.

ಈಗ 'ಶರೀರ'ಕ್ಕೂ ಮನಸ್ಸಿಗೂ ಇರುವ ಸಂಬಂಧವನ್ನು ವಿಶ್ಲೇಷಿಸಲು ಸದವಕಾಶ ದೊರೆಯುತ್ತದೆ.

ಶರೀರದಿಂದ ಹೊರಡುವ ಮಾತು ವಿಚಾರ, ಕೃತಿ ಮುಂತಾದವುಗಳನ್ನೆಲ್ಲ ದಾಖಲಿಸಿಕೊಳ್ಳುವ 'ಮನಸ್ಸು' ನಂತರ ಏಕಾಂತದಲ್ಲಿ ಮೌಲ್ಯಮಾಪನವನ್ನು ಪ್ರಾರಂಭಿಸುತ್ತದೆ.

ಇಲ್ಲಿ ಮೋಸ, ವಂಚನೆಗಳಿಗೆ ಅವಕಾಶವಿಲ್ಲ. ಮನಸ್ಸೊಂದು ದ್ರಾವಕವಾಗಿ ಕಾರ್ಯ ನಿರ್ವಹಿಸುತ್ತದೆ. ಕಾರ್ಯ ದ್ರವ್ಯವನ್ನು ಕರಗಿಸಿಕೊಂಡು ಮಿದುಳು ಮತ್ತು ಇನ್ನಿತರ ಜ್ಞಾನೇಂದ್ರಿಯ ಹಾಗೂ ಕರ್ಮೇಂದ್ರಿಯಗಳ ಮೂಲಕ ಮನಸ್ಸು ಜೈವಿಕ ಚಟುವಟಿಕೆಗಳನ್ನು ನಿರ್ವಹಿಸುತ್ತದೆ.

ಶರೀರವನ್ನು ಒಂದು ಉಪಕರಣದಂತೆ ಬಳಸಿಕೊಂಡು ಮನಸ್ಸು ದಿನ ನಿತ್ಯದ ಎಲ್ಲಾ ಕಾರ್ಯ ಕಲಾಪಗಳನ್ನು ನೆರವೇರಿಸುತ್ತದೆ.

ಶರೀರ ಮತ್ತು ಮನಸ್ಸು ಪ್ರತ್ಯೇಕವಾದ ಅಸ್ತಿತ್ವವನ್ನು ಹೊಂದಿದ್ದರೂ ಅವು ಎರಡಾಗಿ ಕಾಣದಿರುವ ಕುತೂಹಲಕರವಾದ ಸಂಬಂಧವನ್ನು ಅವುಗಳಲ್ಲಿರುವ ಅವಿನಾಭಾವ ಸಂಬಂಧ ಎಂದು ತತ್ವಶಾಸ್ತ್ರವು ನಿರೂಪಿಸುತ್ತದೆ. ಈ ಅವಿನಾಭಾವ ಸಂಬಂಧ ಅದೆಷ್ಟು ಗಾಢವಾಗಿರುತ್ತದೆಂದರೆ ತುಟಿಗಳ ಮತ್ತು ನಾಲಿಗೆಯ ಸಾಪೇಕ್ಷ ಚಲನೆಯಿಲ್ಲದಿದ್ದರೂ ಮಾತು ನಿರಂತರವಾಗಿ ಸಾಗುತ್ತಲೇ ಇರುತ್ತವೆ. ಇದನ್ನು ಅನುದಿತ ಭಾಷೆ ಎಂದು ಕರೆಯುತ್ತಾರೆ.

'Silence is the best way of conversation' ಎಂಬ ಆಂಗ್ಲೋಕ್ತಿಯೊಂದು ಮಾತನಾಡುವ ವಿಶಿಷ್ಟ ವಿಧಾನವೊಂದನ್ನು ಮನೋಜ್ಞವಾಗಿ ತಿಳಿಸುತ್ತದೆ.

ಅವಿನಾಭಾವ ಸಂಬಂಧವು ಒಂದು ವ್ಯಕ್ತಿಯ ಶರೀರ ಹಾಗೂ ಮನಸ್ಸಿನ ನಡುವೆ ಇರುವಂತೆ, ಎರಡು ಅಥವಾ ಹೆಚ್ಚು ವ್ಯಕ್ತಿಗಳ ಮಧ್ಯೆಯೂ ಇರುತ್ತದೆ. ಜಾತಿ, ಮತ, ಪಂಥಗಳ ಪರಿಧಿಯನ್ನು ಮೀರಿರುವ ಈ ಸಂಬಂಧವು ಮಾನವೀಯತೆಯ ವಿಶಾಲವಾದ ಕ್ಷೇತ್ರದಲ್ಲಿ ನಿತ್ಯವೂ ನಿರಂತರವಾಗಿ ಪಸರಿಸುತ್ತದೆ. ಸಭ್ಯರಾದ ಅನ್ಯರನ್ನು ಸದಾ ಸ್ಮರಿಸುತ್ತಿರುವ ಅವಿನಾಭಾವ ಸಂಬಂಧದ ಮೂಲವಿರುವುದು ಮನುಷ್ಯನ ಶರೀರ ರಚನೆಯಲ್ಲೇ.

ಮನುಷ್ಯನ ಶರೀರದಲ್ಲಿ ಮಿದುಳಿಗೂ ಹೃದಯಕ್ಕೂ ಇರುವ ಅವಿನಾಭಾವ ಸಂಬಂಧ ದಿಂದಲೇ ಒಬ್ಬ ಮನುಷ್ಯ ತನ್ನ ಆರೋಗ್ಯದ ಸಿಂಹಪಾಲನ್ನು ಸಂಪಾದಿಸುತ್ತಾನೆ.

ಮಿದುಳಿಗೆ ರಕ್ತ ಸರಬರಾಜು ಸರಿಯಾಗಿ ಆಗದಿದ್ದಲ್ಲಿ ಮಾನಸಿಕವಾಗಿ ಮಾಡಬೇಕಾದ ವಿಚಾರ, ಭಾವ ಮುಂತಾದವುಗಳಲ್ಲಿ ವ್ಯತ್ಯಯವುಂಟಾಗಿ, ಕೈಗೆತ್ತಿಕೊಂಡ ಕಾರ್ಯ ಸಮಾಧಾನಕರವಾಗಿ ಕೊನೆಗೊಳ್ಳಲಾರದು.

ಇದರಂತೆ, ಮೂತ್ರ ಜನಕಾಂಗ ಮತ್ತು 'ಸ್ವೇದ ಗ್ರಂಥಿ'ಗಳ ನಡುವೆಯೂ ಅವಿನಾಭಾವ ಸಂಬಂಧವನ್ನು ಕಾಣುತ್ತೇವೆ. ಋತು ಮಾನಕ್ಕನುಗುಣವಾಗಿ ಇವು ಒಂದಕ್ಕೊಂದು

ಸಹಕಾರಿಯಾಗಿ ಕಾರ್ಯ ನಿರ್ವಹಿಸುವ ವಿಧಾನವನ್ನು ಪರಿಶೀಲಿಸಿದರೆ ಆ ಅವಿನಾಭಾವ ಸಂಬಂಧ ಅಚ್ಚರಿಯನ್ನುಂಟು ಮಾಡುತ್ತದೆ. ಬೇಸಿಗೆಯ ಸಮಯದಲ್ಲಿ ಮೂತ್ರ ವಿಸರ್ಜನೆ ಕಡಿಮೆಯಾಗಿ ಹೆಚ್ಚು ಬೆವರುವುದು ಹಾಗೂ ಚಳಿಗಾಲದ ಸಮಯದಲ್ಲಿ ಬೆವರುವುದು ಕಡಿಮೆಯಾಗಿ, ಹೆಚ್ಚು ಮೂತ್ರ ವಿಸರ್ಜನೆಯಾಗುವುದು ಆ ಅವಿನಾಭಾವ ಸಂಬಂಧದ ಹೊರ ಸೂಕ್ಷ್ಮ ದರ್ಶನ.

ಅವಿನಾಭಾವ ಸಂಬಂಧವು ವ್ಯಕ್ತಿ - ವ್ಯಕ್ತಿಗಳ ನಡುವಿನ ಅಂತರವನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ. ಪ್ರಪಂಚದ ಯಾವುದೇ ಮೂಲೆಯಲ್ಲಿರಲಿ, ವ್ಯಕ್ತಿಗಳ ನಡುವೆ ಇರುವ ಸಂಬಂಧ ವಿಶಿಷ್ಟ ಸಂದರ್ಭಗಳಲ್ಲಿ ಸ್ಪಷ್ಟವಾಗಿ ವ್ಯಕ್ತವಾಗುತ್ತದೆ.

ಉಗಾಂಡಾದಲ್ಲೋ, ಸೌದಿ ಅರೇಬಿಯಾದಲ್ಲೋ ಅಥವಾ ಪ್ರಪಂಚದ ಇನ್ನಾವುದೋ ದೇಶದಲ್ಲಿ ಅಪರಾಧಿಯೋರ್ವನನ್ನು ಗಲ್ಲಿಗೇರಿಸಿ ಹತ್ಯೆಗೈಯುವ ದೃಶ್ಯವನ್ನು ನಾವು ಟಿ.ವಿ. ಯಲ್ಲಿ ನೋಡುತ್ತಿದ್ದರೂ ನಮ್ಮ ಕರುಳು ಒಮ್ಮೆ 'ಚುರಕ್' ಅನ್ನುತ್ತದೆ. ನಮಗೇನೋ ಅಜ್ಞಾತ ವೇದನೆಯಾಗುತ್ತದೆ. ಇದಕ್ಕೆ ಯಾವುದೇ ಸಮಂಜಸವಾದ ಕಾರಣವಿಲ್ಲ; ಆದರೆ ಗಲ್ಲಿಗೇರಿದ ಆ ವ್ಯಕ್ತಿ ಮತ್ತು ನಮ್ಮ ನಡುವೆ, ಪ್ರಕೃತಿ ಅವಿನಾಭಾವ ಸಂಬಂಧವನ್ನೇರ್ಪಡಿಸಿಟ್ಟಿರುತ್ತದೆ. ಅದರಿಂದಲೇ ನಮಗೆ ವೇದನೆಯಾಗುವುದು.

ನೆಂಟರಿಷ್ಟರ ನಡುವೆ ಇರುವ ಸಂಬಂಧಕ್ಕೂ ಈ ಅವಿನಾಭಾವ ಸಂಬಂಧಕ್ಕೂ ಅಜಗಜಾಂತರವಿದೆ. ನೆಂಟರಿಷ್ಟರ ನಡುವೆ ಇರುವ ಸಂಬಂಧವು ವ್ಯಷ್ಟಿ ಪ್ರಜ್ಞೆಯ [Individual consciousness] ದ್ಯೋತಕವಾದರೆ, ಅವಿನಾಭಾವ ಸಂಬಂಧವು ಸಮಷ್ಟಿ ಪ್ರಜ್ಞೆಯ [Universal consciousness] ಜ್ವಲಂತ ನಿದರ್ಶನವಾಗುತ್ತದೆ.

ಭಗವಾನ್ ಶ್ರೀಕೃಷ್ಣನ ಅವತಾರದ ಅವಧಿಯ ಪ್ರತಿಯೊಂದು ಸನ್ನಿವೇಶವನ್ನು ಸೂಕ್ಷ್ಮವಾಗಿ ಪರಿಶೀಲಿಸಿದರೆ ಅವಲ್ಲಿದ್ದ ಸಮಷ್ಟಿ ಪ್ರಜ್ಞೆಯ ಅವಿನಾಭಾವ ಸಂಬಂಧ ಸ್ಫಟಿಕದಷ್ಟು ಸ್ಪಷ್ಟವಾಗಿ ಗೋಚರಿಸುತ್ತದೆ. ಶ್ರೀಕೃಷ್ಣನ ನಿಷ್ಪಕ್ಷಪಾತ ದೃಷ್ಟಿ ಎಷ್ಟು ಜಾಗೃತವಾಗಿತ್ತೆಂದರೆ ಅವನು ನಿಜವಾಗಿಯೂ ಪಾಂಡವರನ್ನು ಪ್ರೀತಿಸಲಿಲ್ಲ ಹಾಗೂ ಕೌರವರನ್ನು ದ್ವೇಷಿಸಲೂ ಇಲ್ಲ. ಅವಿನಾಭಾವದ ಸಮನ್ವಯ ದೃಷ್ಟಿ ಶ್ರೀಕೃಷ್ಣನದಾಗಿತ್ತು. ಅವತಾರ ಪುರುಷನಿಗೆ ಕೌರವರನ್ನು ಸದೆ ಬಡಿಯುವುದು ಕ್ಷಣಾರ್ಧದ ಕೆಲಸವಾಗಿತ್ತು. ಆದರೆ ಪ್ರಕೃತಿ ನಿರ್ಧರಿಸಿದ ರೀತಿಯಲ್ಲೇ ಮುಂದುವರಿದ ಶ್ರೀಕೃಷ್ಣ, ತನ್ನ ಅವಿನಾಭಾವ ಸಂಬಂಧವನ್ನು ಜೀವಾತ್ಮಗಳೊಂದಿಗೆ ಅನುಸಂಧಾನ ಮಾಡಿಕೊಂಡು ಪ್ರಪಂಚದ ಆದರ್ಶ ಪುರುಷನೆನಿಸಿದ್ದಾನೆ.

ತನ್ನ ಅವತಾರದ ಅವಧಿಯಲ್ಲಿ ದೇಹವನ್ನಗಲಿದ ಅದೆಷ್ಟೋ ಜೀವಾತ್ಮಗಳ 'ಅಪರಕರ್ಮ'ವನ್ನು ಸಹ ಶ್ರೀಕೃಷ್ಣ ಅತ್ಯಂತ ಶ್ರದ್ಧೆಯಿಂದ ನೆರವೇರಿಸಿದ್ದು ನಮ್ಮ ಗಮನಕ್ಕೆ ಬರುತ್ತದೆ.

'ತಸ್ಮಾತ್ ಶಾಸ್ತ್ರಂ ಪ್ರಮಾಣಂ ತೇ...' ಎಂದು ಶಾಸ್ತ್ರ ವಿಧಿಸಿದ ರೀತಿಯಲ್ಲಿ, ಪಂಚಜನ ರಾಕ್ಷಸರ, ಜರಾಸಂಧನ, ಕಂಸನ ಹಾಗೂ ಇನ್ನೂ ಎಷ್ಟೋ ಜೀವಾತ್ಮಗಳ ಸದ್ಗತಿಗಾಗಿ, ಶ್ರೀಕೃಷ್ಣ ಉತ್ತರಕ್ರಿಯೆಗಳನ್ನು ನೆರವೇರಿಸುತ್ತಾನೆ. ಇದು ಅವಿನಾಭಾವ ಸಂಬಂಧದ ಶ್ರೇಷ್ಠ ನಿದರ್ಶನ.



ಶ್ರೀಕೃಷ್ಣನ ಅಸ್ತಿತ್ವ ಕೇವಲ ಅವನ ಅದ್ವಿತೀಯವಾದ ವ್ಯಕ್ತಿತ್ವದಿಂದ ಮಾತ್ರವಲ್ಲ. ಆದರೆ ಅವನ ಅಪೂರ್ವವಾದ ಅವಿನಾಭಾವ ಸಂಬಂಧದಿಂದುಂಟಾದ ದೇವತ್ವದಿಂದಲೇ ಗುರುತಿಸಲ್ಪಡುತ್ತದೆ. ಸಮಸ್ತ ಪ್ರಪಂಚವನ್ನೇ ಪ್ರೀತಿಸಿದ ಮತ್ತು ಜೀವಾತ್ಮಗಳಿಗೆ ಸನ್ಮಾರ್ಗ ದರ್ಶನ ಮಾಡಿಸಿದ ಸಂಪೂರ್ಣ ಶ್ರೇಯಸ್ಸು ಭಗವಾನ್ ಶ್ರೀಕೃಷ್ಣನಿಗೆ ಸಲ್ಲುತ್ತದೆ.

ದೇಶ, ಕಾಲ, ಮತ, ಪಂಥಗಳ ಗಡಿಯನ್ನು ದಾಟಿ, ಸಮಸ್ತ ಭೂಮಂಡಲದ ಚರಾಚರ ವಸ್ತುಗಳ ಶಾಂತಿಯುತ ಸಹಬಾಳ್ವೆಗಾಗಿ ಅನವರತವೂ ಯತ್ನಿಸಿದ ಶ್ರೀಕೃಷ್ಣ ತನ್ನ ಅವಿನಾಭಾವ ಸಂಬಂಧದಿಂದಲೇ ಅದ್ಭುತವಾದ ಶಕ್ತಿಯನ್ನು ಗಳಿಸಿದ್ದ.

ಪ್ರಪಂಚವನ್ನು ಬಿಟ್ಟು ತಾನಿರಲಾರೆ. ಎಂಬ ತಾತ್ವಿಕ ಮನೋಭಾವನೆಯು ಶ್ರೀಕೃಷ್ಣನ ಅವಿನಾಭಾವ ಸಂಬಂಧದ ಜ್ವಲಂತ ಪ್ರತೀಕ.

ತನಗಾಗಿ ಏನನ್ನೂ ಬಯಸದ, ಆದರೆ ಪ್ರಪಂಚದ ಇತರರ ಹಿತ ಚಿಂತನೆಯಲ್ಲಿಯೇ ತತ್ಪರನಾಗಿರುವುದು ಶ್ರೀಕೃಷ್ಣಾವತಾರದ ಮೂಲತತ್ವ.

ಅವಿನಾಭಾವ ಸಂಬಂಧದ ಪ್ರಜ್ಞೆಯಿರುವ ಪ್ರತಿಯೊಬ್ಬ ಮನುಷ್ಯನೂ ಖಂಡಿತವಾಗಿ, ತನ್ನಲ್ಲಿಯ ವ್ಯಕ್ತಿತ್ವದ ಇನ್ನೊಂದು ಬದಿ - ದೇವತ್ವವನ್ನು ಕಾಣುತ್ತಾನೆ.

# ಸಾಂಸ್ಕೃತಿಕ ರಸಪ್ರಶ್ನೆ

- ಡಾ। ಎಚ್. ವಿ. ನರಸಿಂಹ ಮೂರ್ತಿ, ಕುಂದಾಪುರ

1. ತಮಿಳು ಭಾಷೆಯ ಪ್ರಸಿದ್ಧ ರಾಮಾಯಣ ಕೃತಿ ಯಾವುದು?
2. ಗದುಗಿನ ಭಾರತದ ಮತ್ತೊಂದು ಹೆಸರೇನು?
3. ಕರ್ನಾಟಕ ಸಂಗೀತದ ಮೂವರು ದಿಗ್ಗಜರು ಯಾರು?
4. ನವಗ್ರಹಗಳಲ್ಲಿ ಸೂರ್ಯ ಪುತ್ರ ಯಾರು?
5. ಕನ್ನಡದ ಮೊತ್ತ ಮೊದಲ ಜ್ಯೋತಿಷ ಕೃತಿ ಯಾವುದು?
6. ಭಾರತದ ಪುರಾಣೇತಿಹಾಸಗಳಲ್ಲಿ ಪ್ರಸಿದ್ಧರಾದ ಮೂವರು ರಾಮರು ಯಾರು?
7. ಕನ್ನಡ ಜೈಮಿನಿ ಭಾರತದ ಕರ್ತೃ ಯಾರು?
8. ಗಾಯತ್ರೀ ಮಂತ್ರದ ಅಧಿದೇವತೆ ಯಾರು?
9. ಹಿತೋಪದೇಶದ ಕರ್ತೃ ಯಾರು?
10. ಪುರಾಣಗಳಲ್ಲಿ ಉಲ್ಲೇಖಗೊಂಡ ಮೂರು ಲೋಕಗಳು ಯಾವುವು ?
11. ಮೋಹನ ತರಂಗಿಣಿ ಯಾರ ಕೃತಿ?
12. ಭಾರತ ಸಂವಿಧಾನ ರಚನೆಯಲ್ಲಿ ಮಹತ್ತರ ಪಾತ್ರವಹಿಸಿದ ಕನ್ನಡಿಗ ಯಾರು?
13. ಭಾರತದ ರಾಷ್ಟ್ರಲಾಂಛನ ಯಾವುದು?
14. ಮನ್ಮಥನ ಪತ್ನಿ ಯಾರು?
15. ಕೊಲ್ಲೂರು ಸಮೀಪದಲ್ಲಿ ಇರುವ ಪರ್ವತ ಯಾವುದು ?
16. ಹಿಂದೀ ಸಾಹಿತ್ಯದ ಪ್ರಮುಖ ಕಾದಂಬರೀ ಕಾರ ಯಾರು?
17. ಸೌಂದರ್ಯಲಹರೀ ಯಾರ ಕೃತಿ ?
18. ಹೂವಿನಕೆರೆ ಯಾರ ಜನ್ಮಸ್ಥಳ ?
19. ಋಷ್ಯಶೃಂಗನ ಹೆಂಡತಿ ಯಾರು?
20. ಅಯೋನಿಜೆ ಎಂದು ಯಾರನ್ನು ಕರೆಯುತ್ತಾರೆ?

## ಉತ್ತರಗಳು

1. ಕಂಬ ರಾಮಾಯಣ 2. ಕುಮಾರವ್ಯಾಸ ಭಾರತ 3. ತ್ಯಾಗರಾಜರು ಮತ್ತು ಸ್ವಾಮಿ ದೀಕ್ಷಿತರು ಮತ್ತು ಶ್ಯಾಮಾ ಶಾಸ್ತ್ರಿಗಳು 4. ಶನಿ 5. ಶ್ರೀಧರಾಚಾರ್ಯರ ಜ್ಯೋತಿಷ ತಿಲಕ 6. ಶ್ರೀರಾಮ, ಬಲರಾಮ ಮತ್ತು ಪರಶುರಾಮ 7. ಲಕ್ಷ್ಮೀಶ 8.ಸವಿತೃ 9. ನಾರಾಯಣ ಪಂಡಿತ 10. ಸ್ವರ್ಗ, ಮರ್ತ್ಯ ಮತ್ತು ಪಾತಾಳ 11. ಕನಕದಾಸ 12. ಬೆನಗಲ್ ನರಸಿಂಗ ರಾವ್ 13. 14. ರತೀ ದೇವಿ 15.ಕೊಚಾದ್ರಿ 16. ಪ್ರೇಮ್ ಚಂದ್ 17. ಶಂಕರಾಚಾರ್ಯರ 18. ವಾದಿರಾಜಸ್ವಾಮಿಗಳ 19. ಶಾಂತಾದೇವಿ 20. ಸೀತಾದೇವಿಯನ್ನು.

# ಪೂತನಿಯ ವಿಷಸ್ತನ್ಯಪಾನ

**ಕೋಟೇಶ್ವರ ಸೂರ್ಯನಾರಾಯಣ ರಾವ್**

ದ್ವಾಪರ ಯುಗಾಂತ್ಯ. ಭಗವಾನ್ ಶ್ರೀಮನ್ನಾರಾಯಣನು ತನ್ನ ಎಂಟನೆಯ ಅವತಾರವಾದ ಶ್ರೀಕೃಷ್ಣಾವತಾರದಲ್ಲಿ ಧರೆಗಿಳಿದಿದ್ದಾನೆ. ಯುಗಾಂತ್ಯವಾದುದರಿಂದ ದುಷ್ಟ ಶಕ್ತಿ ಪ್ರವೃತ್ತಿಯ ಜನರಿಂದ ಭೂಭಾರವಾಗುತ್ತಿದೆ. ದುಷ್ಟ ಸಂಹಾರಕ್ಕಾಗಿ ಭಗವಂತ ವಸುದೇವ ದೇವಕಿಯರ ಪುತ್ರನಾಗಿ ಇಳೆಗಿಳಿದ. ಶ್ರೀ ರಾಮಾವತಾರದಲ್ಲಿ ಲಕ್ಷ್ಮಣನಾಗಿ ಅವತರಿಸಿ ಅಣ್ಣನಿಗೆ ವಿಧೇಯನಾಗಿ ಸಹಕರಿಸಿದ ಆದಿಶೇಷ ಈ ಬಾರಿ ಅಣ್ಣ ಬಲರಾಮನಾಗಿ ದುಷ್ಟ ಶಿಕ್ಷಣದಲ್ಲಿ ಪಾತ್ರಧಾರಿಯಾಗಲು ಭುವಿಗಿಳಿದಿದ್ದಾನೆ.

ತನ್ನ ಅವತಾರ ಕಾಲದಿಂದಲೇ ಮಾವ ಕಂಸನಿಂದ ಬವಣೆಗೊಳಗಾದ ತನ್ನ ಮುಂದಿನ ಕಾರ್ಯಭಾರಕ್ಕಾಗಿ ನಂದಗೋಕುಲ ಸೇರಿದ. ಅಲ್ಲಿ ನಂದ - ಯಶೋಧೆಯರ ಕಣ್ಣ ಹೂವಾಗಿ ಲೀಲಾಪ್ರದರ್ಶನ ಮಾಡುತ್ತಿದ್ದ.

ಇತ್ತ ದೇವಕಿಯ ಎಂಟನೆಯ ಪುತ್ರನಾಗಿ ಅವತರಿಸಿದ ಕೃಷ್ಣನ ಬಗ್ಗೆ ತಿಳಿದ ಕಂಸ ತನ್ನ ವಿರೋಧಿಯನ್ನು ಕಂದನಾಗಿರುವಾಗಲೇ ಇಲ್ಲವಾಗಿಸಲು ಷಡ್ಯಂತ್ರ ತಯಾರಿಸಿ ವಿವಿಧ ರೂಪಿನಲ್ಲಿ ತನ್ನ ಕಾರ್ಯ ಸಾಧಿಸಬಲ್ಲ ರಾಕ್ಷಸಿ ಪೂತನಿಗೆ. ಶ್ರೀಕೃಷ್ಣ ವಧೆಯ ಜವಾಬ್ದಾರಿ ನೀಡಿ ನಂದಗೋಕುಲಕ್ಕೆ ಹೋಗುವಂತೆ ತಿಳಿಸಿದ. ಅಲ್ಲಿದೆ ಆಕೆಗೆ ಮತ್ತೊಂದು ಸೂಚನೆ ನೀಡಿ ಶ್ರೀಕೃಷ್ಣನನ್ನು ವಧಿಸಬೇಕಾದ ಸಂದರ್ಭ ಎಷ್ಟು ಮಕ್ಕಳು ಹತ್ಯೆಯಾದರೂ ಚಿಂತೆ ಇಲ್ಲ. ಕಾರ್ಯ ಸಾಧಿಸಿಯೇ ಬರಬೇಕೆಂದು ಕಟ್ಟಾಜ್ಞೆ ನೀಡಿ ಕಳುಹಿಸಿದ.

ಒಂದು ಸುಂದರ ಪ್ರಾತಃಕಾಲ ದೇವಲೋಕದ ಅಪ್ಸರೆಯಂಥಾ ಯುವತಿಯೊಬ್ಬಳು ನಂದಗೋಕುಲಕ್ಕೆ ಬಂದಿದ್ದಾಳೆ. ತನ್ನ ಮುಗ್ಧ ಹಾವ ಭಾವ, ನಯ ವಿನಯದಿಂದ ಅಲ್ಲಿನ ಜನರ ಮನ ಸೂರೆಗೊಂಡಿದ್ದಾಳೆ.

ಅವಳ ನಡೆ ನುಡಿಯಿಂದ ಆಕರ್ಷಿತರಾದ ಮುಗ್ಧರಾಣಿ ಯಶೋಧೆ ಹಾಗೂ ಪರಿವಾರದವರು ಅವಳನ್ನು ಅರಮನೆಯಲ್ಲಿ ಸ್ವತಂತ್ರ ತಿರುಗುವ ಅವಕಾಶ ಪೂತನಿಗೆ ದೊರಕಿತು.

ಇತ್ತ ರಾಜಪರಿವಾರದವರು ತಮ್ಮ ತಮ್ಮ ಕಾರ್ಯದಲ್ಲಿ ಮಗ್ನರಾಗಿದ್ದುದನ್ನು ಅರಿತು ಪುರವನ್ನು ಪ್ರವೇಶಿಸಿದ ಪೂತನಿ ಮಕ್ಕಳ ತೊಟ್ಟಿಲನ್ನು ಒಂದೊಂದಾಗಿ ನೋಡುತ್ತಾ ಶ್ಯಾಮಲ ವರ್ಣದ ಕೃಷ್ಣನನ್ನು ನೋಡಿ ಆಕರ್ಷಿತಳಾಗಿ ಆ ತೊಟ್ಟಿಲ ಸಮೀಪವೇ ಅಡ್ಡಾಡ ತೊಡಗಿದಳು. ತನ್ನ ಬೇಟೆಯನ್ನು ಗುರುತಿಸಿಕೊಂಡ ಪೂತನಿ ತನ್ನ ಮುಂದಿನ ಘೋರ ನಾಟಕಕ್ಕೆ ಅಣಿಯಾಗಲು ಕರಾಳ ವಿಷವನ್ನು ತನ್ನ ಸ್ತನಗಳಿಗೆ ಲೇಪಿಸಿಕೊಂಡು ಬೇರೆಯವರ ದೃಷ್ಟಿ ತನ್ನೆಡೆಗೆ ಬರದಂತೆ ಜಾಗ್ರತೆ ವಹಿಸುತ್ತಾ ತೊಟ್ಟಿಲಿನಿಂದ ಕೃಷ್ಣನನ್ನೆತ್ತಿ ಲಾಲಿ ಮಾಡುತ್ತಾ ತನ್ನ ಕಂಚುಕ ಸರಿಸಿ

**21/2, ಡಿ. ವಿ. ಜಿ. ರಸ್ತೆ, ಬಸವನಗುಡಿ ಬೆಂಗಳೂರು – 560 004**



ಸ್ತನವನ್ನು ಕೃಷ್ಣನ ಬಾಯಲ್ಲಿರಿಸಿದಳು. ಲೋಕದ ಕಣ್ಣಿನಲ್ಲಿ ಹಸುಗೂಸಾದರೂ ತನ್ನ ಕರ್ತವ್ಯ ನೆರವೇರಿಸಲು ಅನುವಾದ ಶ್ರೀಕೃಷ್ಣ.

ತನ್ನ ಬಾಯೊಳಗಿಟ್ಟ ಪೂತನಿಯ ಮೊಲೆತೊಟ್ಟನ್ನು ಅದೇ ತಾನೇ ಮೂಡುತ್ತಿರುವ ತನ್ನ ವಜ್ರ ದಂತದಿಂದ ಕಚ್ಚಿ ಹಿಡಿದಾಗ ಸ್ತನದ ಹಾಲಿನೊಂದಿಗೆ ವಿಷವನ್ನೂ ಹೀರಿದ. ಆದರೆ ಅಷ್ಟಕ್ಕೆ ಸುಮ್ಮನಾಗದೆ ಶ್ರೀಕೃಷ್ಣ ಆಕೆಯ ಜೀವಸತ್ವವನ್ನೇ ಹೀರತೊಡಗಿದಾಗ ಹೈರಾಣಗೊಂಡ ಪೂತನಿ ದಿಕ್ಕೆಟ್ಟು ಅರಮನೆಯೇ ಅಲುಗಾಡುವಂತಹ ಬೊಬ್ಬೆಯನ್ನು ತನ್ನ ನಿಜರೂಪಿನಲ್ಲಿ ಅಬ್ಬರಿಸಿದಾಗ ತಮ್ಮ ಕಾರ್ಯದಲ್ಲಿ ತೊಡಗಿದ್ದ ರಾಜಪರಿವಾರದ ಸ್ತ್ರೀಯರೆಲ್ಲರೂ ಧ್ವನಿ ಬಂದೆಡೆಗೆ ದೌಡಾಯಿಸಿದರು.

ಆದರೆ ಪ್ರಾಣಾಂತಿಕವಾಗಿ ಕೂಗುತ್ತಾ ನೆಲದ ಮೇಲೆ ಬಿದ್ದು ಹೊರಳಾಡುತ್ತಿರುವ ಪೂತನಿಯಿಂದ ಕೃಷ್ಣನನ್ನು ಬೇರ್ಪಡಿಸಲು ಯಾರಿಂದಲೂ ಸಾಧ್ಯವಾಗಲಿಲ್ಲ. ಅಷ್ಟರೊಳಗೆ ತನ್ನ ಸಂಪೂರ್ಣ ಶಕ್ತಿ ಹ್ರಾಸವಾದಾಗ ಪೂತನಿ ಗತಪ್ರಾಣಳಾಗಿ ಬಿದ್ದಳು. ಈ ಭೀಕರ ನೋಟದಿಂದ ವಿಚಲಿತರಾದ ರಾಣಿ ಪರವಾರ ಕೃಷ್ಣನನ್ನೆತ್ತಿ ಯಶೋಧೆಯ ಕೈಗೆ ನೀಡಿ ಲೋಕಮಾಯೆಯಂತೆ ಮಗುವಿಗೆ ದೃಷ್ಟಿ ನಿವಾಳಿಸಲು ಸೂಚಿಸಿದರು.

ಓರ್ವ ಭೀಕರ ರಾಕ್ಷಸಿಯನ್ನು ತಮ್ಮ ಚಿಕ್ಕ ಮಗು ಸಂಹರಿಸಿತೆನ್ನುವುದನ್ನು ರಾಣಿ ಪರಿವಾರದ ಮನಸ್ಸಿನಲ್ಲಿ ಬರದಂತೆ ಮಾಯೆಯ ಮುಸುಕನ್ನು ಎಲ್ಲರ ಮೇಲೆ ಮೋಡಿ ಮಾಡಿದ ಕೃಷ್ಣ ಏನೂ ತಿಳಿಯದವನಂತೆ ಕಿಲಕಿಲನೆ ನಗುತ್ತಾ ಎಲ್ಲರ ಮುದ್ದಿನ ಕಣ್ಮಣಿಯಾದ.

ಪೂತನಿ ರಾಕ್ಷಸಿಯಾದರೂ, ಕೆಡುಕನ್ನು ಬಯಸಿದರೂ ಓರ್ವ ತಾಯಿಯಾಗಿ ಸ್ತನ್ಯ ಪಾನ ಮಾಡಿಸಿದುದರಿಂದ ಆಕೆಗೆ ಕೃಷ್ಣ ಮೋಕ್ಷವನ್ನು ಕರುಣಿಸಿದನೆಂದು ಭಾಗವತದಲ್ಲಿ ಉಲ್ಲೇಖವಿದೆ.

ತನ್ನ ಅವತಾರದ ದುಷ್ಟ ನಿಗ್ರಹ ಕಾರ್ಯದಲ್ಲಿ ಮೊದಲ ಆಹುತಿ ಪಡೆದ ಶ್ರೀಕೃಷ್ಣ ತನ್ನ ಬಾಲ್ಯಾವಸ್ಥೆಯಲ್ಲಿಯೇ ಅನೇಕಾನೇಕ ರಾಕ್ಷಸರನ್ನು ಸಂಹರಿಸಿ, ಜಗತ್ತಿನ ದೃಷ್ಟಿಯಲ್ಲಿ ಸಾಮಾನ್ಯ ಬಾಲಕನಾಗಿಯೇ ಇದ್ದ. ಲೀಲಾ ನಾಟಕ ಕರ್ತೃನಾದ ಕೃಷ್ಣ ಚರಿತ್ರೆಯು ಭಾಗವತದಲ್ಲಿ ಹೃದಯಂಗಮವಾಗಿ ಉಲ್ಲೇಖಿಸಲಾಗಿದೆ.

# ಉಡುಪಿ ಗೀತಾಮಂದಿರದಲ್ಲಿ ಗೀತಾಜಯಂತ್ಯುತ್ಸವ



ಸಮಾಚಾರ ಸಂಗ್ರಹ

"ಶ್ರೀಕೃಷ್ಣನು ಕ್ಷರ ಮತ್ತು ಅಕ್ಷರಗಳಿಗೆ ಅತೀತನು ಮತ್ತು ಸರ್ವೋತ್ತಮನು. ಆದ್ದರಿಂದ ವೇದ ಪುರಾಣಗಳು ಅವನನ್ನು ಪುರುಷೋತ್ತಮ ಎಂಬುದಾಗಿ ಸ್ತುತಿಸುತ್ತಿವೆ. ಈ ರಹಸ್ಯ ತತ್ವವನ್ನು ಸ್ವತಃ ಶ್ರೀಕೃಷ್ಣನೇ ಭಗವದ್ಗೀತೆಯ ಪುರುಷೋತ್ತಮ ಯೋಗದಲ್ಲಿ ಸಾರಿ ಹೇಳಿದ್ದಾನೆ. ಇದನ್ನು ಎಲ್ಲರೂ ತಿಳಿದುಕೊಳ್ಳಬೇಕು. ಅದರಂತೆ ಉಪಾಸಿಸಬೇಕು" ಎಂದು ಪರ್ಯಾಯ ಪೀಠಾಧೀಶರಾದ ಪರಮಪೂಜ್ಯ ಶ್ರೀ ಶ್ರೀ ವಿಶ್ವಪ್ರಿಯ ತೀರ್ಥ ಶ್ರೀಪಾದಂಗಳವರು ಹೇಳಿದರು. ಅವರು ಉಡುಪಿ ಪುತ್ತಿಗೆ ಮಠದ ಗೀತಾಮಂದಿರದಲ್ಲಿ ಆಯೋಜಿಸಲಾಗಿದ್ದ ಗೀತಾಜಯಂತ್ಯುತ್ಸವದಲ್ಲಿ ಅಧ್ಯಕ್ಷ ಪೀಠದಿಂದ ಆಶೀರ್ವಚನ ನೀಡುತ್ತಾ, ಹಳಿತಪ್ಪುತ್ತಿರುವ ಜನರನ್ನು ಸರಿದಾರಿಗೆ ತರುವುದಕ್ಕಾಗಿ ಶ್ರೀಮನ್ ಮಧ್ವಾಚಾರ್ಯರು ಗೀತಾಭಾಷ್ಯ ಹಾಗೂ ಗೀತಾ ತಾತ್ಪರ್ಯವನ್ನು ಬರೆದು, ಗೀತೆಯ ಮಹಿಮೆಯನ್ನು ಜಗತ್ತಿಗೆ ಸಾರಿದರು. ಗೀತೆಯಲ್ಲಿ ಪುರುಷೋತ್ತಮ ಯೋಗ ಶ್ರೇಷ್ಠವೆನಿಸಿದ್ದು, ಅದರಲ್ಲೂ ಕೊನೆಯ ಐದು ಶ್ಲೋಕಗಳು ಸರ್ವಶ್ರೇಷ್ಠವಾದದ್ದು ಎಂದರು. ಪುತ್ತಿಗೆ ಮಠದ ಪರಮಪೂಜ್ಯ ಶ್ರೀ ಶ್ರೀ ಸುಗುಣೇಂದ್ರತೀರ್ಥರು ಆರಂಭಿಸಿರುವ 'ನಿರಂತರ ಗೀತಾ ಪಾರಾಯಣ' ಕಾರ್ಯಕ್ರಮವು ನಿರಂತರವಾಗಿ ನಿರಾತಂಕವಾಗಿ ಮುಂದುವರಿಯಲಿ ಎಂದು ಆಶಿಸಿದರು.

ಮುಖ್ಯ ಅತಿಥಿಗಳಾಗಿ ಪಾಲ್ಗೊಂಡ ವಿದ್ಯಾವಾಚಸ್ಪತಿ ಬನ್ನಂಜೆ ಗೋವಿಂದಾಚಾರ್ಯರು 'ಶ್ರೀಕೃಷ್ಣನನ್ನು ರಕ್ತಪಿಪಾಸು, ಕ್ರಾಂತಿಕಾರಿ ಎಂದೆಲ್ಲಾ ಟೀಕಿಸುವವರಿದ್ದಾರೆ. ಆದರೆ ಯುದ್ಧ ನಿಶ್ಚಯವಾದಾಗಲೂ ಯುದ್ಧವನ್ನು ತಪ್ಪಿಸುವುದಕ್ಕಾಗಿ ಧೃತರಾಷ್ಟ್ರನ ಬಳಿಯಲ್ಲಿ ಸಂಧಾನ ಮಾಡಿದ ವಿಷಯವನ್ನು ತಿಳಿಯದಿರುವುದು ವಿಷಾದಕರ' ಎಂದರು. ಸಂಸ್ಕೃತ ಕಾಲೇಜಿನ ನಿವೃತ್ತ ಪ್ರಾಂಶುಪಾಲರಾದ ಶ್ರೀ ಹರಿದಾಸ ಉಪಾಧ್ಯಾಯರು ಗೀತೆಯಲ್ಲಿ ಬರುವ ಪ್ರಮೇಯಗಳನ್ನು ವಿವರಿಸಿದರು.

ಈ ಸಂದರ್ಭದಲ್ಲಿ ಉಡುಪಿ ಆಸುಪಾಸಿನ ವಿವಿಧ ಶಾಲೆಗಳಲ್ಲಿ ಏರ್ಪಡಿಸಲಾದ ಗೀತಾಕಂಠಪಾಠ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು. ಕಾರ್ಯಕ್ರಮದ ಆರಂಭದಲ್ಲಿ ಗೀತಾಪಾರಾಯಣ ಮಂಡಳಿಯ ಸದಸ್ಯೆಯರಿಂದ ಸಮಗ್ರ ಗೀತಾಪಾರಾಯಣ ನಡೆಯಿತು. ಶ್ರೀ ಮಠದ ಆಡಳಿತ ವರ್ಗದ ಶ್ರೀ ಎಚ್. ವಾಸುದೇವಾಚಾರ್ಯ ಮತ್ತು ಶ್ರೀ ಎಸ್. ಕೃಷ್ಣ ಬಾಯರಿಯವರು ಉಪಸ್ಥಿತರಿದ್ದರು. ಶ್ರೀ ಪುತ್ತಿಗೆ ವಿದ್ಯಾಪೀಠ ಪ್ರಾಂಶುಪಾಲರಾದ ಶ್ರೀ ಬಿ. ಗೋಪಾಲಾಚಾರ್ಯರು ಕಾರ್ಯಕ್ರಮ ನಿರ್ವಹಿಸಿ, ವಂದಿಸಿದರು.

**ಸಾಂಸ್ಕೃತಿ ರಸಪ್ರಶ್ನೆ ಉತ್ತರಗಳು**

1. ಕಂಬ ರಾಮಾಯಣ 2. ಕುಮಾರವ್ಯಾಸ ಭಾರತ 3. ತ್ಯಾಗರಾಜರು ಮತ್ತು ಸ್ವಾಮಿ ದೀಕ್ಷಿತರು ಮತ್ತು ಶ್ಯಾಮಾ ಶಾಸ್ತ್ರಿಗಳು 4. ಶನಿ 5. ಶ್ರೀಧರಾಚಾರ್ಯರ ಜ್ಯೋತಿಷ ತಿಲಕ 6. ಶ್ರೀರಾಮ, ಬಲರಾಮ ಮತ್ತು ಪರಶುರಾಮ 7. ಲಕ್ಷ್ಮೀಶ 8. ಸವಿತೃ 9. ನಾರಾಯಣ ಪಂಡಿತ 10. ಸ್ವರ್ಗ, ಮರ್ತ್ಯ ಮತ್ತು ಪಾತಾಳ 11. ಕನಕದಾಸರ 12. ಬೆನಗಲ್ ನರಸಿಂಗ ರಾವ್ 13. ನವಿಲು 14. ರತೀ ದೇವಿ 15. ಕೊಡಚಾದ್ರಿ 16. ಪ್ರೇಮ್ ಚಂದ್ 17. ಶಂಕರಾಚಾರ್ಯರ 18. ವಾದಿರಾಜ ಸ್ವಾಮಿಗಳ 19. ಶಾಂತಾದೇವಿ 20. ಸೀತಾದೇವಿಯನ್ನು.


*With Best Compliments from :*



**LAXMIDAS JEWELLERS**

"Megha Building" Balmatta Road,
Mangalore - 575 001.
**Phone : 2426060, 2421760**

NANDAKI

Ph. : 2480248 (5 lines)
Mobile : 9844009894 (Amar)
Tele Fax : 2125099 /2126420
Email : nandaki@vsnl.net

**Investments & Holdings (P) Ltd.**
**ENGINEERS & DEVELOPERS (P) Ltd.**

1st floor, CFC Building Annexe, #14/3,
Nrupathunga Road, Bangalore - 560 001

*Contact us for advice on your*
**Investments (Mutual Funds, RBI Bonds, Infrastructure Bonds etc.)**
**Insurance (Life Insurance & General Insurance)**
**Home Loans**
**Construction of Flats & Houses**





ಶ್ರೀ ಮಂತ್ರಾಲಯ ಮಹಾಮಠದಿಂದ ಹಂಪಿಯಲ್ಲಿ ಆಯೋಜಿತವಾದ ಸರ್ವಧರ್ಮ ಸಮ್ಮೇಳನದಲ್ಲಿ ಶ್ರೀ ಶ್ರೀ ಸುಗುಣೇಂದ್ರತೀರ್ಥ ಶ್ರೀಪಾದರನ್ನು ಸನ್ಮಾನಿಸುತ್ತಿರುವುದು.

# ಭಗವದ್ ಗೀತೆ

**ಲೇಖಾಂಕ ೧೬೦**

**ವಿದ್ಯಾವಾಚಸ್ಪತಿ ಬನ್ನಂಜೆ ಗೋವಿಂದಾಚಾರ್ಯ**

ಕೃಷ್ಣಾವತಾರದ ಪುಟಗಳಿಂದ

ಮೂರನೆ ಅಧ್ಯಾಯದ ಎಂಟನೆಯ ಶ್ಲೋಕ :

**ನಿಯತಂ ಕುರು ಕರ್ಮ ತ್ವಂ ಕರ್ಮ ಜ್ಯಾಯೋ ಹ್ಯಕರ್ಮಣಃ ।**

**ಶರೀರಯಾತ್ರಾSಪಿ ಚ ತೇ ನ ಪ್ರಸಿದ್ಧ್ಯೇದಕರ್ಮಣಃ ॥೮॥**

[ಮಾಡು ಮಾಡಲೇಬೇಕಾದ ಕರ್ತವ್ಯವನ್ನು ನೀನು, ಏನೂ ಮಾಡದೆ ತೆಪ್ಪಗೆ ಇರುವುದಕ್ಕಿಂತ ಮಾಡುವುದು ಮೇಲಲ್ಲವೆ? ಏನೂ ಮಾಡದೆ ಕೂತರೆ ನಿನಗೆ ಮೈವಾಳ್ತೆಯೂ ಸಾಧ್ಯವಾಗದು]

## ಆಚಾರ್ಯ ಶಂಕರರ ಭಾಷ್ಯ

ಸಂಗತಿ ಹೀಗಿರುವುದರಿಂದ - 'ನಿಯತಮ್' - ಎಂದು. ನಿಯತಂ = ನಿತ್ಯವಾದ, ಯಾರು ಯಾವ ಕರ್ಮದಲ್ಲಿ ಅಧಿಕಾರಿಯೋ ಮತ್ತು ಫಲಕ್ಕಾಗಿ ಉಕ್ತವಾದದ್ದಲ್ಲವೋ ಅದು ನಿಯತ. ಅಂಥ ಕರ್ಮವನ್ನು ಮಾಡು ನೀನು, ಓ ಅರ್ಜುನ. ಏಕೆಂದರೆ ಕರ್ಮವು, ಜ್ಯಾಯಃ = ಮಿಗಿಲಾದುದು ಫಲದ ದೃಷ್ಟಿಯಿಂದ, ಅಕರ್ಮಣಃ = ಮಾಡದೆ ಇರುವುದಕ್ಕಿಂತ, ತೊಡಗದೆ ಇರುವುದಕ್ಕಿಂತ. ಹೇಗೆ ? ಶರೀರಯಾತ್ರಾ = ದೇಹದ ಇರವು ಕೂಡ, ತೇ = ನಿನಗೆ, ನ ಪ್ರಸಿದ್ಧ್ಯೇತ್ = ಸಿದ್ಧಿಸದು, ಅಕರ್ಮಣಃ = ಮಾಡದೆ ಇರುವುದರಿಂದ. ಅದರಿಂದ ಮಾಡುವುದರ ಮತ್ತು ಮಾಡದೆ ಸುಮ್ಮ ನಿರುವುದರ ಅಂತರ ಲೋಕದಲ್ಲೆ ಅನುಭವಕ್ಕೆ ಬಂದಿದೆ.

## ಆಚಾರ್ಯ ರಾಮಾನುಜರ ಭಾಷ್ಯ

ನಿಯತಃ = ಹಬ್ಬಿ ಅಂಟಿಕೊಂಡಿರುವಂಥದು. ಪ್ರಕೃತಿಯ ಸಿಕ್ಕಿನಲ್ಲಿರುವ ತನಕ ಕರ್ಮ ಸಹಜವಾಗಿ ಅಂಟಿಕೊಂಡಿರುತ್ತದಲ್ಲವೆ? ಪ್ರಕೃತಿಯ ಸಿಕ್ಕೂ ಅನಾದಿಯಾದ ಸಂಸ್ಕಾರದಿಂದ ಮುಂದುವರಿದಿದೆ. ಸಹಜವಾಗಿ ಅಂಟಿದ್ದರಿಂದ ಮಾಡುವುದು ಸುಲಭ; ಕರ್ಮದಲ್ಲಿ ಪ್ರಮಾದಕ್ಕೂ ಎಡೆಯಿಲ್ಲ. ಅದರಿಂದ ಕರ್ಮವನ್ನೆ ಮಾಡು. ಅಕರ್ಮಣಃ = ಜ್ಞಾನನಿಷ್ಠೆಗಿಂತಲೂ ಕರ್ಮವೆ ಮೇಲು. 'ನೈಷ್ಕರ್ಮ್ಯಂ ಪುರುಷೋSಶ್ನುತೇ' [೪] ಎಂದು ಮೊದಲು ಉಲ್ಲೇಖ ಬಂದದ್ದರಿಂದ ಇಲ್ಲಿ 'ಅಕರ್ಮ' ಎಂಬ ಶಬ್ದ ಜ್ಞಾನನಿಷ್ಠೆಯನ್ನೆ ಹೇಳುತ್ತದೆ. ಜ್ಞಾನನಿಷ್ಠೆಯಲ್ಲಿ ತೊಡಗಿದವನಿಗೆ ಕೂಡ ಈ ಮೊದಲು ಅಭ್ಯಾಸವಿರದ್ದರಿಂದ, ಪ್ರಕೃತಿಯಿಂದ ಅಂಟಿಕೊಂಡು ಬಂದದ್ದಲ್ಲವಾದ್ದರಿಂದ ತೊಡಗುವುದು ಕಷ್ಟ; ಪ್ರಮಾದಗಳಿಗೂ ಎಡೆಯಿದೆ. ಅದರಿಂದ ಜ್ಞಾನನಿಷ್ಠೆಗಿಂತಲು ಕರ್ಮನಿಷ್ಠೆಯೇ ಮಿಗಿಲು. ಕರ್ಮ ಮಾಡುತ್ತಲೇ ಆತ್ಮದ ನಿಜದರಿವಿನಿಂದ 'ತಾನು ಕರ್ತನಲ್ಲ' ಎಂಬ ಭಾವ ಬರುತ್ತದೆ ಎಂದು ಇಲ್ಲೇ ಮುಂದೆ ಹೇಳಲಾಗಿದೆ. ಅದರಿಂದ ಆತ್ಮಜ್ಞಾನವೂ ಕರ್ಮಯೋಗದಲ್ಲೆ ಅಡಗಿರುವುದರಿಂದ ಅದೇ ಮಿಗಿಲು ಎಂದರ್ಥ. ಕರ್ಮದಿಂದ ಜ್ಞಾನನಿಷ್ಠೆ ಮಿಗಿಲು ಎನ್ನುವ ಮಾತು ಜ್ಞಾನನಿಷ್ಠೆಯಲ್ಲಿ ಅಧಿಕಾರವಿದ್ದಾಗ ಮಾತ್ರ ಕೂಡುತ್ತದೆ. ಒಂದೊಮ್ಮೆ ಎಲ್ಲ ಕರ್ಮವನ್ನು ತೊರೆದು ಬರಿಯ ಜ್ಞಾನನಿಷ್ಠೆಯಲ್ಲಿ ತೊಡಗಿದೆಯಾದರೆ, ಆಗ ಕರ್ಮ ತೊರೆದು ಜ್ಞಾನದ ದಾರಿ ಹಿಡಿದ ನಿನಗೆ ಜ್ಞಾನ ನಿಷ್ಠೆಗೆ ನೆರವಾಗುವ ದೇಹಪೋಷಣೆಯೂ ಸಾಧ್ಯವಾಗದು. ಸಾಧನೆ ಮುಗಿವ ತನಕ ದೇಹಪೋಷಣೆಯನ್ನಂತು ಅವಶ್ಯ ಮಾಡಲೇಬೇಕು. ನ್ಯಾಯವಾಗಿ ಗಳಿಸಿದ ದುಡ್ಡಿನಿಂದ ಪಂಚಮಹಾಯಜ್ಞಾದಿಗಳನ್ನು ಮಾಡಿ, ಯಜ್ಞಶೇಷವನ್ನುಣ್ಣುವುದರಿಂದಲೆ ದೇಹ ಪೋಷಣೆ ಮಾಡಬೇಕು. 'ಆಹಾರ ಶುದ್ಧವಿದ್ದರೆ ಮನಸ್ಸು ಶುದ್ಧವಾಗುತ್ತದೆ. ಮನಸ್ಸು ಶುದ್ಧವಿದ್ದರೆ ನೆನಪುಶಕ್ತಿ ಗಟ್ಟಿಗೊಳ್ಳುತ್ತದೆ' ಎನ್ನುತ್ತದಲ್ಲವೆ ಶ್ರುತಿ? ಇಲ್ಲೂ ಮುಂದೆ ಇದೇ ಮಾತು ಬಂದಿದೆ: 'ತನ್ನ ಹೊಟ್ಟೆಗಾಗಿಯೆ ಅನ್ನ ಬೇಯಿಸುವ ಪಾಪಿಗಳು ಪಾಪವನ್ನೇ ಉಣ್ಣುತ್ತಾರೆ' [೧೩] ಎಂದು, ಅದರಿಂದ ಜ್ಞಾನಮಾರ್ಗಿ ಕೂಡ ಕರ್ಮವನ್ನು ಕೈಬಿಟ್ಟರೆ ದೇಹಪೋಷಣೆಯೂ ಸಾಧ್ಯವಿಲ್ಲ. ಹೀಗೆ ಜ್ಞಾನಮಾರ್ಗಿ ಕೂಡ, ಬದುಕಿರುವಷ್ಟು ಕಾಲ, ಸಾಧನೆ ಮುಗಿವ ತನಕ, ಪಂಚಮಹಾಯಜ್ಞ ಮುಂತಾದ ನಿತ್ಯ-ನೈಮಿತ್ತಿಕ ಕರ್ಮ ಮಾಡಲೇಬೇಕಾದ್ದರಿಂದ, ಕರ್ಮಯೋಗದಲ್ಲು 'ತಾನು ಕರ್ತನಲ್ಲ' ಎಂಬ ಭಾವನೆಯಿಂದ ಆತ್ಮತತ್ವದ ನಿಜದ ಅರಿವೂ ಅಡಗಿರುವುದರಿಂದ, ಪ್ರಕೃತಿಯ ಸಿಕ್ಕಲ್ಲಿ ಸಿಕ್ಕವನಿಗೆ ಕರ್ಮಯೋಗ ಸುಲಭ ಮತ್ತು ಪ್ರಮಾದಗಳಿಗೂ ಎಡೆಯಿರದ್ದರಿಂದ ಜ್ಞಾನಮಾರ್ಗಿಗೂ ಜ್ಞಾನಯೋಗಕ್ಕಿಂತ ಕರ್ಮಯೋಗವೆ ಮಿಗಿಲು. ಅದರಿಂದ ಕರ್ಮಯೋಗದಲ್ಲೆ ತೊಡಗು ಎಂದಭಿಪ್ರಾಯ.

## ಆಚಾರ್ಯ ಮಧ್ವರ ಭಾಷ್ಯ

ಅದರಿಂದ ನಿಯತಂ = ನಿನ್ನ ವರ್ಣಕ್ಕೆ, ಆಶ್ರಮಕ್ಕೆ ತಕ್ಕುದಾದ ಕರ್ಮವನ್ನು ಮಾಡು.

*** *** *** *** ***

ಈ ಪದ್ಯ ತುಂಬ ಸರಳವಾಗಿದೆ; ನೇರವಾಗಿದೆ. ಹೇಳಬೇಕಾದ್ದನ್ನು ಸ್ಪಷ್ಟವಾಗಿ, ಕರಾರುವಾಕ್ಕಾಗಿ ಹೇಳುತ್ತದೆ. ಇಲ್ಲಿ ಏನನ್ನೂ ಜಗ್ಗಿ, ಎಳೆದು ಅರ್ಥ ಮಾಡುವ ಕಸರತ್ತಿನ ಅಗತ್ಯವೇ ಇಲ್ಲ. ಎಲ್ಲವೂ ನಿರಾಳ.

ಕರ್ಮ ಅಜ್ಞಾನಿಗಳಿಗೆ ಮಾತ್ರ. ಜ್ಞಾನಿಗಳಿಗೆ ಕರ್ಮದ ಅಗತ್ಯವಿಲ್ಲ ಎಂಬ ಮೂಢ ನಂಬಿಕೆಯನ್ನು ಕೃಷ್ಣ ಇಲ್ಲಿ ಸಾರಾಸಗಟಾಗಿ ನಿರಾಕರಿಸುತ್ತಾನೆ. ನಮ್ಮ ಅನುಭವವನ್ನೆ ನಮ್ಮ ಮುಖಕ್ಕೆ ಹಿಡಿದು : 'ನಿಯತಂ ಕುರು ಕರ್ಮ ತ್ವಮ್'.

ನಿಯತಂ = ನಿನ್ನ ಸ್ಥಿತಿಗೆ, ನಿನ್ನ ಜೀವದಗತಿಗೆ ತಕ್ಕುದಾದ, ನೀನು ಮಾಡಲೇಬೇಕಾದ, ಕರ್ಮ = ಕರ್ತವ್ಯ ಕರ್ಮವನ್ನು, ತ್ವಂ = ನೀನು, ನಿಯತಂ = ತಪ್ಪದೆ, ಕುರು = ಮಾಡು.

ಏಕೆ ಮಾಡಬೇಕು. ಅರಿವಿಗಾಗಿ ತಾನೆ ಈ ಕರ್ಮಯೋಗ. ಅರಿವಿನ ಉಪ್ಪರಿಗೆಯಲ್ಲಿ ನಿಂತ ಜ್ಞಾನಯೋಗಿಗೆ ಏಕೆ ಬೇಕು ಮೆಟ್ಟಲೇರುವ ಕರ್ಮ?

ಕೃಷ್ಣ ಪರಿಹಾಸದಿಂದಲೇ ಉತ್ತರಿಸುತ್ತಾನೆ: 'ಅಕರ್ಮಣಃ ಕರ್ಮ ಜ್ಯಾಯೋ ಹಿ'. ಏನೂ ಮಾಡದೆ ಮರವಟ್ಟು ಬದುಕುವುದಕ್ಕಿಂತ ಏನಾದರೂ ಒಳ್ಳೆಯ ಕೆಲಸ ಮಾಡುವುದು

'ಈಶಾವಾಸ್ಯಂ', ಅಂಬಲಪಾಡಿ, ಉಡುಪಿ – 576 103, ದೂರವಾಣಿ : 0820-2521047

ಒಳ್ಳೆಯದಲ್ಲವೆ?

ಅಕರ್ಮಣಃ = ನಿಷ್ಕ್ರಿಯತೆಗಿಂತ, ಕರ್ಮ = ಕ್ರಿಯೆಯಲ್ಲಿ ತೊಡಗುವುದು ಜ್ಯಾಯೋ ಹಿ = ಮೇಲಲ್ಲವೆ?

ಜ್ಞಾನಿಯಾದವನು ಒಳ್ಳೆಯ ಕೆಲಸವನ್ನು ಮಾಡಬಾರದೆಂದು ಹೇಳುವವನು ಯಾರವನು? ಮಾಡಬೇಕಾದ ಕೆಲಸವನ್ನು ಮಾಡದೆ ಬದುಕಿನ ಅಮೂಲ್ಯಕ್ಷಣಗಳನ್ನು ವ್ಯರ್ಥಗೊಳಿಸುವವನಿಗೆ 'ಜ್ಞಾನಿ' ಎಂದು ಹೆಸರೆ?

ಹಾಗಲ್ಲ. ಜ್ಞಾನಿಯಾದವನು ಮನಸ್ಸಿನಲ್ಲಿಯೆ ನಿರಂತರ ಭಗವಚ್ಚಿಂತನೆಯನ್ನು ಮಾಡುತ್ತಿರುತ್ತಾನೆ. ಆ ಭಗವದನುಭೂತಿಯಲ್ಲಿ ಅವನು ಮುಳುಗಿರುತ್ತಾನೆ. ಮುಳುಗಿ ಮೈಮರೆತಿರುತ್ತಾನೆ. ಅವನಿಗೇಕೆ ಈ ಹೊರಗಿನ ವ್ಯವಹಾರಗಳ ಜಂಜಡ. ಬೇಕು ಎಂದರೂ ಹೊರಗಿನ ಎಚ್ಚರವೆ ಇಲ್ಲದ ಅವನು ಕರ್ಮಗಳನ್ನು ಮಾಡುವುದಾದರೂ ಹೇಗೆ?

ಹೀಗೆ ಪ್ರಶ್ನಿಸುವವರು 'ಧ್ಯಾನ' ಎಂದರೇನು ಎಂಬುದನ್ನೆ ಮರೆತಿರುತ್ತಾರೆ. ಧ್ಯಾನವೂ ಒಂದು ಮಾನಸಕ್ರಿಯೆ ಅಲ್ಲವೆ? ಏನೂ ಮಾಡದೆ ಇರುವುದೆಂದರೆ ಧ್ಯಾನವನ್ನೂ ಮಾಡದೆ ಇರುವುದು ಎಂದರ್ಥ. ಅಂಥ ಜ್ಞಾನಿ ಏಕೆ ಬೇಕು? ಅವನು ಜ್ಞಾನಿಯಾದರೂ ಹೇಗಾದಾನು?

ಅಷ್ಟೆ ಅಲ್ಲ ಏನೂ ಮಾಡದೆ ಇದ್ದರೆ ಜ್ಞಾನಿಯಾದರೂ ಬದುಕುವುದು ಹೇಗೆ? ಬದುಕುವುದು ಎಂದರೆ ಕ್ರಿಯೆಗಳ ಸರಮಾಲೆ. ನಿಷ್ಕ್ರಿಯತೆ ಸಾವಿನ ಸಂಕೇತ. ಉಸಿರಾಟವೂ ಒಂದು ಕ್ರಿಯೆಯೇ ಅಲ್ಲವೆ?

ಅಪಿಚ = ಅಲ್ಲದೆ, ಅಕರ್ಮಣಃ = ಏನನ್ನೂ ಮಾಡದ, ತೇ = ನಿನಗೆ, ಶರೀರಯಾತ್ರಾಽಪಿ= ಮೈವಾಳ್ತೆ, ಮನೆವಾಳ್ತೆ ಕೂಡ, ಬಾಳ ಪಯಣ ಕೂಡ, ನ ಪ್ರಸಿದ್ಧ್ಯೇತ್ = ನಡೆಯದು.

'ಚ' ಎನ್ನುವುದು ಆಕ್ಷೇಪದ ಇನ್ನೊಂದು ಮುಖವನ್ನೂ ಸೂಚಿಸುತ್ತದೆ: ಅಕರ್ಮಕ್ಕಿಂತ ಕರ್ಮ ಮೇಲು ಎಂದಷ್ಟೆ ಅಲ್ಲ; ಕರ್ಮ ಇಲ್ಲದೆ ಬದುಕಿಲ್ಲ ಎನ್ನುವ ಇನ್ನೊಂದು ಸಂಗತಿ 'ಕೂಡ' ಈ ವಾದಕ್ಕೆ ಪೂರಕವಾಗಿದೆ.

ಇದು ಪ್ರತಿಯೊಬ್ಬನ ಅನುಭವದ ಸಂಗತಿಯಲ್ಲವೆ? ಇಷ್ಟು ನಿಚ್ಚಳವಾದ ಸಂಗತಿಗೆ ಬೇರೆ ವಿವರಣೆ ಬೇಕೆ? ಬೇರೆ ಸಮರ್ಥನೆ ಬೇಕೆ? - ಎಂದು ಹೇಳುತ್ತಾನೆ ಕೃಷ್ಣ. ★


*With Best Compliments From:*

Ph.: 0820-2527559

ಗಂಧದ ಗುಡಿ

Sagar Arts & Crafts

**Emporium**

Kumar Building Tenkpet, Udupi - 576 101.

SACE

• Sandal Wood, • Rosewood Articles
• Carved Doors • Brass Figures

**S. D. Sathish Kumar**
Proprietor

# ಕೃಷ್ಣನೆಂಬ ಕ್ಷೀರ ಸಮುದ್ರ

ಶ್ರೀ ಶ್ರೀ ಸುಗುಣೇಂದ್ರ ತೀರ್ಥ ಶ್ರೀಪಾದರು

**ಅಮೇರಿಕೆಯ ಡೆಟ್ರಾಯಿಟ್ ನಗರದಲ್ಲಿ ಇತ್ತೀಚೆ ನಡೆದ ಶ್ರೀ ಪುತ್ತಿಗೆ ಮಠದ ಶ್ರೀ ಸುಗುಣೇಂದ್ರತೀರ್ಥ ಶ್ರೀಪಾದಂಗಳವರ 'ರುಕ್ಮಿಣೀಶ ವಿಜಯ' ಉಪನ್ಯಾಸ ಮಾಲಿಕೆಯಲ್ಲಿನ ಮಂಗಲಾಚರಣ ಶ್ಲೋಕದ ಅರ್ಥವಿವರಣೆಯಿಂದ ಈ ಕೆಳಗಿನ ಭಾಗವನ್ನು ಸಂಕ್ಷಿಪ್ತವಾಗಿ ಸಂಗ್ರಹಿಸಲಾಗಿದೆ.**

**ಸಂಗ್ರಹ : ವಿದ್ವಾನ್ ಶ್ರೀ ಗೋಪೀನಾಥ ಗಲಗಲಿ**

## ಭಾಗ ೧

### ಪೂರ್ವಪಕ್ಷಾಸುರರು

ಮಹಾನುಭಾವರಾದ ಶ್ರೀ ವಾದಿರಾಜ ಶ್ರೀಪಾದಂಗಳವರು ರುಕ್ಮಿಣೀಶ ವಿಜಯದ ಮಂಗಲಾಚರಣ ಶ್ಲೋಕದಲ್ಲಿ 'ಯಃ ಶ್ರೀಕೃಷ್ಣ ದುಗ್ಧಾಂಬುಧಿಃ' ಎಂಬ ಬಹ್ವರ್ಥಗರ್ಭಿತ ಶಬ್ದವನ್ನು ಪ್ರಯೋಗಿಸಿದ್ದಾರೆ.

ಶ್ರೀಕೃಷ್ಣನು ಕ್ಷೀರ ಸಮುದ್ರದಂತೆ. ಹಿಂದೆ ದೇವ - ದಾನವರು ಒಂದಾಗಿ ಕ್ಷೀರಸಮುದ್ರ ಮಥನ ಮಾಡಿದಾಗ ಮೊದಲು ಹೊರ ಬಂದದ್ದು ವಿಷ, ಮದ್ಯ ಇತ್ಯಾದಿ. ಅನಂತರ ಮತ್ತು ಆಳವಾಗಿ ಮಥಿಸಿದಾಗ ಅಮೃತ ಸಿಕ್ಕಿತು. ಅದರಂತೆ ಶ್ರೀಕೃಷ್ಣನನ್ನು ಸರಿಯಾಗಿ ತಿಳಿಯಬೇಕಾದರೆ ಆಳವಾದ ವಿಮರ್ಶೆ ನಡೆಸಬೇಕು. ಮೇಲ್ನೋಟಕ್ಕೆ ಕೃಷ್ಣನು ಅಪಾರ್ಥವಾಗುವ ಸಂದರ್ಭಗಳೇ ಬಹಳ; ಮೊದ ಮೊದಲು ಮಥಿಸಿದಾಗ ವಿಷ ಉದಿಸಿದಂತೆ. ಶ್ರದ್ಧಾಳುಗಳು ಅಲ್ಲಿಗೇ ವಿಚಾರ ನಿಲ್ಲಿಸಬಹುದು. ಆದರೆ ನಿಲ್ಲಿಸದೇ ಮುಂದುವರೆದರೆ ಆಗ ಮಾತ್ರ ಶ್ರೀಕೃಷ್ಣನೆಂಬ ಅಮೃತ ಭಕ್ತರ ತಿಳುವಳಿಕೆಗೆ ವಿಷಯನಾಗುತ್ತಾನೆ.

ಅನೇಕರಿಗೆ ಶ್ರೀಕೃಷ್ಣನ ವಿಷಯದಲ್ಲಿ ಬಗೆ ಬಗೆಯ ಸಂದೇಹಗಳಿವೆ. ಅವುಗಳಲ್ಲಿ ಮುಖ್ಯವಾದ ಕೆಲವೊಂದನ್ನು ಇಲ್ಲಿ ವಿಮರ್ಶಿಸೋಣ.

ಶ್ರೀಕೃಷ್ಣ ಧರ್ಮವನ್ನು ಸ್ಥಾಪಿಸಿದನೋ? ಅಧರ್ಮವನ್ನೋ?

ಮಹಾಭಾರತದಲ್ಲಿನ ಕೃಷ್ಣನ ಕುಟಿಲತೆ ಹಾಗೂ ಅಧಾರ್ಮಿಕ ಕಾರ್ಯಗಳನ್ನು ಈ ಕೆಳಗಿನಂತೆ ಪಟ್ಟಿ ಮಾಡಬಹುದು.

1. ಸಂಧಾನದ ನಾಟಕ
2. ಭೀಷ್ಮರ ಮರಣ
3. ದ್ರೋಣರ ಮರಣ
4. ಕರ್ಣನ ಮರಣ
5. ಏಕಕಾಲದಲ್ಲಿ ಅನಾದಿ ಬ್ರಹ್ಮಚಾರೀ ಮತ್ತು ಷೋಡಶಸ್ತ್ರೀಸಹಸ್ರೇಶಃ
6. ಸುಭದ್ರಾಪಹರಣ

**1. ಸಂಧಾನದ ನಾಟಕ :**

ಕೃಷ್ಣ ನಿಜವಾಗಿಯೂ ಸಂಧಾನಕ್ಕಾಗಿ, ಯುದ್ಧ ನಡೆಯದಂತೆ ನೋಡಲು ಹೋದನೆ? ಅಥವಾ ಸಂಧಾನದ ನಾಟಕ ಯುದ್ಧ ಘಟಿಸಲು ಅನುಕೂಲವಾಗುವಂಥ ಪೀಠಿಕೆಯಾಗುವಂತೆ ನಡೆಸಿದನೆ? ನಡೆದ ಪ್ರಸಂಗವನ್ನು ಪರ್ಯಾಲೋಚಿಸಿದರೆ ಕೃಷ್ಣನಿಗೆ ಯುದ್ಧವಾಗುವುದು ಬೇಕಿತ್ತು ಎಂಬುದು ಸ್ಪಷ್ಟವಾಗುವುದು. ಜಗಳವೇ ಇಷ್ಟ ಎಂದು ಗೋಚರಿಸುವುದು.

ದುರ್ಯೋಧನನ ಸತ್ಕಾರವನ್ನು ತಿರಸ್ಕರಿಸಿದುದು ಈ ನಿಟ್ಟಿನಲ್ಲಿ ಮೊದಲ ಹೆಜ್ಜೆ. ದುರ್ಯೋಧನನ ಸತ್ಕಾರವನ್ನು ತಿರಸ್ಕರಿಸಬೇಕೆಂದೇ ಅವನನ್ನು ರೊಚ್ಚಿಗೆಬ್ಬಿಸಿದ ಶ್ರೀಕೃಷ್ಣ. ನಿಜ ಜೀವನದಲ್ಲಿ ಈ ಸನ್ನಿವೇಶವನ್ನು ಊಹಿಸಿ. ನಿಮ್ಮ ಮನೆಗೆ ಪ್ರತಿಷ್ಠಿತ ವ್ಯಕ್ತಿಯೊಬ್ಬ ಬರಲಿದ್ದಾನೆ. ಅವನ ಬರವಿಗಾಗಿ ಎಲ್ಲ ತಯಾರಿ ಮಾಡಿಕೊಂಡು ನೀವು ಸ್ವಾಗತಕ್ಕಾಗಿ ಕಾದಿರುವಿರಿ. ಆ ವ್ಯಕ್ತಿ ನಿಮ್ಮ ಮನೆಗೆ ಬರುವುದಿಲ್ಲ, ಮಾತ್ರವಲ್ಲ ನೀವು ದ್ವೇಷಿಸುವ ನಿಮ್ಮ ಎದುರು ಮನೆಗೆ ಹೋಗಿ ಅಲ್ಲಿ ಸತ್ಕಾರ ಪಡೆಯುತ್ತಾನೆ. ಆಗ ನಿಮಗೆ ಏನೆನ್ನಿಸುತ್ತದೆ? ಹೀಗೆ ಉದ್ದೇಶಪೂರ್ವಕವಾಗಿ ದುರ್ಯೋಧನನನ್ನು ಅವಮಾನಿಸಿ ವಿದುರನ ಆತಿಥ್ಯ ಪಡೆಯುವಲ್ಲಿ ಶ್ರೀಕೃಷ್ಣನು ದುರ್ಯೋಧನನನ್ನು ಯುದ್ಧಕ್ಕೆ ಪರ್ಯಾಯವಾಗಿ ಅಣಿಗೊಳಿಸಿದ. ಕೃಷ್ಣನಿಗೆ ನಿಜವಾಗಿ ಸಂಧಾನ ಬೇಕಿದ್ದರೆ ಕರ್ಣನನ್ನು ರಾಜನಾಗಲು ಸೂಚಿಸಿ, ದುರ್ಯೋಧನನಿಗೂ ಪಾಂಡವರಿಗೂ ಸಮಾಧಾನವನ್ನು ಸುಲಭವಾಗಿ ಒದಗಿಸಬಹುದಾಗಿತ್ತು.

ಪಾಂಡವರಿಗೆ ಕರ್ಣನೇ ಅಗ್ರಜನು ಎಂಬ ವಿಷಯವನ್ನು ಯುದ್ಧ ನಡೆದಾಗ ಕರ್ಣನೊಬ್ಬನಿಗೇ ತಿಳಿಸಿದ ಶ್ರೀಕೃಷ್ಣ. ಅದರ ಬದಲು ಯುದ್ಧದ ಮೊದಲೇ ಪಾಂಡವರಿಗೆ ಈ ವಿಷಯ ತಿಳಿಸಿ, ಕರ್ಣನಿಗೆ (ಪಾಂಡವರಲ್ಲಿ ಜ್ಯೇಷ್ಠನಿಗೆ) ಪಟ್ಟಾಭಿಷೇಕ, ಎಂದಿದ್ದರೆ ಪಾಂಡವರು ಒಪ್ಪುತ್ತಿದ್ದರು. ಕೌರವರಲ್ಲಿ ದುರ್ಯೋಧನನಿಗೆ ಕರ್ಣನೆಂದರೆ ಹೆಂಡತಿಗಿಂತಲೂ ಅಚ್ಚುಮೆಚ್ಚು. ಕರ್ಣನಿಗೆ ಪಟ್ಟಾಭಿಷೇಕ ಎಂದಿದ್ದರೆ ದುರ್ಯೋಧನನೂ ಒಪ್ಪುತ್ತಿದ್ದ.

ಹೀಗೆ ಕೌರವ - ಪಾಂಡವರಿಬ್ಬರಿಗೂ ಕರ್ಣ ರಾಜನೆಂದು ಒಪ್ಪಿತವಾಗಿ ಶಾಂತಿ ತಾನಾಗಿಯೇ ಸ್ಥಾಪಿತವಾಗುತ್ತಿತ್ತು. ಆದರೆ ಕೃಷ್ಣನಿಗೆ ಬೇಕಾಗಿದ್ದು ಯುದ್ಧ. ಸಂಧಾನ - ಶಾಂತಿಗಳಲ್ಲ. ಅಂತೆಯೇ ಕರ್ಣನ ಜನ್ಮದ ವಿಷಯ ಯುದ್ಧದ ಮಧ್ಯದಲ್ಲಿ ಕರ್ಣನೊಬ್ಬನಿಗೇ

**ಶುಭಾಶಯಗಳು :** **ದೂರವಾಣಿ :** 0820-2526755

**ಶ್ರೀ ಮನ್ಮಧ್ವಸಿದ್ಧಾಂತ ಗ್ರಂಥಾಲಯ**

**ರಥಬೀದಿ, ಪೇಜಾವರ ಮಠದ ಬಳಿ**

**ಉಡುಪಿ – 576 101**

**ಧಾರ್ಮಿಕ ಪುಸ್ತಕಗಳ ಪ್ರಕಾಶಕರು ಮತ್ತು ವಿತರಕರು**

ತಿಳಿಸಿ, ಅವನನ್ನು ನಿರ್ವೀರ್ಯನನ್ನಾಗಿಸಿದ. ಕರ್ಣನನ್ನು ಕೊಲ್ಲಲು ಸಾಧ್ಯವಾಗಬೇಕೆಂಬ ಉದ್ದೇಶದಿಂದ ಪಾಂಡವರಿಂದ ಈ ವಿಷಯ ಮುಚ್ಚಿ ಇಟ್ಟ.

ಹೀಗೆ ಕಾಪಟ್ಯದಿಂದ ತನ್ನ ಉದ್ದೇಶವಾದ ಯುದ್ಧ ಹಾಗೂ ಯುದ್ಧದಿಂದ ಕೌರವರ ಸೋಲು - ಸಾವುಗಳನ್ನು ಸಾಧಿಸಿದ ಶ್ರೀಕೃಷ್ಣ.

**2. ಭೀಷ್ಮರ ಮರಣ :**

ಯಾರಾದರೂ ಸರಿರಾತ್ರಿ ಶತ್ರುಗಳ ಶಿಬಿರಕ್ಕೆ ಹೋಗಿ ಅವರಿಗೆ ತನ್ನ ಮೇಲೆ ಇರುವ ಗೌರವಾದರಗಳ ದುರುಪಯೋಗ ಪಡೆದು "ನಿಮ್ಮನ್ನು ಯುದ್ಧದಲ್ಲಿ ಹೇಗೆ ಕೊಲ್ಲಬಹುದು; ದಯವಿಟ್ಟು ಹೇಳಿ" ಎಂದು ಕೇಳುತ್ತಾರೆಯೇ? ಶಿಖಂಡಿಯನ್ನು ಭೀಷ್ಮರಂಥ ಹಿರಿಯ ಯೋಧರ ಮುಂದೆ ನಿಲ್ಲಿಸಿ ಛದ್ಮವೇಷದಿಂದ, ಭೀಷ್ಮರನ್ನು ಕೊಲ್ಲಿಸಿದ. ಇಲ್ಲವಾದಲ್ಲಿ ಇಚ್ಛಾಮರಣಿಯಾದ ಭೀಷ್ಮರಂಥ ಮಹಾಯೋಧನನ್ನು ಅರ್ಜುನನಿಗೆ ಎಂದಾದರೂ ನೇರ ಯುದ್ಧದಲ್ಲಿ ಕೊಲ್ಲುವುದು ಸಾಧ್ಯವಿತ್ತೇ?

ಇಲ್ಲೂ ಮೋಸದಿಂದ, ಅಧರ್ಮದಿಂದಲೇ ಕೃಷ್ಣ ತನಗೆ ಬೇಕಾದುದನ್ನು ಸಾಧಿಸಿದ.

**3. ದ್ರೋಣರ ಮರಣ :**

ಈ ಘಟನೆಯಲ್ಲಿ ಕೃಷ್ಣ ಎರಡು ಅಧರ್ಮದ ಕಾರ್ಯಗಳನ್ನು ಮಾಡಿದ್ದಾನೆ.

1. ಸತ್ಯವನ್ನು ಪರಿಪಾಲಿಸುವ ವ್ರತ ಹಿಡಿದಿರುವ ಧರ್ಮರಾಜನಿಂದ 'ಅಶ್ವತ್ಥಾಮಾ ಹತಃ'


**ಶುಭಾಶಯಗಳು :** ದೂರವಾಣಿ : 2528077

**ಶ್ರೀ ಕೃಷ್ಣ**
**ಇಂಡಸ್ಟ್ರಿಯಲ್ ಕೋ-ಆಪರೇಟಿವ್ ಸೊಸೈಟಿ ಲಿ.**

ಎಲ್. ನಂ. 21487

ಪ್ರಧಾನ ಕಚೇರಿ : ವಾದಿರಾಜ ಕಾಂಪ್ಲೆಕ್ಸ್, ಹಳೆ ಪೋಸ್ಟ್ ಆಫೀಸು ರಸ್ತೆ, ಉಡುಪಿ -576 101

- ❑ ನಮ್ಮಲ್ಲಿ ಚಿನ್ನಾಭರಣ ಈಡಿನ ಮೇಲೆ ಕಡಿಮೆ ಬಡ್ಡಿಯಲ್ಲಿ ಸಾಲ ಸೌಲಭ್ಯ.
- ❑ ವಾಹನ ಈಡಿನ ಸಾಲ ಕ್ಷಿಪ್ರವಾಗಿ ಸಿಗುವ ಸೌಲಭ್ಯ.
- ❑ ಕಡಿಮೆ ಬಡ್ಡಿ ದರದಲ್ಲಿ ಇತರ ಸಾಲಗಳು
- ❑ ವಿವಿಧ ಠೇವಣಾತಿಗಳ ಮೇಲೆ ಆಕರ್ಷಕ ಬಡ್ಡಿ ಕೊಡಲಾಗುವುದು.
- ❑ ನಿರಂತರ ಸೇವಾ ಠೇವಣಿ ಮಾಡಿದರೆ ಆಕರ್ಷಕ ಬಡ್ಡಿಯನ್ನು ಆಯಾ ದೇವಸ್ಥಾನಗಳಿಗೆ ಪೂಜೆ ಪುರಸ್ಕಾರಗಳಿಗೆ ಕಳುಹಿಸಿಕೊಡಲಾಗುವುದು.

ಶಾಖೆಗಳು : ಶ್ರೀಕೃಷ್ಣ ಕಾಂಪ್ಲೆಕ್ಸ್, ಬಸ್‌ಸ್ಟ್ಯಾಂಡ್ ಬಳಿ, ಶಂಕರನಾರಾಯಣ, ಕುಂದಾಪುರ ತಾಲೂಕು
ಎನ್. ಎಸ್. ಕಾಂಪ್ಲೆಕ್ಸ್, ಹೊನ್ನಾಳ - ಬ್ರಹ್ಮಾವರ, ಉಡುಪಿ ತಾಲೂಕು




ಎಂದು ನುಡಿಸಿ, ಸತ್ಯವನ್ನೇ ನುಡಿಯುವ ಹಠದಿಂದ ಧರ್ಮರಾಜನು 'ನರೋ ವಾ ಕುಂಜರೋ ವಾ...' ಎಂದು ವಾಕ್ಯ ಪೂರ್ತಿ ಮಾಡಿದಾಗ ಶಂಖಧ್ವನಿ ಮಾಡಿ ಸತ್ಯವನ್ನು ಮರೆಮಾಚಿದ.

2. ಶಸ್ತ್ರ ಪರಿತ್ಯಾಗ ಮಾಡಿದ ದ್ರೋಣಾಚಾರ್ಯರ ಮೇಲೆ ಒತ್ತಾಯದಿಂದ ಶಸ್ತ್ರ ಪ್ರಯೋಗ ಮಾಡಿಸಿ ಕೊಲ್ಲಿಸಿದ. ಶಸ್ತ್ರ ಪರಿತ್ಯಾಗ ಮಾಡಿದವರ ಮೇಲೆ ಶಸ್ತ್ರ ಪ್ರಯೋಗ ಮಾಡುವುದು ಅಧರ್ಮ. ಆದರೂ ನಿಶ್ಶಸ್ತ್ರರಾದ ದ್ರೋಣಾಚಾರ್ಯರ ಶಿರವನ್ನು ಕತ್ತರಿಸಲಾಯ್ತು, ಶ್ರೀಕೃಷ್ಣನ ಆಣತಿಯಂತೆ. ಇದು ಶ್ರೀಕೃಷ್ಣನ ಕಪಟಕ್ಕೆ ಮತ್ತೊಂದು ನಿದರ್ಶನ.

**4. ಕರ್ಣನ ಮರಣ :**

ರಥದ ಚಕ್ರ ನೆಲದಲ್ಲಿ ಹೂತು ಹೋಗಿ ಆ ಚಕ್ರವನ್ನು ಭೂಮಿಯಿಂದ ಮೇಲಕ್ಕೆ ಎತ್ತುತ್ತಿದ್ದ ಕರ್ಣ. ಕೃಷ್ಣ ಅರ್ಜುನನಿಗೆ ಆಜ್ಞಾಪಿಸಿದ. 'ಹೊಡೆದು ಉರುಳಿಸು' ಕರ್ಣ ಯುದ್ಧದ ನಿಯಮವನ್ನು ಜ್ಞಾಪಿಸಿದ. "ಹಿಂದಿನಿಂದ ಹೊಡೆಯುವುದು; ನಿಶ್ಶಸ್ತ್ರರನ್ನು ಹೊಡೆಯುವುದು ಅಧರ್ಮ" ಇದು ಮತ್ತೊಂದು ಅಧರ್ಮದ ಕೃತ್ಯ ಶ್ರೀಕೃಷ್ಣನಿಂದ.

**5. ಚಾರಿತ್ರ್ಯ ಹೀನ ಕೃಷ್ಣ ?**

ಸಾವಿರಾರು ಸ್ತ್ರೀಯರನ್ನು ಮದುವೆಯಾದ. ಗೋಪಿಕಾಸ್ತ್ರೀಯರೊಡನೆ ರಮಿಸಿದ. ಇಂಥವನು ಬ್ರಹ್ಮಚಾರಿಯಾಗುವುದೇ? ಅದೂ ಅನಾದಿಬ್ರಹ್ಮಚಾರಿಯಂತೆ. ಅದ್ಹೇಗೆ?

ಸ್ತ್ರೀಲೋಲುಪತೆಯಲ್ಲಿ ಕೃಷ್ಣನನ್ನು ಮೀರಿದವರಿಲ್ಲ. ರಾಮಾವತಾರದಲ್ಲಿ ಸೀತೆಯನ್ನು


**ಶುಭ ಹಾರೈಸುವ**

ಕಲ್ಸಂಕ

**ಕಲ್ಸಂಕಾರ್**
**ರತ್ನ ಫ್ಯಾಬ್ರಿಕ್ಸ್**

**ಸಂಸ್ಕೃತ ಕಾಲೇಜ್ ಸಂಕೀರ್ಣ**
**ಉಡುಪಿ - 576 101** ದೂರವಾಣಿ : 5293602

ಸೂಟಿಂಗ್ಸ್, ಶರ್ಟಿಂಗ್ಸ್, ಸಮಾರಂಭದ ಉಡುಗೆಗಳು,
ಯಜ್ಞ ಯಾಗಾದಿಗಳಿಗೆ ಬೇಕಾಗುವ ಪಟ್ಟೆ ವಸ್ತ್ರ, ಶಾಲು, ಇತ್ಯಾದಿಗಳು.
ಚೂಡಿದಾರ್, ಡ್ರೆಸ್ ಮೆಟೀರಿಯಲ್ಸ್, ಮ್ಯಾಚಿಂಗ್ಸ್, ಬೆಡ್‌ಶೀಟ್ಸ್,
ಹ್ಯಾಂಡ್‌ಲೂಮ್ಸ್, ನಿತ್ಯೋಪಯೋಗಿ ಬಟ್ಟೆ ಬರೆಗಳು.

ಅಪಹರಿಸಿದ್ದಕ್ಕಾಗಿ ರಾವಣನನ್ನು ಸಂಹರಿಸಿದ ಶ್ರೀರಾಮನು. ಕೃಷ್ಣಾವತಾರದಲ್ಲಿ ಅದೇ ಭಗವಂತನೇ ರುಕ್ಮಿಣಿಯನ್ನು ಅಪಹರಿಸಿದ.

ಅಂತೆಯೇ ಕೆಲವರು ಹೇಳುವುದುಂಟು. ರಾಮನಷ್ಟು ಪವಿತ್ರನಲ್ಲ ಕೃಷ್ಣ. ಕೃಷ್ಣನಿಗಿಂತ ರಾಮ ವಾಸಿ.

**6. ಸುಭದ್ರಾಪಹರಣ :**

ತಾನು ಸ್ವತಃ ಸ್ತ್ರೀಲೋಲುಪ ಮಾತ್ರವಲ್ಲ; ಅರ್ಜುನನಿಂದಲೂ ಸ್ತ್ರೀ ಅಪಹರಣ ಮಾಡಿಸಿದ. ಈ ಸ್ತ್ರೀ ಮತ್ತಾರೂ ಅಲ್ಲ. ಕೃಷ್ಣನ ಸ್ವಂತ ತಂಗಿ ಸುಭದ್ರೆ.

ಸನ್ಯಾಸಿಯನ್ನು ನಂಬಬೇಡ. ಮನೆಗೆ ಅವನನ್ನು ಕರೆತರುವುದು ಬೇಡ ಎಂದು ಅಣ್ಣನಾದ ಬಲರಾಮನಿಗೆ ಸಲಹೆ ನೀಡಿದ ನಾಟಕ ಮಾಡಿದ.

ಸುಳ್ಳು - ಕಳ್ಳತನ - ಕಪಟ - ಸ್ತ್ರೀಲೋಲುಪತೆ ಇವನ್ನೆಲ್ಲ ಮಾಡಿದ ಕೃಷ್ಣ ಬಾಯಿಯಿಂದ ಹೇಳಿದ್ದು.

**ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ ॥**

ಇವನು ಮಾಡಿದ್ದು ಧರ್ಮ ಸಂಸ್ಥಾಪನೆಯಲ್ಲ. ಅಧರ್ಮಸಂಸ್ಥಾಪನೆ. ಉದ್ದೇಶಪೂರ್ವಕವಾಗಿ ಯುದ್ಧ ನಡೆಯುವಂತೆ ಮಹಾಭಾರತದುದ್ದಕ್ಕೂ ಘಟನೆಗಳನ್ನು ಘೋಷಿಸುತ್ತ ಬಂದ. ಇಂಥ ಕೃಷ್ಣನಿಗೆ ಮಹಾಭಾರತದಲ್ಲಿ ಶಾಂತಿದೂತ ಎಂಬ ಬಿರುದು ಬೇರೆ.

(ಮುಂದುವರಿಯುವುದು)


## ವಧು ಬೇಕಾಗಿದ್ದಾಳೆ

**ಪುರೋಹಿತ ನಡೆಸುತ್ತಿರುವ ಮೂಲನಕ್ಷತ್ರ, ಹರಿತ್ಸಾ ಗೋತ್ರದ ಎಸ್. ಎಸ್. ಎಲ್. ಸಿ. ತನಕ ಓದಿರುವ 5ಅಡಿ 5 ಇಂಚು ಎತ್ತರದ 7-12-1980ರ ಧನುರಾಶಿಯಲ್ಲಿ ಹುಟ್ಟಿರುವ ಮಾಧ್ವ ಬ್ರಾಹ್ಮಣ ವರನಿಗೆ ಒಳ್ಳೆಯ ಮನೆತನದ ತ್ರಿಮತಸ್ಥ ಬ್ರಾಹ್ಮಣ ಕನ್ಯೆ ಬೇಕಾಗಿದ್ದಾಳೆ. ಆಸಕ್ತರು ಈ ಕೆಳಗಿನ ದೂರವಾಣಿಗಳನ್ನು ಸಂಪರ್ಕಿಸಬಹುದು.**

ದೂರವಾಣಿ : 0820-2521272 (ಮಧ್ಯಾಹ್ನ 3 ರಿಂದ 6)
Mobile : 9845208333



**॥ श्रि कृष्णाय नमः ॥**

**U. VITTAL RAO**
*Proprietor*
**SARVAJNA MEDICALS**
Car Street, UDUPI-1

**SMT. VANI V. RAO**
B. A., LL.B.
Advocate, Udupi
Mobile : 9845449044

Phone : 2524070 (R), 2534770 (S)

# ಸುಗುಣಾಂತರಂಗ

ಸಂಪುಟ : 20 ಮಕರ ಮಾಸ ಸಂಚಿಕೆ : 1 ಜನವರಿ 2005



ಪತ್ರಿಕೆಯು 20ನೇ ವರ್ಷಕ್ಕೆ ಪಾದಾರ್ಪಣೆ ಮಾಡುತ್ತಿರುವ ಈ ಸಂದರ್ಭದಲ್ಲಿ ಪತ್ರಿಕೆಯ ಓದುಗರಿಗೆ, ಜಾಹೀರಾತುದಾರರಿಗೆ, ಲೇಖಕರಿಗೆ, ಅಭಿಮಾನಿ, ಹಿತೈಷಿಗಳಿಗೆ ಸಪ್ರಣಾಮ ಶುಭಾಶಯಗಳು.

– ಸುಗುಣ ಬಳಗ

ಮುಖಪುಟ : ಹಯಗ್ರೀವ


| | |
|---|---|
| **ಮರ್ಮಮೀಮಾಂಸೆ**<br>ಸುಶ್ರೀ | 3 |
| **ಮುಖಪುಟ ಲೇಖನ** | 7 |
| **ಭಗವದ್‌ಗೀತೆ**<br>ಬನ್ನಂಜೆ ಗೋವಿಂದಾಚಾರ್ಯ | 9 |
| **ಕೃಷ್ಣನೆಂಬ ಕ್ಷೀರ ಸಮುದ್ರ**<br>ಸಂಗ್ರಹ : ವಿದ್ವಾನ್ ಗೋಪೀನಾಥ ಗಲಗಲಿ | 45 |
| **ಶ್ರೀ ಸುಧಾ ಸುವಚನ** ಲೇಖಾಂಕ - 34<br>ಶ್ರೀ ಶ್ರೀ ಸುಗುಣೇಂದ್ರ ತೀರ್ಥ ಶ್ರೀಪಾದರು. | 50 |
| **ಪ್ರಗತಿವಾದ**<br>ವಾಸುದೇವ ಕಾಣೆಮಾರ್ | 13 |
| **ಮರಣ ಒಂದು ಜಿಜ್ಞಾಸೆ**<br>ಎಸ್. ಪಿ. ಶ್ರೀನಿವಾಸ ಭಟ್ಟಜಿ | 17 |
| **ವಾಸ್ತು ವಿಜ್ಞಾನದ ನಿಷ್ಪತ್ತಿ**<br>ಸಗ್ರಿ ರಾಘವೇಂದ್ರ ಉಪಾಧ್ಯಾಯ | 23 |
| **ಶನಿಕ್ಷೇತ್ರದ ವೈಶಿಷ್ಟ್ಯ**<br>ಶ್ರೀನಿವಾಸ ಭಟ್, ಸೂರತ್ | 27 |
| **ನಿವೃತ್ತಿ – ಪ್ರವೃತ್ತಿ**<br>ಎ. ಬಿ. ಕುಂಜಾರ್, ಬೆಂಗಳೂರು | 33 |


ಇನ್ನಿತರ ಲೇಖನಗಳು ಒಳಪುಟಗಳಲ್ಲಿ


ಸಂಸ್ಥಾಪಕರು :
ಶ್ರೀ ಶ್ರೀ ಸುಗುಣೇಂದ್ರತೀರ್ಥ ಶ್ರೀಪಾದರು

**ನಿರ್ದೇಶಕ** : ಬನ್ನಂಜೆ ಗೋವಿಂದಾಚಾರ್ಯ
**ಸಂಪಾದಕ** : ಎಂ. ರಾಧಾಕೃಷ್ಣರಾವ್
**ಪ್ರಕಾಶಕ** : ಪ್ರಸನ್ನಾಚಾರ್ಯ
**ಮುದ್ರಕ** : ಬಿ.ಜಿ. ಸುಬ್ಬರಾವ್

**ಸಲಹಾ ಮಂಡಳಿ**
ಬನ್ನಂಜೆ ರಾಮಾಚಾರ್ಯ
ಮಳಗಿ ಜಯತೀರ್ಥಾಚಾರ್ಯ
ಡಾ। ಯು. ಪಿ. ಉಪಾಧ್ಯಾಯ
ಬಿಂದು ಮಾಧವಾಚಾರ್ಯ ನಾಗಸಂಪಿಗೆ
ಸಗ್ರಿ ರಾಘವೇಂದ್ರ ಉಪಾಧ್ಯಾಯ
ಡಾ। ಎನ್. ವೆಂಕಟೇಶ ರಾವ್
ಚಿಪ್ಪಗಿರಿ ನಾಗೇಂದ್ರಾಚಾರ್ಯ
ಗಂಜೀಫಾ ರಘುಪತಿ ಭಟ್
ಕಡೆಕಾರು ಶ್ರೀಶ ಭಟ್
ಉಡುಪಿ ರಾಮನಾಥಾಚಾರ್ಯ
ಬಿ.ಜಿ. ರವಿಕುಮಾರ್



**ಸಂಪರ್ಕವಿಳಾಸ :**
ಸಂಚಾಲಕ, ಸುಗುಣಮಾಲಾ ಮಾಸಪತ್ರಿಕೆ
ರಥಬೀದಿ, ಉಡುಪಿ - 576 101, ಉಡುಪಿ ಜಿಲ್ಲೆ, ಕರ್ನಾಟಕ
ದೂರವಾಣಿ : **(0820) 2522222, 2531047**
Tel Fax : 0820-2521272
E-Mail:mprasannaacharya@yahoo.com
Website:http://WWW.shreeputhige.org


**ಚಂದಾವಿವರ**
**ವಾರ್ಷಿಕ : ರೂ. 80/-** 15 ವರ್ಷ ರೂ. **1000/-**

**ಜಾಹೀರಾತು ವಿವರ :**
ಅರ್ಧ ಪುಟಕ್ಕೆ ರೂ. **750/-** ಒಂದು ಪುಟಕ್ಕೆ ರೂ. **1500/-**

# ಶಾರದಾ ಲಿಪಿ



(ಅ ಆ ಇ ಈ ಉ ಊ ಋ ೠ ಌ ಏ ಐ ಓ ಔ ಅಂ ಅಃ)



(ಕಖಗಘಙ, ಚಛಜಝಞ, ಟಠಡಢಣ, ತಥದಧನ, ಪಫಬಭಮ)



(ಯ ರ ಲ ವ ಶ ಷ ಸ ಹ)




*With Best Compliments From:*

Ph.: 2520718
2526718
Fax : 0820-2525628

**GENERAL CRAFTERS REFRIGERATION PVT. LTD.**

**Car street, UDUPI - 576 101**

***Bottle Coolers, Combination Coolers***
***Ice Candy Plants, Display Cabinets***
***Ice Cream Plants, Lolly Tanks***
***Kitchen Equipments etc.***

***Deep Freezers, Water Coolers***
***Milk Coolers, Vertical Freezers***
***Blast Freezers, Pepsi /***
***Cream Hardner.***

**ಮರ್ಮಮೀಮಾಂಸೆ**

# ಸಮಸ್ಸೀಕರಣ?

ಇತ್ತಿತ್ತಲಾಗಿ ಮನುಷ್ಯ ತನ್ನ ಸಂಕುಚಿತ ಸ್ವಾರ್ಥಕ್ಕಾಗಿ ನಶ್ವರಸುಖಕ್ಕಾಗಿ ಬಳಸದೇ ಬಿಟ್ಟದ್ದು ಜಗತ್ತಿನಲ್ಲಿ ಯಾವುದೂ ಉಳಿದಿಲ್ಲವೆನಿಸುತ್ತಿದೆ.

ಅದರಲ್ಲೂ ಸಂಕುಚಿತತೆಯನ್ನು ಸ್ವಾರ್ಥವನ್ನು, ನಶ್ವರಸುಖವನ್ನು ತೊರೆದು ಶಾಶ್ವತದೆಡೆಗೆ ಸಾಗಬೇಕೆಂಬ ಸಂದೇಶ ನೀಡಿದ ಧರ್ಮದೇವರುಗಳನ್ನೇ ಎಳೆದು ತಂದು ನಡೆಸುತ್ತಿರುವ ಅತ್ಯಾಚಾರ, ದುರುಪಯೋಗ ಇಂದಾಗುವಷ್ಟು ಹಿಂದೆಂದೂ ಆಗಿರಲಿಕ್ಕಿಲ್ಲ.

ಜಗತ್ತಿನಲ್ಲಿ ಯಾವೊಂದು ದೇಶದಲ್ಲೂ ಇಲ್ಲದಷ್ಟು ಭಾಷಾವೈವಿಧ್ಯ, ಸಾಂಸ್ಕೃತಿಕ ವೈವಿಧ್ಯ, ಪ್ರಾದೇಶಿಕವೈವಿಧ್ಯ ಭಾರತದಲ್ಲಿದ್ದರೂ ಭಾರತ ಇಷ್ಟರ ತನಕ ಏಕವಾಗಿ ನಿಲ್ಲಲು ಐಕ್ಯೈಕಕಾರಣ ಭಾರತೀಯರಲ್ಲಿ ಅಖಂಡವಾಗಿ ಆಸೇತುಹಿಮಾಚಲವಾಗಿ ಏಕರೂಪವಾಗಿ ಬೇರೂರಿರುವ, ಹಾಸುಹೊಕ್ಕಾಗಿರುವ ಧರ್ಮಶ್ರದ್ಧೆ ಮತ್ತು ಆಸ್ತಿಕತೆ.

ಇದನ್ನು ಮನಗಂಡ ವಿದೇಶೀದುರಾತ್ಮರು ವಿದೇಶೀಯರಾಗಿ ಬಂದು ದುರ್ಬಲಗೊಳಿಸಲು ಯತ್ನಿಸಿದರೂ ಅದು ಸಫಲವಾಗದೇ ಇದೀಗ ಸ್ವದೇಶೀದುರಾತ್ಮರನ್ನೇ ಅದಕ್ಕೆ ಬಳಸುತ್ತಿದ್ದಾರೆಯೇ ಎಂದು ಭಾಸವಾಗುತ್ತಿದೆಯಲ್ಲವೇ?

ಅಥವಾ ಸ್ವಾತಂತ್ರ್ಯೋತ್ತರ ಇತ್ತೀಚಿನ ಐವತ್ತು ವರ್ಷಗಳ ಹಿಂದೆ ಉದ್ಭವವಾಗಿರುವ ಕೆಲ ಸ್ವಾರ್ಥಿರಾಜಕಾರಣಿಗಳೆಂಬ ಸ್ಥಳೀಯಹೊಸತಳಿ ತನ್ನ ಸ್ವಾರ್ಥಸಾಧನೆಗಾಗಿ ತನ್ನ ಬುಡಕಟ್ಟು ಮಾಡುವ ಬುದ್ಧಿಯನ್ನು ಇದೀಗ ತೋರ್ಪಡಿಸುತ್ತಿದೆಯೇ?

ಅಂತೂ ಇಂದು ಈ ಜನ ಪ್ರಕೃತಿಯನ್ನು ವಿಕೃತಿಗೊಳಿಸಿದ್ದಾಯ್ತು. ಸಂಸ್ಕೃತಿಯನ್ನೂ ಮಂಕುಗೊಳಿಸಿದ್ದಾಯ್ತು. ಇದೀಗ ಧರ್ಮದೇವರುಗಳ ಸರದಿ.

ಶಾಂತಿ ಅಭಯಗಳ ತಾಣವೆನಿಸಿದ ದೇಗುಲಮಠಗಳೇ ಇವುಗಳ ಪರಮಗುರಿ. ಚರಮಗುರಿ. ಉಳಿದಲ್ಲಿಗಳಿರುವಂತೆ ಅಲ್ಲೂ ಇರುವ ಕೆಲದೋಷಗಳಿಗೆ, ಕೋಳಿಜಗಳಗಳಿಗೆ ಭೂತಕನ್ನಡಿ ಹಿಡಿಯುವುದೇ ಅವುಗಳ ಅಂತಿಮಗುರಿಯಾಗಿದೆ. ಜೊತೆಗೆ ಇದಕ್ಕೆ ತುಂಬು ಇಂಬು ನೀಡುವವರು ಇದೇ ಜಾತಿಯ ಕೆಲ ಹಿಂದು ಪತ್ರಕರ್ತ ನಕ್ಷತ್ರಿಕರು.

ಅಭಯಾಶ್ರಮಗಳಾದ ಆಸ್ಪತ್ರೆಗಳಂತಿರುವ ಮಠಮಂದಿರಗಳಿಗೆ ಈ ಸ್ವಾರ್ಥಿಗಳೇ ಮಾನವಬಾಂಬ್‌ಗಳಾದರೆ ಮುಂದೇನು?



ವಿಮರ್ಶಿಸಿದಾಗ ಇಷ್ಟಕ್ಕೆಲ್ಲಾ ಮೂಲಕಾರಣ ಇದೀಗ ಸರ್ವತ್ರ ಬೆಳೆಯುತ್ತಿರುವ ಸ್ವಾರ್ಥರಾಜಕಾರಣ. ಹೊಲಸುರಾಜಕಾರಣ. ಗಬ್ಬುರಾಜಕಾರಣ.

ಈ ಎಲ್ಲಾ ದುಃಸ್ಥಿತಿಗೂ ಇಂದು ಕಲುಷಿತಗೊಂಡು ನಾಥಬರುತ್ತಿರುವ ಕೊಳಕುರಾಜಕಾರಣಿಯೇ ರಾಜಕಾರಣ. ತತ್ಪ್ರೇರಿತರಾದವರೇ ಕಾರಣರಾಜರು. ಈ ರಾಜಕಾರಣಿ ಅರ್ಥಕ್ಕಾಗಿ ಧರ್ಮವನ್ನು ಸೆರೆಮನೆಗೆ ತಳ್ಳುತ್ತಾನೆ. ಧರ್ಮವನ್ನು ಹೀನಾಯವಮಾನವಾಗಿ ಕಾಣುತ್ತಾನೆ. ಸ್ವಾರ್ಥಕ್ಕಾಗಿ ಜನಾಂಗಸಾಮರಸ್ಯಕ್ಕೆ ಹುಳಿಹಿಂಡುತ್ತಾನೆ. ಕೊಳ್ಳಿ ಇಡುತ್ತಾನೆ.

ಇದು ಇವತ್ತು ಎಷ್ಟರತನಕ ತಾರಕಕ್ಕೇರುತ್ತಿದೆಯೆಂದರೆ ಇದೀಗ ಸಾಮಾನ್ಯ ಕಿಲಾಡಿಯೊಬ್ಬನೂ ಕೆಲತರಳೆಗಳನ್ನು ಎಳೆದು ತಂದು ತಲೆತಲೆಗಳಿಗೆ ಸಿಕ್ಕಿಸಿಹಾಕಿ ಅವುಗಳಿಗೆ ದ್ವೇಷ ಉತ್ಪಾದನೆ ಮಾಡಿ ಅವುಗಳು ತಲೆ ಚಚ್ಚಿಕೊಳ್ಳುವಂತೆ ಮಾಡಿ ಮುಗ್ಧ ಜನರನ್ನು ಬಲಿ ಕೊಡುತ್ತಾ ತಾನು ತಾರಕನಂತೆ ಮಹಾತಾರಕನಂತೆ ತಾರಕಾಸುರನಂತೆ ತೋರಿಸಿಕೊಳ್ಳುತ್ತಾ ತಾಂಡವವಾಡುತ್ತಾ ಪುಡಿರಾಜಕಾರಣ ಮಾಡಲು ಶುರುಮಾಡಿದ್ದಾನೆ.

ಸಮಸ್ಯೆಗಳನ್ನು ಸೃಷ್ಟಿಮಾಡಿ ಅದರಿಂದ ತಾನು ಮೂರ್ಖಂಡನಾಗಿ ಹೊರಹೊಮ್ಮಲು ಹವಣಿಸುತ್ತಿದ್ದಾನೆ. ಅದರಲ್ಲೂ ದುರಂತವೆಂದರೆ ರಾಜಕಾರಣದ ಕೊಳೆಯಿಂದ ದೂರವಿರುವ ಸಭ್ಯ ಸಮಾಜವೆಂದು ಭಾವಿಸಲ್ಪಟ್ಟ ಸುಬ್ಬುಲಕ್ಷ್ಮೀಯಂತಹ ಸಾಧ್ವಿ ಮಣಿಗಳಿಂದ ಕೂಡಿದ ಮಹಿಳಾಸಮಾಜದಿಂದಲೂ ಕೆಲ ಮಹಿಳಾಮಣಿಗಳು ಇತ್ತೀಚೆ ಮಾಡುತ್ತಿರುವ ಹೊಲಸುರಾಜಕಾರಣ ಸಮಸ್ಯೆಯ ತೀವ್ರತೆಯನ್ನು ಪ್ರತಿಬಿಂಬಿಸುತ್ತಿದೆ. ಕತೆಗಾರ್ತಿಯೆಂದು ತನ್ನನ್ನು ಕರೆಸಿಕೊಂಡ ಶೂರ್ಪನಖಿಯೊಬ್ಬಳ ನಡತೆಗೆಟ್ಟ ಮಾತುಗಳೇ ಕಟ್ಟಿದಕತೆಗಳೇ ಇದಕ್ಕೆ ಜ್ವಲಂತ ಉದಾಹರಣೆಯಲ್ಲವೇ? ಅಗ್ಗದ ಪ್ರಚಾರ, ತಾನೂ ರೂಪಸಿಯಾಗಬಹುದೆಂಬ ಹುಸಿ ಹಮ್ಮು ಮತ್ತು ಕೈಗೆ ಪುಡಿಕಾಸು ಇವು ಶೂರ್ಪನಖಿಯನ್ನೂ, ಹೆಗ್ಗಣವನ್ನೂ ಕೊಳಕುರಾಜಕಾರಣದಲ್ಲಿ ತೊಡಗಿಸಿದ್ದು ಸಮಸ್ಯೆಯ ಆಳವನ್ನು ತೋರಿಸುತ್ತದಲ್ಲವೇ?

ಸಮಸ್ಯೆಗಳಿಂದ ನಾಯಕನಾಗಿ ಹೊರಹೊಮ್ಮಲು ಹೊಂಚುಹಾಕುತ್ತಾ ಇರುವ ಈ ರಾಜಕಾರಣಿಗಳು ಬಲವಂತವಾಗಿ ತಮಗೆ ತಾವೇ ಆತ್ಮವಂಚನೆ ಮಾಡಿಕೊಳ್ಳುತ್ತವೆ. ಅವುಗಳು ಹತ್ತಿರ ಕರೆದರೂ ಬರುವುದಿಲ್ಲ. ಯಾಕೆಂದರೆ ಎಲ್ಲಿ ತಾವು ರಿಪೇರಿಯಾಗಿ ಬಿಡುತ್ತವೋ, ಆತ್ಮ ಜಾಗೃತಿಯಾಗಿ ಬಿಡುತ್ತದೋ, ಸತ್ಯ ದರ್ಶನವಾಗಿಬಿಡುತ್ತದೋ ಮುಂದಿನ ರಾಜಕಾರಣಕ್ಕೆ ಎಲ್ಲಿ ತಡೆಯಾಗಿಬಿಡುತ್ತದೋ ಎಂಬ ಭಯ ಅವುಗಳಿಗೆ.

ಸಂಪುಟ ವಿಸ್ತರಣೆ ಸಮಯ ಬಂದಾಗ, ಚುನಾವಣೆ ಸಂಭವನೀಯ ಆಗುವಾಗ ಇಲ್ಲದೇ ಇದ್ದ ಕಾಲ್ಪನಿಕ ಗೋಪುರವನ್ನು ಅವರು ಸೃಷ್ಟಿಸುತ್ತಾರೆ. ಪುನಃ ಅದೇ ಕಾಲ್ಪನಿಕಗೋಪುರವನ್ನು ಕೆಡವಿದ ಕಲ್ಪನೆಯನ್ನೂ ಮಾಡಿ ಅಲ್ಲೊಬ್ಬ ಖಳನಾಯಕನನ್ನು ಸೃಷ್ಟಿ ಮಾಡುತ್ತಾರೆ. ಮತ್ತೆ ಪುನಃ ಕೆಡವಿದ್ದಕ್ಕೆ ತಾವೇ ಪುನಃ ಉಗ್ರಪ್ರತಿಭಟನೆಯನ್ನು ಮಾಡುತ್ತಾರೆ. ತಾನೇ ಸೆರೆಸಿಕ್ಕಿಹಾಕಿಕೊಂಡು ಮತ್ತೆ ತಾವೇ ಅದಕ್ಕೆ ಪ್ರತಿಭಟಿಸುತ್ತಾರೆ.

ಪ್ರತಿಭಟಿಸಿ ಮತ್ತೆ ಪುನಃ ತಾವೇ ಪ್ರತಿಕ್ರಿಯಿಸುತ್ತಾರೆ. ಮತ್ತೆ ತಮ್ಮ ಬೆನ್ನನ್ನು ತಾವೇ ಚಪ್ಪರಿಸಿಕೊಂಡು ಮುಗ್ಧ ಜನರನ್ನು ಎತ್ತಿಕಟ್ಟುತ್ತಾ ಚುನಾವಣೆಗೆ ಅಣಿಯಾಗುತ್ತಾರೆ.

ಇಂದಿನ ರಾಜಕಾರಣವೆಂದರೆ ಸಮಸ್ಯೀಕರಣ, ಅಪರಾಧೀಕಾರಣ ಹೊರತು ಬೇರೇನಲ್ಲ. ಲೋಕಲ್ ರಾಜಕಾರಣಿಯನ್ನು ಹಿಡಿದು ಗ್ಲೋಬಲ್ ರಾಜಕಾರಣಿತನಕವೂ ಇದು ಸೇಮು.

ಒಬ್ಬ ರಾಜಕಾರಣಿಗೆ ಸಮೂಹ ನಾಶಕ ಅಸ್ತ್ರವೇ ಸಿಗುತ್ತಿಲ್ಲವೆಂಬ ಚಿಂತೆ. ಮತ್ತೊಬ್ಬನಿಗೆ ತಾನು ಸೃಷ್ಟಿಸಿದ ಆ ಕಾಶ್ಮೀರ ಸಮಸ್ಯೆ ಎಲ್ಲಿ ಮುಗಿದುಬಿದ್ದು ತನ್ನ ಕುರ್ಚಿ ಮುರಿದು ಬೀಳುತ್ತದೋ ಎಂಬ ಚಿಂತೆ. ಮತ್ತೊಬ್ಬ ರಾಜಕಾರಿಣಿಗೆ ಆ ಸನ್ಯಾಸಿಗೆ ಎರಚಲು ಇನ್ನೇನು ಹೊಸತು ಕಂಡು ಹಿಡಿಯುವುದೆಂಬ ಸಮಸ್ಯೆ, ಮಗದೊಬ್ಬನಿಗೆ ಆ ಕನಕಗೋಪುರ ಕಟ್ಟೇಬಿಟ್ಟರಲ್ಲ ಇನ್ನೇನು ಮಾಡುವುದೆಂಬ ಚಿಂತೆ, ಒಟ್ಟಿಗೆ ಎಲ್ಲ ಸಮಸ್ಯೆಗಳ ಅಮಾವಾಸ್ಯೆಗಳು ಈಗಲೇ ಮುಗಿದುಬಿಟ್ಟರೆ ಮುಂದಿನ ಚುನಾವಣೆ ತನಕ ಏನು ಮಾಡುವುದು ಎಂಬ ಚಿಂತೆ. ತತ್‌ಕ್ಷಣ ಘೋಷಣೆಯಾದರೆ ಫಕ್ಕನೆ ಎಲ್ಲಿಂದ ಸಮಸ್ಯೆ ತರುವುದು ಎಂಬ ಚಿಂತೆ. ಕೆಲ ಪತ್ರಕರ್ತಮಹಾಶಯರಿಗೆ ಸಮಸ್ಯೆಗಳೆಲ್ಲಾ ಬೇಗ ಬೇಗನೇ ಮುಗಿದರೆ ಸರ್ಕ್ಯುಲೇಶನ್ನಿನ ಚಿಂತೆ. ಇತ್ತ ಜಾತಿಗಳೆಲ್ಲಾ ಪೂರ್ಣತೀರಿಹೋದರೆ ಓಟುಗಿಟ್ಟಿಸುವುದು ಹೇಗೆ ಎಂಬ ಚಿಂತೆ ಕೆಲವುಗಳಿಗೆ. ಹಾಗಾದರೆ ಸೆಕ್ಯುಲರ್ ಸಿದ್ಧಾಂತ ಹೇಗೆ ಉಳಿಸಿಕೊಳ್ಳುವುದು ಎಂಬ ಚಿಂತೆ ಬುದ್ಧಿಜೀವಿಗಳಿಗೆ, ದುರ್ಬುದ್ಧಿಜೀವಿಗಳಿಗೆ. ಎಲ್ಲಿ ಈ ಸಮಸ್ಯೀಕರಣ ಜನರೆಲ್ಲರಿಗೂ ತಿಳಿದು ಹೋಗಿ ಬಿಡುತ್ತದೋ ಜನರಿಗೆಲ್ಲಾ ವಿವೇಕ ವಿಮರ್ಶೆ ಬಂದುಬಿಡುತ್ತದೋ ಎಂದು ಈ ಎಲ್ಲರ ಒಳಗೆ ತಳಮಳಿಸುವ ಒಳಚಿಂತೆ

ಅಂತೂ ದಾಸರು ಹೇಳಿದ್ದು ಸುಳ್ಳಲ್ಲ. ಅನುಗಾಲವೂ ಚಿಂತೆ ಈ ಜೀವಕ್ಕೆ. ಸಮಸ್ಸೀಕರಣದ ಜೀವಕ್ಕೆ. ಕನಕಗೋಪುರ ಇದ್ದಿದ್ದರೆ ಅದನ್ನು ಕಟ್ಟಿದವರು ಯಾರು? ಇಸ್ವಿಯಾವುದು? ಕನಕದಾಸರೇ ಕಟ್ಟಿದರೇ? ಖರ್ಚು ಯಾರು ಕೊಟ್ಟರು? ಉಡುಪಿಯವರಿಂದ ಕಟ್ಟಿಸಿದರೇ? ಬಿಜಾಪುರದವರನ್ನು ಕರಕೊಂಡು ಬಂದು ಕಟ್ಟಿಸಿ ಅದಕ್ಕೆ ಕನಕಗೋಪುರ ಎಂದು ಹೆಸರಿಟ್ಟರೇ? ಕಟ್ಟಿದವರ ಕುಲದವರು ಈಗಲೂ ಇದ್ದಾರೆಯೇ? ಅಥವಾ ವಿಜಯನಗರದವರನ್ನು ಕರೆಸಿಕೊಂಡು ಬಂದರೇ? ಆವಾಗ ಆ ದೊಣ್ಣೆಯ ರಾಯನ ಪರ್ಮಿಷನ್ ಪಡೆದರೇ? ಅಥವಾ ಬ್ರಾಹ್ಮಣರು, ಅಷ್ಟ ಮಠಾಧೀಶರು ಕಟ್ಟಿ ಅದಕ್ಕೆ ಕನಕಗೋಪುರ ಎಂದು ಹೆಸರಿಟ್ಟರೇ? ಹಾಗೆ ಒಪ್ಪಿದರೆ ಅಷ್ಟಮಠಾಧೀಶರನ್ನೂ ಬ್ರಾಹ್ಮಣರನ್ನೂ ಒಳ್ಳೆಯವರೆಂದು ಹೇಳುವ ಆಪತ್ತು, ಮಹಾಪತ್ತು ಬರುತ್ತದಲ್ಲವೇ? ಕನಕಮಂಚ ತಂದಮೇಲೆ ಕನಕಗೋಪುರ ಕಟ್ಟಿದ್ದೋ ಅಥವಾ ನಂತರವೋ? ಇತ್ಯಾದಿ ಇತ್ಯಾದಿ ಈ ವಿಚಾರವಂತರ, ವಿಮರ್ಶಕರ ಸತ್ಯಶೋಧಕರ ವಿಮರ್ಶೆಯ ಮಹಾಸಮಸ್ಯೆ ಈ ಸಮಸ್ಸೀಕಾರಣಿಗಳಿಗೆ ದೊಡ್ಡತಲೆನೋವಾಗಿದೆಯಲ್ಲವೇ? ಕನಕ ಗೋಪುರದ ಹಿಂದೆ ರಾಜಕಾರಣಿಗಳು ಅಧಿಕಾರದ ಗಾಳಿಗೋಪುರ, ಧನಕನಕ ಗೋಪುರ ಕಟ್ಟಿಸುತ್ತಿದ್ದಾರಲ್ಲವೇ? ಶ್ರೀ ಕೃಷ್ಣ ಗೋಪುರ, ರಾಜಗೋಪುರದ ಬದಲು ರಾಜಕಾರಣದ ಗೋಪುರವಾಗುತ್ತದಲ್ಲವೇ?

ಒಟ್ಟಿಗೆ ಹೇಳುವುದಿದ್ದರೆ ಸಮಸ್ಸೀಕರಣವೇ ಜಗತ್ತಿನ ಅತಿದೊಡ್ಡ ಸಮಸ್ಯೆಯಲ್ಲವೇ? ಬಹುಜನರ ಪೆದ್ದುತನ, ಮುಗ್ಧತೆಗಳನ್ನೇ ಬಂಡವಾಳವಾಗಿಸಿಕೊಂಡ ಭಂಡಸಮಸ್ಸೀಕಾರಣಿಗಳೇ, ಸರ್ವಕ್ಷೇತ್ರಗಳನ್ನೂ ಹಬ್ಬುತ್ತಿರುವ ಕೆಲ ಥರ್ಡ್‌ಕ್ಲಾಸ್ ರಾಜಕಾರಣಿಗಳೇ ಅಶಾಂತಿಗಾಗಿ ಜಾತಕದಂತೆ ಹಾತೊರೆಯುವ, ಹಪಹಪಿಸುವ ಅರಾಜಕಾರಣಿಗಳೇ ಇಂದಿನ ಜಗತ್ತಿನ ಅತಿದೊಡ್ಡ ಸಮಸ್ಯೆಗಳಾಗಿವೆಯಲ್ಲವೇ? ಅಸೀಮ ಸಮಸ್ಯೆಗಳಾಗಿದೆಯಲ್ಲವೇ?

**– ಸುಶ್ರೀ**


**ನವೀನ ಮಾದರಿಯ ಗೃಹಾಲಂಕಾರ ಸಾಮಗ್ರಿಗಳು, ಮಹಿಳೆಯರಿಗೆ ಬೇಕಾಗುವ ವಿವಿಧ ನಮೂನೆಯ ಬಳೆ ಹಾಗೂ ಶೃಂಗಾರ ಸಾಧನಗಳು, ಮಕ್ಕಳ ಆಟಿಕೆ ವಸ್ತುಗಳು, ಉಡುಗೊರೆಗೆ ಬೇಕಾಗುವ ಫ್ಯಾನ್ಸಿ ವಸ್ತುಗಳು ಆಕರ್ಷಕ ಬೆಲೆಯಲ್ಲಿ ಸದಾ ಲಭ್ಯ.**

**Ph.: 2527787**

# ನವೀನ್

**ಜನರಲ್ ಸ್ಟೋರ್ಸ್**

ಸಿ. ಬಿ. ರೋಡ್, ಬಡಗು ಪೇಟೆ ಕ್ರಾಸ್, ಉಡುಪಿ

**Ph.: 5293787**

# ನವೀನ್

**ಫ್ಯಾನ್ಸಿ ಸೆಂಟರ್**

ಬಡಗುಪೇಟೆ, ಉಡುಪಿ



**ಹಾರ್ದಿಕ ಶುಭಾಶಯಗಳೊಂದಿಗೆ :** ದೂರವಾಣಿ : **2520962**

# ನೋವೆಲ್ಟಿ ಪ್ಯಾಲೇಸ್ ಜುವೆಲ್ಲರ್ಸ್

**ಭೀಮನಕಟ್ಟೆ ಬಿಲ್ಡಿಂಗ್, ರಥಬೀದಿ, ಉಡುಪಿ – 576 101**

**ನೋವೆಲ್ಟಿ ಪ್ಯಾಲೇಸ್‌ನ ಆಭರಣಾದಿಗಳು**
**ಮೌಲ್ಯಾಧಾರಿತ ಹಾಗೂ ಅಜೀವ ಪರ್ಯಂತ.**



*With Best Compliments from :* Ph.: 2520962

# SAADHANA DIGITAL COLOR LAB

Kamakshi Complex, Opp.: Sanskrit College, Udupi -576 101

## SAADHANA DIGITAL STUDIO

Opp. Sanskrit College, Udupi - 576 101

✆ : Studio : 2523775, Resi. : 2537776

ಶ್ರೀಮದನುವ್ಯಾಖ್ಯಾನ ಅನುಸಂಧಾನಪೂರ್ವಕ

# ಸುಧಾಸುವಚನ

ಶ್ರೀ ಶ್ರೀ ಸುಗುಣೇಂದ್ರತೀರ್ಥ ಶ್ರೀಪಾದರು

ಲೇಖಾಂಕ -34 ಮೊಕ್ಕಾಂ: ಶ್ರೀಕೃಷ್ಣ ಬೃಂದಾವನ, ನ್ಯೂಜೆರ್ಸಿ ಅಮೆರಿಕ

ಗ್ರಂಥಸೌಷ್ಠವದೊಂದಿಗೆ ಉಪಪಾದನಾಯ ಮತ್ತು ಪ್ರದರ್ಶನಾಯ ಎಂಬ ಶಬ್ದಗಳ ಹಿಂದಿರುವ ಚಿಂತನ ಚಮತ್ಕಾರಗಳನ್ನು ಗುರುತಿಸಿದ್ದಾಯ್ತು.

ಇದೀಗ ಆಪ್ಯ, ಆಪ್ಯತರ, ಆಪ್ಯತಮ ಎಂಬ ಶಬ್ದಗಳಲ್ಲಿ ಆಚಾರ್ಯರು ನಾರಾಯಣನು ವೇದಗಳಿಂದ ಆಪ್ಯತಮ ಎಂದು ತಮಪನ್ನು ಯಾಕೆ ಆಯ್ಕೆ ಮಾಡಿದರು ಎಂಬ ಪ್ರಶ್ನೆಯನ್ನು ಎತ್ತಿಕೊಂಡು ಆಪ್ಯಗಳಲ್ಲೂ ತರ ಮತ್ತು ತಮ ಎಂದು ತಾರತಮ್ಯ ಇದೆ, ಧರ್ಮಾದಿಗಳು ವೇದಾದಿಗಳಿಂದ ಆಪ್ಯಗಳು ಪ್ರಾಣಾದಿಗಳು ಅಪ್ಯತರಗಳು ನಾರಾಯಣ ಆಪ್ಯತಮ ಎಂಬುದಾಗಿ ಜ್ಞೇಯಗಳಲ್ಲಿರುವ ವಿಧವಿಧದ ಡಿಗ್ರಿಗಳನ್ನು ಜಯಾರ್ಯರು ಪ್ರಸ್ತಾಪಿಸುತ್ತಾ ಧರ್ಮಾದಿಗಳ ಜ್ಞಾನ, ಪ್ರಾಣಾದಿಗಳ ಜ್ಞಾನ ನಾರಾಯಣನ ಪ್ರತಿಪತ್ತಿಗೆ ಅಂಗ ಎಂದು ಅಂದು ಬಿಟ್ಟರು. ಆದ್ದರಿಂದ ಅವು ಆಪ್ಯ, ಆಪ್ಯತರಗಳಾಗಬಹುದೇ ಹೊರತು ನಾರಾಯಣನಂತೆ ಆಪ್ಯತಮಗಳಲ್ಲ ಅಂದರು.

ಇದರ ಮೇಲೆ ಈಗ ಜಿಜ್ಞಾಸೆ - ಅದು ಹೇಗೆ ಧರ್ಮಾದಿಗಳ ಜ್ಞಾನ ಅರ್ಥಾತ್ ಪುಣ್ಯಪಾಪಾದಿಗಳ ಜ್ಞಾನ ನಾರಾಯಣನ ಜ್ಞಾನಕ್ಕೆ ಅಂಗ? ಎಂದು.

ಅದೇನು ಪುಣ್ಯಪಾಪಾದಿಗಳನ್ನು ತಿಳಿಯದವನಿಗೆ ಪ್ರಾಣಾದಿಗಳನ್ನು ತಿಳಿಯದವನಿಗೆ ನಾರಾಯಣನ ಜ್ಞಾನಬರುವುದಿಲ್ಲವಾ? ಎಂದು.

ನಾರಾಯಣನ ಪ್ರತಿಪತ್ತಿಗೂ ಪುಣ್ಯಪಾಪಾದಿಗಳ ಪ್ರತಿಪತ್ತಿಗೂ ಕಿಂ ಕೇನ ಸಂಬಂಧ? ಎಂದು. ಪುಣ್ಯಪಾಪಾದಿಗಳ ಜ್ಞಾನವಿಲ್ಲದೇನೂ ದೇವದತ್ತಾದಿಗಳ ಜ್ಞಾನ ಬರುವಂತೆ ನಾರಾಯಣನ ಜ್ಞಾನವೂ ಬರಬಹುದಲ್ಲ? ಎಂದು.

ಈ ಪ್ರಶ್ನೆಗೆ ಉತ್ತರವನ್ನು ಅರ್ಥಮಾಡಿಕೊಳ್ಳಬೇಕಾದರೆ ಮೊದಲು ನಾವು ನಾರಾಯಣನ ಪ್ರತಿಪತ್ತಿ ಅಂದರೆ ಏನು ಎಂದು ಅರ್ಥಮಾಡಿಕೊಂಡರೆ ತತ್‌ಕ್ಷಣ ಧರ್ಮಾದಿಗಳ ಜ್ಞಾನ ನಾರಾಯಣನ ಪ್ರತಿಪತ್ತಿಗೆ ಹೇಗೆ ಅಂಗ ಎಂದು ತನ್ನಿಂದ ತಾನೇ ತಿಳಿದುಬಿಡುತ್ತದೆ. ಆದ್ದರಿಂದ ನಾರಾಯಣನ ಪ್ರತಿಪತ್ತಿ ಎಂದರೆ ಏನು ಎಂಬ ಜಿಜ್ಞಾಸೆ ಈಗ ಬಹಳ ಮುಖ್ಯ.



ಅರೆ, ನಾರಾಯಣನ ಪ್ರತಿಪತ್ತಿ ಅಂದರೆ ನಾರಾಯಣನ ಜ್ಞಾನ ಅಂದು ಬಿಡಬಹುದು ನೀವು. ಆದರೆ ಅದು ಕ್ಷೀರಸಾಗರಭಟ್ಟರ ಜ್ಞಾನದಂತೆ ಅಲ್ಲ. ಕ್ಷೀರ ಕುಡಿಯದವನಿಗೂ ಸಾಗರನೋಡದವನಿಗೂ ಕ್ಷೀರಸಾಗರಭಟ್ಟರು ಅಂದರೆ ಯಾರು ಅಂತ ಗೊತ್ತಿರಬಹುದು ಎನ್ನಬಹುದು ನೀವು. ಆದರೆ ಕ್ಷೀರಸಾಗರಭಟ್ಟರಂತೆ ಬರೇ ನಾರಾಯಣ ಭಟ್ಟ ಅಲ್ಲ. ಅವನು ನಿಜವಾಗಿಯೂ ಕ್ಷೀರಸಾಗರಶಾಯಿಯೇ ಆಗಿದ್ದಾನೆ. ದೋಷವಿರುದ್ಧಗಳಾದ ನಾರಗಳಿಗೆ ಅರ್ಥಾತ್ ಗುಣಗಳಿಗೆ ಆಶ್ರಯನೇ ಆಗಿದ್ದಾನೆ. ಆದ್ದರಿಂದ ಕ್ಷೀರವನ್ನೇ ನೋಡದವ ಸಾಗರವನ್ನೇ ನೋಡದವ ನಿಜವಾಗಿಯೂ ಕ್ಷೀರಸಾಗರಶಾಯಿಯಾದವನನ್ನು ನೋಡಿಯಾನೇ? ಗುಣದೋಷಗಳ ಪರಿಜ್ಞಾನವೇ ಇಲ್ಲದವನಿಗೆ ದೋಷವಿರುದ್ಧಗಳಾದ ಗುಣಗಳ ಆಶ್ರಯನ ಜ್ಞಾನ ಬಂದೀತೇ? ಆದ್ದರಿಂದ ದೋಷವಿರುದ್ಧ ಗುಣಗಳಿಗೆ ಆಶ್ರಯನೆಂದಾಗ ದೋಷವನ್ನೇ ತಿಳಿಯದವನಿಗೆ ದೋಷವಿರುದ್ಧಗಳ ಜ್ಞಾನವಾದರೂ ಎಂತು? ದೋಷವಿರುದ್ಧಗುಣಗಳ ಆಶ್ರಯನ ಜ್ಞಾನವಾದರೂ ಎಂತು? ಸಾಧ್ಯವೇ ಇಲ್ಲ.

ಸರಿ, ಹಾಗಿದ್ದರೆ ಗುಣದೊಷಗಳನ್ನು ತಿಳಿದುಕೊಳ್ಳುತ್ತೇನೆ. ನಾರಾಯಣನ ಜ್ಞಾನಕ್ಕೆ ಅಷ್ಟು ಸಾಕು. ಪಾಪಪುಣ್ಯಗಳ ಜ್ಞಾನವೇಕೆ ಬೇಕು? ಎಂಬ ಪ್ರಶ್ನೆ ಪುನಃಪುಟಿಯಬಹುದು.

ಅಲ್ಲೇ ಇರುವುದು ಸ್ವಾರಸ್ಯ ನೋಡಿ. ಎಂದೂ ಪಾಪಪುಣ್ಯಗಳಿರದೆ ಗುಣದೋಷಗಳ ವ್ಯವಸ್ಥೆ ಇರಲು ಸಾಧ್ಯವಿಲ್ಲ. ಪುಣ್ಯಜನಕವಾದದ್ದು ಗುಣ. ಪಾಪಜನಕವಾದದ್ದು ದೋಷ. ಅಥವಾ ದೋಷ ಜನ್ಯಗಳೇ ಪಾಪ. ಗುಣಜನ್ಯಗಳೇ ಪುಣ್ಯ. ಪುಣ್ಯಪಾಪಗಳೇ ಇಲ್ಲವೆಂದರೆ ಗುಣದೋಷಗಳೇ ನಿಲ್ಲಲಾರವು. ಗುಣದೋಷಗಳೇ ಇಲ್ಲವಾದರೆ ಪುಣ್ಯಪಾಪಗಳೂ ಇರಲಾರವು.

ಹಣವೇ ಇಲ್ಲದಿದ್ದರೆ ಮೌಲ್ಯಗಳನ್ನು, ಬೆಲೆಗಳನ್ನು ವ್ಯವಸ್ಥಾಪಿಸಲು ಸಾಧ್ಯವೇ? ಮೌಲ್ಯವೇ ಇಲ್ಲದಿದ್ದರೆ ಅಮೂಲ್ಯವಾದದ್ದನ್ನು ತಿಳಿಯಲು ಸಾಧ್ಯವೇ? ಆದ್ದರಿಂದ ಹಣದಂತೆ ಪುಣ್ಯಗಳು, ಸಾಲದಂತೆ ಪಾಪಗಳು. ಸಾಮಾನ್ಯವಾಗಿ ಜನರು ಹಣವೆಂದರೆ ನೋಟುನಾಣ್ಯಗಳು ನಗ ನಾಣ್ಯಗಳು ಎಂದು ಅರ್ಥೈಸುತ್ತಾರೆ. ಆದ್ದರಿಂದ ನಗನಾಣ್ಯಗಳಿರುವವ ಹಣಶಾಲಿ ಎಂದು ಚಿಂತಿಸುತ್ತಾರೆ.

ಆದರೆ ಅವರ ದೃಷ್ಟಿಪಲ್ಲಟವಾದ್ದರಿಂದ ಅವರಿಗೆ ಹಾಗೆ ಕಾಣುತ್ತದೆ. ವಸ್ತುತಃ ಹಣವೇ ಗುಣವಲ್ಲ. ಗುಣವೇ ಹಣ. ಹಣವೇ ಪುಣ್ಯವಲ್ಲ. ಪುಣ್ಯವೇ ಹಣ. ಅದು ತಿಳಿಯದೆ ಜನ ಪುಣ್ಯವನ್ನು ಕ್ಯಾಶ್ ಮಾಡಲು ಅಪೇಕ್ಷಿಸುತ್ತಾರೆ. ಹೊರತು ಕ್ಯಾಶನ್ನು ಪುಣ್ಯ ಮಾಡಲು ಅಪೇಕ್ಷಿಸುವುದಿಲ್ಲ. ಹಣಶಾಲಿಯನ್ನು ಪುಣ್ಯಶಾಲಿ ಎನ್ನುತ್ತಾರೆ ಹೊರತು ಪುಣ್ಯಶಾಲಿಯನ್ನು ಹಣಶಾಲಿ ಎನ್ನುವುದಿಲ್ಲ. ಹಣ ಎಂದರೆ ನೋಟು

ನಾಣ್ಯಚಿನ್ನಗಳಲ್ಲವೇ ಅಲ್ಲ. ಹಣ ಎಂದರೆ ಪೂರಕಶಕ್ತಿ, ಧಾರಕಶಕ್ತಿ ಮತ್ತು ಆವಶ್ಯಕ ಶಕ್ತಿ. ಆ ಶಕ್ತಿಯ ಸರ್ಟಿಫಿಕೇಟ್‌ಗಳು ನೋಟು ಚಿಲ್ಲರೆಗಲು ಹೊರತು ನೋಟು ಚಿಲ್ಲರೆಗಳೇ ಹಣವಲ್ಲವಲ್ಲ? ವಸ್ತುತಃ ಹಣವೆಂದರೆ ಒಂದು ಸಾಮೂಹಿಕ ಸಂಜ್ಞೆ. ಕೆಲವೊಮ್ಮೆ ಸಾಮೂಹಿಕ ಭ್ರಮೆ ಅನ್ನಬಹುದೋ ಏನೋ?

ಇದು ಸರಿಯಾಗಿ ಅರ್ಥವಾಗಬೇಕಾದರೆ ಈಗಾಗಲೇ ಅರ್ಧಜಾರಿಗೆ ಬಂದ ಮತ್ತು ಮುಂದೆ ಪೂರ್ಣಜಾರಿಗೆ ಬರಬಹುದಾದ ನೋಟುನಾಣ್ಯಗಳ ನಿಷೇಧ ಪೂರ್ಣ ಆಗಬೇಕು. ಬರೇ ಬುಕ್ ಎಂಟ್ರಿ ಮಾತ್ರ ಬರಬೇಕು. ಆವಾಗ ಹಣ ಎಂದರೆ ಇನ್ನೊಬ್ಬರ ಆವಶ್ಯಕತೆಗಳನ್ನು ಪೂರೈಸುವ ಶಕ್ತಿ ಧಾರಕ ಶಕ್ತಿ ಎಂಬ ಅರ್ಥ ಪೂರ್ಣ ಮನದಟ್ಟಾಗುತ್ತದೆ. ಜಗತ್ತಿನ ಸುವ್ಯವಸ್ಥೆಯನ್ನು ಕಾಪಾಡುವ, ಕಾಪಿಡುವ ಶಕ್ತಿ ಎಂಬ ಅರ್ಥ ಕ್ರಮೇಣ ಮನದಟ್ಟಾಗುತ್ತದೆ. ಆದರಂತೆ ಸಾಲ ಎಂದರೆ ವ್ಯವಸ್ಥೆ ಭಂಜಕ ಶಕ್ತಿ ಎಂಬ ಅರ್ಥ ಮೂಡುತ್ತದೆ.

ಚಿಂತನೆ ಈ ರೀತಿ ಸಾಗಿದಾಗ ಪುಣ್ಯ ಎಂದರೂ ಹಣದಂತೆ ಜಗತ್ತಿನ ಸ್ಥಿತಿಸ್ಥಾಪಕ ಶಕ್ತಿ, ಜಗದ್ ವ್ಯವಸ್ಥಾ ಪಾಲಕ ವರ್ಧಕ ಶಕ್ತಿ. ಪಾಪ ಎಂದರೆ ಜಗದ್ ವ್ಯವಸ್ಥಾ ಭಂಜಕ ಶಕ್ತಿ. ಜಗದ್ ವ್ಯವಸ್ಥಾಸ್ಥಂಭಕ ಶಕ್ತಿ ಎಂದರ್ಥವಾಗುತ್ತದೆ. ಈ ಶಕ್ತಿಯ ಮೂಲಗಳೇ ಗುಣದೋಷಗಳು ಎಂದರ್ಥವಾಗುತ್ತದೆ. ನಾರಾಯಣ ಎಂಬ ಶಬ್ದದ ಅರ್ಥವೆಂದರೆ ಜಗದ್‌ವ್ಯವಸ್ಥಾಪಕಗಳಾದ ಗುಣಗಳ ಅರ್ಥಾತ್ ಪುಣ್ಯಗಳ ಅಂತಿಮಸಂಸ್ಥಾಪಕ ಎಂದಾಯ್ತು. ಅವ ಚರಮಸಂಸ್ಥಾಪಕ ಪರಮ ಸಂಸ್ಥಾಪಕ ಎಂದರ್ಥವಾಯ್ತು. ಅಂತಹ ಪರಮತೆಯ ಚರಮತೆಯ ಅನುಭೂತಿ ಬೇಕಾದರೆ ಜಗತ್ತಿನ ಪ್ರಥಮ ವ್ಯವಸ್ಥಾಪಕಗಳಾದ ಗುಣದೋಷಗಳ ಅರ್ಥಾತ್ ಪುಣ್ಯಪಾಪಗಳ ಪ್ರತಿಪತ್ತಿ ಬೇಕೇ ಬೇಕು ತಾನೇ?

ಅದಕ್ಕೋಸ್ಕರವೇ ಜಯಾರ್ಯರು ಧರ್ಮಾದಿಗಳ ಅರ್ಥಾತ್ ಪುಣ್ಯಪಾಪಾದಿಗಳ ಜ್ಞಾನವನ್ನು ನಾರಾಯಣ ಪ್ರತಿಪತ್ತ್ಯಂಗತಯಾ ಎಂದದ್ದು. ಬೆಸ್ಟಿನ ಜ್ಞಾನಕ್ಕೆ ಬೆಟರಿನ ಜ್ಞಾನ ಅಂಗ ಅಂದಂತೆ. ದಶಮದ ಜ್ಞಾನಕ್ಕೆ ನವಮದ ಜ್ಞಾನ ಬೇಕೇಬೇಕಾದಂತೆ.


*With Best Compliments from :*



**"Bedsheet People"**

**"In Textile Field Since 1910"**

***RAJASHREE TEXTILE TRADERS***

Vasudev Enclave, Maidan 4th Cross Road, Mangalore - 575 001.
Phone : 2426624, 2421216, 5266624.




ಅದಕ್ಕೋಸ್ಕರವೇ ಪುಣ್ಯ ಪಾಪಾದಿಗಳನ್ನು ಪುಣ್ಯಪಾಪಾದಿಕಂ ಎಂಬ ಶಬ್ದದಿಂದ ಹೇಳದೆ ಧರ್ಮಾದಿಕಂ, ಪ್ರಾಣಾದಿಕಂ ಎಂದಿದ್ದು ಜಯಾರ್ಯರು.

ಧರ್ಮಶಬ್ದದ ಒಳ ಅರ್ಥ ಧಾರಕತ್ವಾತ್ ಧರ್ಮ ಎಂದು. ಪ್ರಾಣ ಶಬ್ದದ ಅರ್ಥ ಜಗಚ್ಚೇಷ್ಟಕ ಎಂದು. ನಾರಾಯಣ ಶಬ್ದದ ಅರ್ಥ ಧಾರಕಗಳಾದ ಗುಣಗಳಿಗೆ ಅಂತಿಮ ಆಶ್ರಯ ಎಂದು. ಇದೀಗ ಗೊತ್ತಾಗುತ್ತದೆ ಜಗದ್ಧಾರಕಗಳಾದ ಧರ್ಮಾದಿಗಳ, ಪ್ರಾಣಾದಿಗಳ ಜ್ಞಾನ ಜಗದೋದ್ಧಾರಕನಾದ ನಾರಾಯಣನ ಪ್ರತಿಪತ್ತಿಗೆ ಅಂಗ ಹೇಂಗೆ ಎಂದು. ಪುಣ್ಯಾದಿಶಬ್ದಗಳು ಧಾರಕತ್ವ ಎಂಬ ಅರ್ಥಸಂಬಂಧವನ್ನು ಸ್ಫುರಿಸಲಾರವಾದ್ದರಿಂದ ಜಯಾರ್ಯರು ಧರ್ಮಾದಿಕಂ ಪ್ರಾಣಾದಿಕಂ ಎಂಬ ಶಬ್ದವನ್ನೇ ಎತ್ತಿಕೊಂಡದ್ದು ನೋಡಿ.

ಅದಕ್ಕೋಸ್ಕರವೇ ಜಯಾರ್ಯರು ನಾರಾಯಣ ಜ್ಞಾನಾಂಗತಯಾ ಅಥವಾ ನಾರಾಯಣಪತ್ತ್ಯಂಗತಯಾ, ಎನ್ನದೆ ನಾರಾಯಣ ಪ್ರತಿಪತ್ತ್ಯಂಗತಯಾ ಎಂದದ್ದು ನೋಡಿ. ಯಾಕೆಂದರೆ ನಾರಾಯಣ ಶಬ್ದ ಜಗದ್ಧಾರಣಾರ್ಥವನ್ನು ಸ್ಫುರಿಸುವಷ್ಟು ಸ್ಫುಟವಾಗಿ ಬೇರೆ ಶಬ್ದಗಳು ಸ್ಫುರಿಸಲಾರವು. ಅದಕ್ಕೋಸ್ಕರವೇ ಆಚಾರ್ಯರು ಮೊದಲ ಹೆಜ್ಜೆಯಲ್ಲೇ ನಾರಾಯಣಂ ಎಂದು ನಾರಾಯಣ ಶಬ್ದವನ್ನು ವಿಶೇಷ ಪ್ರತಿಪತ್ತಿಗೆ ಎತ್ತಿಹಿಡಿದರು.

ಈ ರೀತಿ ಜಯಾರ್ಯರ ಪ್ರತಿಪದದ ಆಯ್ಕೆಯಲ್ಲೂ ವಿಶೇಷಪ್ರತಿಪತ್ತಿ ಅಡಕವಾಗಿದೆ ನೋಡಿ. ಇದನ್ನೇ ಮಂತ್ರಾಲಯ ಪ್ರಭುಗಳು 'ಪ್ರತ್ಯಕ್ಷರಂ ಪ್ರತಿಪದಂ ಅನೇಕಾಕೂತಗರ್ಭಿತಾ! ಪ್ರತಿಭಾತಿ ಸುಧಾಥಾಪಿ ಗ್ರಂಥಾಲ್ಪತ್ವಾಯ ನೋಚ್ಯತೇ ಎಂದು ಸೂಚಿಸಿದ್ದು! (ಮುಂದುವರಿಯುವುದು)


**MODERN INTERIORS & FURNITURE** Ph.: 2523504

**Opp. : Sanskrit College, Maruthi Veethika, Udupi - 576 101**

*Specialists in :*
- Interior Decoration work and Furnishings.
- Steel & Wooden Furniture.
- Sofa sets of different designs
- Computer Furniture and chairs of different Designs
- Kurlon & Duroflex Mattress and many more.

-: ಶುಭಾಶಯಗಳೊಂದಿಗೆ :-

**ಸದಾನಂದ ಶೇಟ್ ಜುವೆಲ್ಲರ್ಸ್**
ಬಡಗುಪೇಟೆ, ಉಡುಪಿ - 576 101.
ಫೋನ್: 2522667; 2522668

**ನ್ಯೂ ಸದಾನಂದ ಶೇಟ್ ಜುವೆಲ್ಲರ್ಸ್**
ಎಸ್.ಎಂ.ಎಸ್.ಪಿ. ಕಾಂಪ್ಲೆಕ್ಸ್, ಉಡುಪಿ.
ಫೋನ್ : 2522866



# ಪಂಪಾಸಂದೇಶ

ತುರುಕರ ಭಾಷೆಯಲ್ಲಿ ಮಾತನಾಡಿ ತನ್ನ ನಿರ್ಭಿಡತೆಯಿಂದ ವಿಶಾಲಹೃದಯತೆಯಿಂದ ದಿವ್ಯಸಂದೇಶದಿಂದ ದಿಲ್ಲಿ ಖಿಲ್ಜಿಸುಲ್ತಾನನ ಹೃದಯವನ್ನು ಸೂರೆಗೊಂಡು ತತ್‌ಕ್ಷಣ ಅರ್ಧರಾಜ್ಯವನ್ನೇ ಪಾರಿತೋಷಕವಾಗಿ ಪಡೆದವರು ಆಚಾರ್ಯ ಶ್ರೀಮಧ್ವರು.

ಅದೇ ರೀತಿ ವಿಶ್ವಭ್ರಾತೃತ್ವದ ಸಂದೇಶವನ್ನು ತನ್ನ ಪವಾಡದ ಮೂಲಕ ಎತ್ತಿತೋರಿಸಿದವರು ತನ್ನ ಅನೇಕ ಮ್ಲೇಂಛಭಕ್ತರೊಂದಿಗೆ ಆಂಗ್ಲಅಧಿಕಾರಿ 'ಸರ್ ಥಾಮಸ್ ಮನ್ರೋ'ವನ್ನು ಅನುಗ್ರಹಿಸಿದ ಮಂತ್ರಾಲಯ ಮಹಾಪ್ರಭುಗಳು.

ಅಂತಹ ಸಂದೇಶದ ಉಗಮಸ್ಥಾನ ನರವಾನರ ಸಮುದಾಯಕ್ಕೆ ಸಖ್ಯ ಏರ್ಪಡಿಸಿದ ಆಂಜನೇಯ ಸ್ವಾಮಿಯ ಅವತಾರಭೂಮಿಯಾದ ಹಂಪಿ.

ಹ್ಯಾಪಿಯಾಗಬೇಕಾಗಿರುವ ಹಂಪಿ ಇಂದು ಪಾಪಿಜನರ ಹಿಪ್ಪಿಯಾಗಿದೆ. ತಾನು ನೀಡಿದ ವಿಶ್ವಸಂದೇಶದ ಜೊತಗೆ ಹಂಪಿ ಇಂದು ತಿಪ್ಪೆಗೆ ಎಸೆಯಲ್ಪಟ್ಟಿದೆ.

ತಲೆಕೆಳಗಾದ ಪಾಪಂ ಪಂಪಾ ಆಗಿದೆ ಎಂಬ ಶ್ರೀಮದ್‌ವಾದಿರಾಜರ ವರ್ಣನೆ ಪುನಃ ಇಂದು ತಲೆಕೆಳಗಾಗಿದೆ. ಹಂಪಿ ಪಾಪದ ಕೊಂಪೆಯಾಗಿದೆ. ಹಂಪೆಯ ಪುನರುತ್ಥಾನವಾಗಬೇಕು. ಹಂಪೆ ನೀಡಿದ ವಿಶ್ವಭ್ರಾತೃತ್ವದ ಸಂದೇಶವು ಪುನರುಜ್ಜೀವಿತಗೊಳ್ಳಬೇಕು.

ಈ ದೃಷ್ಟಿಯಲ್ಲಿ ಮಂತ್ರಾಲಯ ಮಹಾಮಠದ ಪೀಠಾಧಿಪತಿಗಳಾದ ಶ್ರೀಮತ್ ಸುಶಮೀಂದ್ರ ತೀರ್ಥರು ಶ್ರೀಮದ್‌ವ್ಯಾಸರಾಜಮಠೀಯ ಯತಿದ್ವಯರ ದಿವ್ಯೋಪಸ್ಥಿತಿಯಲ್ಲಿ ಶ್ರೀರಘುನಂದನ ತೀರ್ಥರ ಪಂಚಶತಮಾನೋತ್ಸವನಿಮಿತ್ತ ಸರ್ವಧರ್ಮಸಮ್ಮೇಳನ, ವಿಶ್ವಭ್ರಾತೃತ್ವಸಮ್ಮೇಳನ ಆಯೋಜಿಸಿದ್ದು ಅತ್ಯಂತ ಅರ್ಥಪೂರ್ಣ ಮತ್ತು ಅತ್ಯಂತ ಅಭಿನಂದನೀಯ.

ನಮಗೆ ಅತ್ಯಂತ ಪ್ರಿಯವಾದ ಈ ವಿಶ್ವಭ್ರಾತೃತ್ವ ಸಮ್ಮೇಳನಕ್ಕೆ ಮಾಧ್ವಪರಂಪರೆಯಲ್ಲಿ 'ಸು' ಮತ್ತು 'ಇಂದ್ರ' ನಾಮಗಳ ಪರ್ಯಾಯ ಪರಂಪರೆಯ ಪ್ರತಿನಿಧಿಗಳಾದ ಶ್ರೀಮತ್‌ಸುಶಮೀಂದ್ರರ ಆತ್ಮೀಯ ಆಮಂತ್ರಣವನ್ನು ನಾವು ಶ್ರೀಮತ್‌ಸುಗುಣೇಂದ್ರರು ಆದರದಿಂದ ಸ್ವೀಕರಿಸಿ ದೂರದ ಅಮೆರಿಕದಿಂದ ಧಾವಿಸಿಬಂದಿರುತ್ತೇವೆ.

**ಇತ್ತೀಚೆ ಹಂಪಿಯಲ್ಲಿ ಮಂತ್ರಾಲಯ ಮಹಾಮಠದ ಶ್ರೀಮತ್ ಸುಶಮೀಂದ್ರರು ಆಯೋಜಿಸಿದ ಸರ್ವಧರ್ಮಗಳ ವಿಶ್ವಭ್ರಾತೃತ್ವ ಸಮ್ಮೇಳನದಲ್ಲಿ ಭಾಗವಹಿಸಿದ**

## ಶ್ರೀ ಶ್ರೀ ಸುಗುಣೇಂದ್ರ ತೀರ್ಥ ಶ್ರೀಪಾದರು

**ನೀಡಿದ ಸಾರ ಸಂದೇಶ ಸಾರ.**

ಮುಖಪುಟ ಲೇಖನ

# ಹಯಶೀರ್ಷೋ ಮಾಂ ಪಥಿ ದೇವಹೇಳನಾತ್

ಗೋವತ್ಸ

ವಾದಿರಾಜರಿಗೆ ಭಗವಂತ ಅನುಗ್ರಹಿಸಿದ ದಿವ್ಯ ರೂಪವೇ ಹಯಗ್ರೀವ. ಅವರ ಮೆಚ್ಚಿನ ರೂಪವೂ ಕೂಡಾ. ವಾದಿರಾಜರಿಗೆ ದಿವ್ಯಜ್ಞಾನವನ್ನು ಕರುಣಿಸಿದ ರೂಪವು. ( ಆಧಾರ : ಸರ್ವ ವಿದ್ಯಾನಾಂ)

ಲೋಕದಲ್ಲಿ ಯಾರ್‍ಯಾರನ್ನೋ ಸ್ತುತಿಸುತ್ತೇವೆ. ಯಾರ್‍ಯಾರನ್ನೋ ಹೊಗಳಿ ಅಟ್ಟಕ್ಕೇರಿಸುತ್ತೇವೆ. ಲಂಚವನ್ನೂ ಕೊಡುತ್ತೇವೆ. ನಮ್ಮ ಕೆಲಸ ಸಾಧಿಸಿಕೊಳ್ಳಲಿಕ್ಕೆ ಕಂಡ ಕಂಡಲ್ಲಿ ಅಡ್ಡ ಬೀಳುತ್ತೇವೆ. ಆದರೆ ನಮಗೆ ಏನೂ ಪ್ರಯೋಜನ ವಾಗುವುದೇ ಇಲ್ಲ. ವಾದಿರಾಜರು ಇದೇ ಮಾತನ್ನು ಹೇಳಿದ್ದಾರೆ.

**ಕಸ್ಯ ಕಸ್ಯ ಪ್ರಿಯಂಬ್ರೂಮಃ ಸ್ತುಮಃ ಕಂಕಂ ಪದೇ ಪದೇ ।**

**ಕಸ್ಮೈ ಕಸ್ಮೈ ದಿಶಾಮೋಽರ್ಥಃ ಕಸ್ಮಾದ್ವಾ ಅಸ್ಮತ್ ಪ್ರಯೋಜನಂ ॥**

ನಮ್ಮ ಕೆಲಸ ಸಾಧಿಸಬೇಕಾದ್ರೆ ಕೇವಲ ಹಯಗ್ರೀವನ ಒಲುಮೆ ಒಂದೇ ಸಾಕು. ಅವನನ್ನೇ ಎಲ್ಲರೂ ಭಜಿಸಿ. ಇದಕ್ಕೆ ಸಾಕ್ಷಿ ನಾವೇ ಎಂದು ಶಪಥದಿಂದ ಹೇಳಿದ್ದಾರೆ. (ಹಯಗ್ರೀವ ದೇವಂ ಉಪಾಸ್ಯೈವಕೃತಿನಃ)

ಭಕ್ತಿಯಿಂದ ಸ್ತುತಿಯಿಂದ, ವಿರಕ್ತ್ಯಾ ಭಜಿಸುವ ಜನರಿಗೆ ನಾಶವಿರದ ಸಂಪತ್ತನ್ನು ಸುರಿಸುವ, ದರ್ಪದಿಂದ ಭಗವತ್ ವಿಮುಖರಾದ ಕುಜನರ ಸಂಪತ್ತನ್ನ ಕಸಿಯುವ ಸೃಷ್ಟಿ, ಸ್ಥಿತಿ, ಲಯಗಳನ್ನ ನಡೆಸುತ್ತಾ, ಆನಂದದ ಸೆಲೆಯಾದ ಮನಸ್ಸಿನಲ್ಲಿ ನಿರಂತರ ಸ್ಮರಣೆಯನ್ನ ಜಾಗ್ರತಗೊಳಿಸುತ್ತಿರುವ ಆ ಹಯಮುಖಹರಿಗೆ ಇದೋ ನಮನ.

**ಮನಸಿ ಧೃತಕಥಾವಿಸ್ಮೃತೌ ಸ್ಮಾರಕಾಯ**

'ಈಶಾವಾಸ್ಯಂ', ಅಂಬಲಪಾಡಿ, ಉಡುಪಿ – 576 103, ದೂರವಾಣಿ : 0820–2521047

*With Best Compliments from :*

**VIJAYA METALS**

Behind Shiroor Mutt, Badagupet, Udupi - 1

**Phone : H.O. 2522543 Branch : 2523643 Resi. : 2524001**

**DEALERS IN :**

*Stainless Steel Copper Silver, Pooja Articles etc.*